4. ಪ್ರಕಟಣೆ

ಉಪಾಧ್ಯಕ್ಷರು :- ಈಗ ಒಂದು ಪ್ರಕಟಣೆ ಇದೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ 2007ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕಕ್ಕೆ ಯಾವುದೇ ತಿದ್ದುಪಡಿಗಳಿಲ್ಲದೇ ಸಹಮತಿಯನ್ನು ನೀಡಿದೆ ಎಂದು ತಿಳಿಸಿರುತ್ತಾರೆ.

5. ಗಣಿ ಹಗರಣದ ಬಗ್ಗೆ ತನಿಖೆ ನಡೆಸುತ್ತಿರುವ ಭಟ್ ಕಮಿಷನನ್ನು ರದ್ದುಪಡಿಸಿರುವ ಬಗ್ಗೆ. ಮುಂದುವರೆದ ಚರ್ಚೆ

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) :-ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಮ್ಮ ನಾಲ್ಕು ಜನ ನಾಯಕರುಗಳು ಈ ಯು.ಎಲ್.ಭಟ್ ರಾಜೀನಾಮೆಯನ್ನೊ, ಇಲ್ಲಾ ಬದಲಾವಣೆಯೋ ಅದೇನು ಎನ್ನುವುದನ್ನು ನಮ್ಮ ಎಂ.ಪಿ.ಪ್ರಕಾಶ್ ಅವರು ಆ ಗೌಪ್ಯವನ್ನು ಈ ರಾಜ್ಯಕ್ಕೆ ತಿಳಿಸುತ್ತೇವೆಂದು ತಿಳಿಸಿದ್ದಾರೆ. ಒಂದು, ನಮ್ಮೆಲ್ಲರ ಕಾಂಗ್ರೆಸ್ ಪಕ್ಷದ ಒಟ್ಟಾರೆ ಹೋರಾಟ ಏನೆಂದರೆ ಜನಾರ್ಧನ ರೆಡ್ಡಿಯವರು ಪ್ರಸ್ತಾವನೆ ಮಾಡಿದ್ದು ಅವತ್ತು ಕೂಡ ಸಿಬಿಐ ಗೆ ವಹಿಸಬೇಕು ಎನ್ನುವುದು. ಇವತ್ತು ಕೂಡ ಅದನ್ನು ಸಿಬಿಐ ಗೆ ವಹಿಸಬೇಕು ಎನ್ನುವುದು. ನಾವು ಅದನ್ನು ಸಿಬಿಐ ಗೆ ವಹಿಸಬೇಕೆಂದು ಬೇಡಿದೆವು. ಆ ರೀತಿ ಬೇಡಿದಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇದನ್ನು ಯು.ಎಲ್.ಭಟ್ ಅವರ ಕೈಯಲ್ಲಿ ವಹಿಸಿ ನ್ಯಾಯವನ್ನು ಒದಗಿಸಿಕೊಡುತ್ತೇನೆಂದು ಹೇಳಿ ಯು.ಎಲ್.ಭಟ್ ಕಮಿಷನ್ ಅನ್ನು ನೇಮಕ ಮಾಡಿದರು. ನಾವು ಯಾರೂ ಸಹಕಾರ ಕೊಡಲಿಲ್ಲ, ಅದು ನಮ್ಮ ಪಕ್ಷದ ತೀರ್ಮಾನದ ವಿಚಾರ. ಆದರೆ ಇವತ್ತು ನಾವು ಏಕೆ ಇದನ್ನು ಹೆಚ್ಚಿಗೆ ಪ್ರಸ್ತಾವನೆ ಮಾಡುತ್ತಿದ್ದೇವೆಂದರೆ ಇವತ್ತು ನೀವು ಇದನ್ನು ಲೋಕಾಯುಕ್ತಕ್ಕೆ ವಹಿಸಿದ್ದೀರಿ. ಲೋಕಾಯುಕ್ತಕ್ಕೆ ವಹಿಸಿರುವಂಥ ಸಂದರ್ಭದಲ್ಲಿ ಲೋಕಾಯುಕ್ತದ terms of reference ಅನ್ನು ತಾವೇ ನೋಡಿಕೊಳ್ಳಬೇಕು. ಈ ರಾಜ್ಯದ ಜನತೆ ವಿರೋಧ ಪಕ್ಷ ಏನು ಬಯಸಿತ್ತು, ತಾವೇನು ಮಾಡಿದ್ದೀರಿ ಎನ್ನುವುದನ್ನು ತಾವು ಈ ಸಂದರ್ಭದಲ್ಲಿ ತಮ್ಮ terms

of reference ಅನ್ನು ತಾವು ಸರಿಯಾದ ರೀತಿಯಲ್ಲಿ ನೋಡಿಕೊಂಡರೆ, ಬಹುಶಃ ನೀವು ಈ ರಾಜ್ಯಕ್ಕೆ ನ್ಯಾಯವನ್ನು ಕೊಡುತ್ತಿದ್ದೀರೋ, ಇಲ್ಲವೋ ಎನ್ನುವುದು ಬಹುಶಃ ಅರ್ಥವಾಗುತ್ತದೆ. ಈಗ ಒಂದು ವಿಚಾರವನ್ನು ತಮಗೆ ಹೇಳುವುದಕ್ಕೆ ನಾನು ಬಯಸುತ್ತೇನೆ. ತಾವು ಬಹಳ ನಂಬಿಕೆಯನ್ನು ಇಟ್ಟು ಯು.ಎಲ್.ಭಟ್ ಅವರ ಕಮೀಷನ್ ಅನ್ನು ನೇಮಕ ಮಾಡಿದಿರಿ. ನಮ್ಮದು ವಿರುದ್ಧವಾದ ಹೇಳಿಕೆ ಇದ್ದರೂ ಕೂಡ ಯು.ಎಲ್.ಭಟ್ ಅವರ ಬಗ್ಗೆ ನಂಬಿಕೆ ಇಲ್ಲ ಎಂದು ಹೇಳಿದ ಸಂದರ್ಭದಲ್ಲೂ ಕೂಡ ಯು.ಎಲ್.ಭಟ್ ಅವರು ವಾದವನ್ನು ಮಂಡಿಸಿದ್ದನ್ನು, ನಾವು ಮಧ್ಯದಲ್ಲಿ ಒಂದು ಪೇಪರ್ ಸ್ಟೇಟ್‌ಮೆಂಟ್ ಕೊಟ್ಟಿದ್ದನ್ನು ಬಹುಶಃ ನಾವೆಲ್ಲ ಗಮನಿಸಲೇಬೇಕಾಗುತ್ತದೆ. ಎನ್‌ಕ್ವೈರಿ ಬಗ್ಗೆ ಅವರು ಒಂದು statement note ಏನು ಕೊಟ್ಟರು ಎಂದರೆ : " The commission is of the opinion that the investigation by the State Police Officer into the allegation made against the Head of the State Government and his collegues could lead to embarrassment to all the concerned and unlikely to create confidence in the public in spite of the high level of the integrity of the state of the police officer. The Commission has therefore decided to have the investigation done by the officer of the Central Government functionary under the Delh Police Establishment Act 1946 that is the officer attached to the Central Bureau of Investigation." Accordingly, the Central Government is being addressed to make available the services of the CBI officer to carry out such investigation. ಅಂದರೆ ನೀವು ಯಾರ ಮೇಲೆ ನಂಬಿಕೆಯನ್ನು ಇಟ್ಟು ಒಂದು enquiry ಆಗುತ್ತದೆ. ನಾನು ಈ ಅಗ್ನಿ ಪರೀಕ್ಷೆಯಿಂದ ಹೊರಗಡೆ ಬರುತ್ತೀನಿ ಎಂದು ತಾವೇನು ಬಯಸಿದ್ದಿರಿ, ಅವರೇ ಇದನ್ನು ನಾನು enquiry ಮಾಡುವುದಕ್ಕಾಗುವುದಿಲ್ಲ, ನನಗೆ ಸಿಬಿಐ ಆಫೀಸರ್ ಬೇಕು ಎಂದು ಹೇಳಿದ

ಮೇಲೆ, ಇದಕ್ಕಿಂತ ಇನ್ನೇನು ಉದಾಹರಣೆ ಬೇಕು ಎಂದು ಹೇಳಿ ನನಗಂತೂ ಅರ್ಥವಾಗುತ್ತಿಲ್ಲ. ಇವತ್ತು ನಾವು present notification ಗೆ ಬರೋಣ. ತಾವೇನು present notification ಅನ್ನು ಮಾಡಿದ್ದೀರಿ, ಆ ವಿಚಾರದ ಬಗ್ಗೆ ನಾವು ಇದನ್ನು ಚರ್ಚೆ ಮಾಡುವುದಕ್ಕೆ ನೋಡಿದರೆ ಈ present notification ನಲ್ಲಿ ನಾವು ಹೇಳಿದ ಬೇಡಿಕೆಗಳ ಬಗ್ಗೆ ಇಲ್ಲ. ನಾವು ವಿರೋಧ ಪಕ್ಷವಾಗಿರಲಿ, ಸದನದಲ್ಲಿ ಆಗಿರಲಿ, ಮಾಧ್ಯಮ ಆಗಲಿ ಬರೆದಂಥ ಬೇಡಿಕೆ ಬಗ್ಗೆ ಸಿಬಿಐ ಬಗ್ಗೆ ಆಗಲಿ, ಏನು 150 ಕೋಟಿ ರೂ.ಬಗ್ಗೆ ತನಿಖೆಯಾಗಬೇಕೆಂದು ಹೇಳಿ ಬಯಸಿದ್ದೇವೆ, ಅದರ ಬಗ್ಗೆ ಒಂದು ನಮ್ಮ ನಾಯಕರುಗಳು ಹೇಳಿದಂತೆ ಒಂದು ಅಕ್ಷರ ಕೂಡ ಎಲ್ಲೂ ಸೇರದೇ ಅದರ ಬದಲುನ witch-hunting ನಡೆಯುತ್ತಿದೆಯೇ ಹೊರತು ಕಾಂಗ್ರೆಸ್ ನವರ ಮೇಲೆ, ಕಾಂಗ್ರೆಸ್ ನ ಬೆಂಬಲಿಗರ ಮೇಲೆ "ಏನಾದರೂ ನಾವು ತೊಂದರೆಯನ್ನು ಕೊಡುವುದಕ್ಕೆ ಸಾಧ್ಯವಾ ಎಂದು" ಹೇಳಿ ಒಂದು ಪ್ರಯತ್ನ ಇವತ್ತು ನಡೆಯುತ್ತಿದೆ. ಒಂದನ್ನು ಮಾನ್ಯ ಎಂ.ಪಿ.ಪ್ರಕಾಶ್ ಸಾಹೇಬರು ತಾವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಹೇಳಬೇಕು. ಬಹುಶಃ ಉತ್ತರವನ್ನು ತಾವೇ ಕೊಡುತ್ತೀರಿ ಎಂದು ನಾನು ನಂಬಿಕೊಂಡಿದ್ದೇನೆ. ಏಕೆಂದರೆ ಮುಖ್ಯಮಂತ್ರಿಗಳು ಇಲ್ಲದೇ ಇರುವ ಸಂದರ್ಭದಲ್ಲಿ ತಾವೇ ಉತ್ತರ ಕೊಡುತ್ತೀರಿ. "The scope of investigation and findings by Hon'ble Lokayukta shall cover the period commencing from 01.01.2000 to 22.07.2006" ಎಂದು ಇದೆ. ಏಕೆ ಅಧ್ಯಕ್ಷರೆ? ಈ ಟೈಮ್? ಈ ಡೇಟ್ ಏಕೆ? As on today ಎಂದು ಏಕೆ ಆಗಬಾರದು? ಜನತಾ ದಳದ ಸರ್ಕಾರದಲ್ಲಿದ್ದಂಥ 94 ರಿಂದ ಇದ್ದ ಸರ್ಕಾರದಲ್ಲಿ ಏನೇನು ಆಯಿತು ಎನ್ನುವುದು ಅದೇಕೆ ತನಿಖೆಯಾಗಬಾರದು? ಬರೀ ಕಾಂಗ್ರೆಸ್ ಪಕ್ಷ ಬಂದಂಥ ಸಂದರ್ಭದಲ್ಲಿ ಮಾತ್ರ ಏಕೆ ತನಿಖೆಯಾಗಬೇಕು? ಮತ್ತು ಆ specific date ಏಕೆ ಬಂತು? ಬಹುಶಃ ನೀವು ಏಕೆ ಆ ಡೇಟನ್ನು ಹೇಳಿದಿರಿ, ಅದೇನು ನಿಗೂಢವಾದ ಡೇಟ್ ಎನ್ನುವುದನ್ನು ತಾವು ಈ ಸಂದರ್ಭದಲ್ಲಿ ಹೇಳಬೇಕು. ಇದಾದ ಮೇಲೆ ನಮ್ಮ ರಮೇಶ್ ಕುಮಾರ್ ಅವರು ಹೇಳಿದಂತೆ recommendation ಅನ್ನು ಮಾಡಬೇಕಾದರೆ, "The Karnataka Lokayukta Act, the

following action taken are with the general specification approval of the public servant specified there for through investigation, submitting a report to the Government with a specific recommendation." ಎಂದು ಹೇಳಿ, ಕೊನೆಗೆ ಎಲ್ಲ ಹಕ್ಕನ್ನು, ಎಲ್ಲ ಶಕ್ತಿಯನ್ನು ಕೂಡ ಮತ್ತೆ ತಾವೇ ಸರ್ಕಾರದವರೇ ಇಟ್ಟುಕೊಂಡಿದ್ದೀರಿ. ಲೋಕಾಯುಕ್ತರಿಂದ ತನಿಖೆ ಮಾಡಿಸುವುದಕ್ಕೆ ತಾವು ಪ್ರಯತ್ನವನ್ನು ಮಾಡುತ್ತಿದ್ದೀರಿ. ಇದರಿಂದ ಏನು ಪ್ರಯೋಜನ? ತಾವು ಈಗಾಗಲೇ ಬೇಕಾದಷ್ಟು ತನಿಖೆಯನ್ನು ಮಾಡಿಸಿದ್ದೀರಿ. ಈ ಲೋಕಾಯುಕ್ತ ಇಲ್ಲದೇನೆ ನಾವೇನು ಈ ಆರೋಪವನ್ನು ಕಾಂಗ್ರೆಸ್ ಪಕ್ಷ ಮಾಡಿತು, ಜನಾರ್ಧನ ರೆಡ್ಡಿಯವರು ಮಾಡಿದರು, ಮಾಡಿದ ಮೇಲೆ ಅನೇಕ ರೀತಿಯಾದ ತನಿಖೆಗಳು ನಡೆದೇ ಇದೆ. ಒಂದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುವುದೇನೆಂದರೆ, ನಮ್ಮ ಮುಖ್ಯಮಂತ್ರಿಗಳು ಬಹಳ honest ಆಗಿದ್ದಂಥ ಸಂದರ್ಭದಲ್ಲಿ ಅಗ್ನಿ ಪರೀಕ್ಷೆಯಿಂದ ಹೊರಬರುವುದಕ್ಕೆ ಒಂದು ಅವಕಾಶ ಇತ್ತು. ಏನಾದರೂ ಮಾಡಿ ತಾವು ಈ ಅಗ್ನಿ ಪರೀಕ್ಷೆಯಿಂದ ಹೊರಗಡೆ ಬರಬೇಕು, ಈ ರಾಜ್ಯದ ಜನತೆಗೆ 'ನಾನು ಇದರಲ್ಲಿ ಭಾಗಿಯಾಗಿಲ್ಲ' ಎಂಬುದನ್ನು ತೋರಿಸಬೇಕೆನ್ನುವುದಕ್ಕೆ ಅವರಿಗೆ ಒಂದು ಅವಕಾಶವಿತ್ತು. ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಮಾನ್ಯ ಪ್ರಕಾಶ್‌ರವರಿಗೆ ನೆನಪಿಸುವುದಕ್ಕೆ ಬಯಸುತ್ತೇನೆ. ರಮೇಶ್‌ಕುಮಾರ್‌ರವರು ನೆನಪು ಮಾಡಿದರು. ಚನ್ನಿಗಪ್ಪನವರ inspection ಬಗ್ಗೆ ಖರ್ಗೆ ಸಾಹೇಬರು ನೆನಪು ಮಾಡಿದರು. ಅವರ Inspection Report ಅನ್ನು ತಾವು ಗಮನಿಸಬೇಕಾಗುತ್ತದೆ. ಮತ್ತು ವಿಧಾನಪರಿಷತ್ತಿನಲ್ಲಿ ಮತ್ತು ವಿಧಾನಸಭೆಯಲ್ಲಿ ಮುಖ್ಯಮಂತ್ರಿಗಳು ಬೇಕಾದಷ್ಟು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಈ forest enquiry ಬಗ್ಗೆ, Minister ಸಾಹೇಬರು ಹೋಗಿ enquiry ಮಾಡಿಕೊಂಡು ಬಂದಂಥ ಸಂದರ್ಭದಲ್ಲಿ ಬೇಕಾದಷ್ಟು illegal activities ನಡೆಯುತ್ತಿದೆ. ಇದರಿಂದ ಸಾವಿರಾರು ಕೋಟಿ ರೂಪಾಯಿಗಳು ನಮಗೆ loss ಆಗುತ್ತಿದೆ. ಇದರ ಬಗ್ಗೆ ದೊಡ್ಡ ತನಿಖೆ ನಡೆಸಬೇಕೆಂದು ಬೇಕಾದಷ್ಟು reports ಕೊಟ್ಟಿದ್ದಾರೆ, FIR ಕೊಟ್ಟಿದ್ದಾರೆ. ಯಾರ ಮೇಲೆ FIR ಕೊಟ್ಟಿದ್ದಾರೆ? ಬೇಕಾದಷ್ಟು

ಸಂಸ್ಥೆಗಳ ಮೇಲೆ ಗೌರವಾನ್ವಿತ ಅರಣ್ಯ ಸಚಿವರು ಮುಖ್ಯಮಂತ್ರಿಗಳಿಗೆ ಒಂದು ದೊಡ್ಡ ಆರೋಪ ಪಟ್ಟಿಯನ್ನು ಸಲ್ಲಿಸಿದ್ದಾರೆ. ಸಲ್ಲಿಸಿದಂತಹ ಸಂದರ್ಭದಲ್ಲಿ ನಮ್ಮ ಅನೇಕ ಶಾಸಕರುಗಳು ವಿಧಾನಪರಿಷತ್ತಿನಲ್ಲಿ ಮತ್ತು ವಿಧಾನಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದ ಸಂದರ್ಭಗಳಲ್ಲಿ, ಶ್ರೀ ಹೆಚ್.ಕೆ.ಪಾಟೀಲರು ಒಂದು ಪ್ರಶ್ನೆ ಹಾಕಿದಾಗ, ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದರೆ, 'ನಾವು ಇಲ್ಲಿಯವರೆಗೂ 1053 ಕೇಸ್‌ಗಳನ್ನು identify ಮಾಡಿದ್ದೇವೆ, 265 ಕೇಸ್‌ಗಳನ್ನು register ಮಾಡಿದ್ದೇವೆ, 336 ಕೇಸ್‌ಗಳಿಗೆ fines levy ಮಾಡಿದ್ದೇವೆ. 3.36 ಕೋಟಿ ರೂಪಾಯಿಗಳಷ್ಟು fine ತೆಗೆದುಕೊಂಡಿದ್ದೇವೆಂದು ಹೆಚ್.ಕೆ.ಪಾಟೀಲರಿಗೆ ಹೇಳುತ್ತಾರೆ. ಇನ್ನೊಂದು ಕಡೆ ನಮ್ಮ ಎಸ್.ರವಿಯವರಿಗೆ Forest Minister ಹೇಳುತ್ತಾರೆ. '50,617 ಕೇಸ್‌ಗಳನ್ನು forest encroaches ಎಂದು ನಾವು ದಾಖಲಿಸಿದ್ದೇವೆ. ಅದರಲ್ಲಿ 745 ಕೇಸ್‌ಗಳನ್ನು illegal mining ಎಂದು ದಾಖಲಿಸಿದ್ದೇವೆ' ಎಂದು ಹೇಳುತ್ತಾರೆ. ನಮ್ಮ ಮಿತ್ರರಾದ ಮಹದೇವ್‌ರವರು ಒಂದು ಕಡೆ ಪ್ರಶ್ನೆ ಕೇಳಿದಂತಹ ಸಂದರ್ಭದಲ್ಲಿ, ಬಳ್ಳಾರಿಯಲ್ಲಿ ಒಂದು ಕಡೆ 78 ಕೇಸ್, ಇನ್ನೊಂದು ಕಡೆ 259 ಕೇಸ್ ಆಗಿದೆ, 1 ಕೋಟಿ 43 ಲಕ್ಷ ರೂಪಾಯಿಗಳಷ್ಟು fine ಅನ್ನು ನಾವು ಹಾಕಿದ್ದೇವೆಂದು ಹೇಳುತ್ತಾರೆ. ಇದರ ಜೊತೆಗೆ, ತನಿಖೆ ಪ್ರಾರಂಭವಾಗುತ್ತಿದ್ದಂತೆಯೇ, ನಮ್ಮ ಕನಕಪುರಕ್ಕೂ ಹೋಗುತ್ತಾರೆ. ಅಲ್ಲಿ ತನಿಖೆ ಮಾಡುತ್ತಾರೆ. ತನಿಖೆ ಮಾಡಿ 20–30 ಜನರ ಮೇಲೆ ಕೇಸ್ ಹಾಕುತ್ತಾರೆ. ಆದರೆ, ನಮ್ಮ Forest Minister ರವರು report ಕೊಟ್ಟಂಥ ಸಂದರ್ಭದಲ್ಲಿ ಅವರು ಅನೇಕ ದೊಡ್ಡ ದೊಡ್ಡ ಸಂಸ್ಥೆಗಳಿಂದ ಬಗ್ಗೆ ಇಷ್ಟಿಷ್ಟು ಸಾವಿರಾರು ಕೋಟಿ ರೂಪಾಯಿಗಳು ಲಾಸ್ ಆಗುತ್ತಿದೆಯೆಂದು ಮುಖ್ಯಮಂತ್ರಿಗಳಿಗೆ report ಕೊಟ್ಟಂಥ ಸಂದರ್ಭದಲ್ಲಿ ಹೇಳುತ್ತಾರೆ, ಇಲ್ಲಿ ಗಣಿ ಉದ್ದಿಮೆದಾರರು ವಾಣಿಜ್ಯ ಉದ್ಯಮಿಗಳಿಂದ ಬಹಳಷ್ಟು ನಷ್ಟ ಆಗಿದೆ, ಪರಿಶೀಲನೆ ಸಮಯದಲ್ಲಿ ಈ ಕೆಳಕಂಡ ಗಣಿ ಉದ್ದಿಮೆಗಳವರಿಗೆ ಅನುಮತಿ ಇರುವ ಪ್ರದೇಶಕ್ಕಿಂತಲೂ ಹೆಚ್ಚುವರಿ ಅರಣ್ಯ ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ ಎಂದು ಹೇಳಿ MMI, BIDP, BBM, Ranga Gudda, Kumaraswamy Mining, ಎಂದು ಹೇಳಿ ಅನೇಕ ಸಂಸ್ಥೆಗಳ ಬಗ್ಗೆ ಹೇಳಿದ್ದಾರೆ.

ಆದರೆ, ಪ್ರಕಾಶ್ ಸಾಹೇಬರೆ, ಇಷ್ಟೆಲ್ಲಾ ಸಂಸ್ಥೆಗಳು ಎಂದರೆ forest ನಲ್ಲಿ 50 ಸಾವಿರ ಕೇಸ್‌ಗಳು register ಆಗುತ್ತಿವೆ, ಬೇಕಾದಷ್ಟು ಕಂಪನಿಗಳ ಮೇಲೆ ಕೇಸ್‌ಗಳು register ಆಗುತ್ತಿದೆ. ಎಲ್ಲಾ ಕಂಪನಿಗಳ ಮೇಲೂ ಕೇಸ್ ಹಾಕಿದಂತಹ ಸಂದರ್ಭದಲ್ಲಿ ಒಂದಷ್ಟು fine recovery ಆಗುತ್ತದೆ, ಒಂದಷ್ಟು FIR ಆಗುತ್ತದೆ. Fine recovery ಹಾಕಿದ್ದನ್ನು, FIR ಹಾಕಿದ ದಾಖಲೆಗಳನ್ನು ನಾನು ನಿಮಗೆ ಕೊಡುತ್ತೇನೆ. ಆದರೆ, ಕನಕಪುರದಲ್ಲಿ register ಆದಂತಹ ಸಂದರ್ಭದಲ್ಲಿ ಮಾತ್ರ, ಕನಕಪುರದಲ್ಲಿ ಕೇಸ್ register ಮಾಡಿದಾಗ ಕೊನೆಗೆ ನನ್ನ ಶ್ರೀಮತಿ ಉಷಾ ಶಿವಕುಮಾರ್ ಮೇಲೆ, ನನ್ನ ತಂಗಿ ಮೇಲೆ ಮತ್ತು ಡಾ॥ ಗ್ಯಾನ್‌ಚಂದ್ ಅವರ wife, 75 ವರ್ಷದ ಹೆಣ್ಣು ಮಗಳು, ಅವರ ಮೇಲೆ ಮತ್ತು ನನ್ನ ಕುಟುಂಬದವರನ್ನು ಮಾತ್ರ select ಮಾಡಿ charge sheet ಹಾಕುವಾಗ ಅವರನ್ನು ಮಾತ್ರ ಕೇಸ್‌ನಲ್ಲಿ ಸೇರಿಸಿದಂತಹ ದಾಖಲೆ ಇದಾಗಿದೆ. ಏಕಿದು? 50 ಸಾವಿರ ಜನರ ಮೇಲೆ ನೀವು ಕೇಸ್ ಹಾಕುವುದಕ್ಕಾಗಲಿಲ್ಲ, ಬರೀ ಯಾಕೆ specific ಆಗಿ ಒಂದು ಕುಟುಂಬಕ್ಕೆ ಮಾತ್ರ, ಕಾಂಗ್ರೆಸ್ ಬೆಂಬಲಿಗರನ್ನು ಮಾತ್ರ ನೀವು search ಮಾಡಿ vindictive attitude ತೋರಿಸುತ್ತಿದ್ದೀರಿ? ಇದರಿಂದ ಏನು ಲಾಭ? ಚನ್ನಿಗಪ್ಪನವರು ಏನು ಒಂದು report ಕೊಟ್ಟರು, ಆ report ಮೇಲೆ ತನಿಖೆ ಮಾಡಿ ಇಂತಹವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದಾಗ., ಒಬ್ಬರ ಮೇಲೂ ಕೇಸ್ ಹಾಕುವುದಕ್ಕಾಗಲಿಲ್ಲ! ಒಬ್ಬರನ್ನೂ arrest ಮಾಡುವುಕ್ಕಾಗಲಿಲ್ಲ! ಒಬ್ಬರ ಮೇಲೂ ತನಿಖೆ ಮಾಡುವುದಕ್ಕಾಗಲಿಲ್ಲ! ಒಬ್ಬರ quarry ಅನ್ನು ಅವತ್ತಿನಿಂದಲೇ ನಿಲ್ಲಿಸುವುದಕ್ಕಾಗಲಿಲ್ಲ! ಒಂದು ನೋಟೀಸ್ ಕೊಡುವುದಕ್ಕಾಗಲಿಲ್ಲ. U.B.Singh ಅವರನ್ನು ಕಳುಹಿಸಿದರು. ಒಂದು ದಿವಸವೂ ಅವರು ಬಳ್ಳಾರಿಗೆ ಹೋಗುವುದಕ್ಕಾಗಲಿಲ್ಲ. ಒಬ್ಬರ ಮೇಲೂ ಒಂದು ಕ್ರಮ ಕೈಗೊಳ್ಳುವುದಕ್ಕಾಗಲಿಲ್ಲ. ಬರೀ ಡಿ.ಕೆ.ಶಿವಕುಮಾರ್, ಡಿ.ಕೆ.ಶಿವಕುಮಾರ್ ಕುಟುಂಬ, ಕಾಂಗ್ರೆಸ್, ಕಾಂಗ್ರೆಸ್ ಬೆಂಬಲಿಗರು, ಕನಕಪುರ ಕ್ಷೇತ್ರ, ಸಾತನೂರು ಕ್ಷೇತ್ರ. ಇವರ ಮೇಲೆ ಮಾತ್ರ ಇಡೀ ರಾಜ್ಯದಲ್ಲಿರುವ ಕಾನೂನು, ಅಧಿಕಾರವನ್ನೆಲ್ಲಾ ಉಪಯೋಗಿಸಿಕೊಂಡು ಒಂದು ಕುಟುಂಬದ ಮೇಲೆ ಕೇಸ್ ಹಾಕಿ ಸಂತೋಷಪಡುತ್ತಿರಬೇಕಾದರೆ, ಯಾಕೆ ಬೇಕು

ನಿಮಗೆ ಈ ಲೋಕಾಯುಕ್ತ? ಕೇಸ್ ಈಗಾಗಲೇ ಮಾಡುತ್ತಿದ್ದೀರಲ್ಲ? ಲೋಕಾಯುಕ್ತ ಇಲ್ಲದೇ ನೀವು ಎಲ್ಲಾ ತರಹದ ಕೇಸ್‌ಗಳನ್ನು ದಾಖಲೆ ಮಾಡುತ್ತಿದ್ದೀರಲ್ಲ. ಲೋಕಾಯುಕ್ತದಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಮ್ಮ terms of reference ನಲ್ಲಿ ಬರೀ ನೀವು ಎಲ್ಲವನ್ನೂ separate ಮಾಡಿ ಕೊಡುತ್ತೀರಿ. ನಿಮಗೆ ಶಕ್ತಿ ಇದ್ದಂತಹ ಸಂದರ್ಭದಲ್ಲಿ, ನೀವು ಕೇಸ್ ಹಾಕುವಂತಹ ಸಂದರ್ಭದಲ್ಲಿ, ಏನು ನನ್ನ ಕುಟುಂಬದ ಮೇಲೆ ನೀವು ಗದಾ ಪ್ರಹಾರ ಮಾಡುತ್ತಿದ್ದೀರಿ, ಆ ಗದಾ ಪ್ರಹಾರ ಈ ರಾಜ್ಯದಲ್ಲಿ 50 ಸಾವಿರ ಇದೆಯೆಂದು ತಾವೇನು detect ಮಾಡಿದ್ದೇನೆಂದು ಹೇಳುತ್ತಿದ್ದೀರಿ, ಅವರುಗಳ ಮೇಲೆ ಏಕೆ ನೀವು ಶಕ್ತಿಯನ್ನು ತೋರಿಸುವುದಕ್ಕಾಗುತ್ತಿಲ್ಲ? ಇದಕ್ಕೆ ತಾವು ದಯವಿಟ್ಟು ಉತ್ತರ ಕೊಡಬೇಕು. ನನ್ನ ಮೇಲೆ ತಾವು ಕೇಸ್ ಹಾಕಿದ್ದೀರಿ, ಬಹಳ ಸಂತೋಷ. ನಾವು bail ಏನೂ ತೆಗೆದುಕೊಳ್ಳುವಿದಲ್ಲವೆಂದು, ಅದಕ್ಕೇ ನಾನು ಪ್ರಾರಂಭದಲ್ಲಿ ಹೇಳಿದೆ. ಪರವಾಗಿಲ್ಲ, ಬಳ್ಳಾರಿಗೆ ಹೋದರೂ ಚಿಂತೆ ಇಲ್ಲ, ಬಳ್ಳಾರಿ ಜೈಲಿಗೆ ಹೋದರೂ ಚಿಂತೆ ಇಲ್ಲ. ನನ್ನ ಮನೆಯವರೇನೂ ಕಾಡಿಗೆ ಹೋಗಿ ಕಬ್ಬಿಣವನ್ನು ಕಳ್ಳತನ ಮಾಡಿದವರಲ್ಲ. ನನಗೆ ಗೊತ್ತಿದೆ. ಕೊನೆಗೆ, ನಾವು ಜನರ ಮುಂದೆ ಹೋಗಬೇಕಾಗುತ್ತದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ bullet ಗಿಂತಲೂ ballet ಬಹಳ strong. ಅದನ್ನು ಬೇಕಾದಷ್ಟು ಸಂದರ್ಭದಲ್ಲಿ ನಾನು ನೋಡಿದ್ದೇನೆ. ಈ ರಾಜ್ಯದ ಜನತೆ ನೋಡಿದ್ದಾರೆ. ಆದರೆ, ನಾನು ಹೇಳುವುದು, ಸುಳ್ಳು ಕೇಸನ್ನು, ಒಬ್ಬರ ಮೇಲೆ ಬರೀ ರಾಜಕೀಯದ ವೈಷಮ್ಯ, ದ್ವೇಷವನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಈ ರೀತಿ ಮಾಡಿರುವುದು ನಿಜವಾಗಿಯೂ ಭಗವಂತ ನಿಮಗೆ ಒಳ್ಳೆಯದನ್ನು ಮಾಡುವುದಿಲ್ಲ. ಇದರ ಪರ, ವಿರುದ್ಧ ಯಾವ ರೀತಿ ಹೋರಾಟ ಮಾಡಬೇಕು, ನಮಗೆ ಬೇರೆ ವೇದಿಕೆಗಳಿವೆ, ನಾವು ಹೋರಾಟ ಮಾಡುತ್ತೇವೆ. ಒಂದನ್ನು specific ಆಗಿ ತಾವು ಮುಖ್ಯಮಂತ್ರಿಗಳಿಂದ ಹೇಳಿಸುತ್ತೀರೋ, ಇಲ್ಲವೇ ತಾವೇ ಹೇಳುತ್ತೀರೋ, Forest Minister ಅವರಿಂದ ಹೇಳಿಸುತ್ತೀರೋ, ಬರೀ ಇಷ್ಟು ಜನರ ಮೇಲೆ ಮಾತ್ರ ಏಕೆ ನೀವು ಕೇಸ್ ಹಾಕಿದ್ದೀರಿ? ಇಷ್ಟನ್ನೂ ನೀವೇ ಹೇಳಿದ್ದೀರಿ. ನೀವೇ ಹೇಳಿಕೆಗಳನ್ನು ಕೊಟ್ಟಿದ್ದೀರಿ. ಅಸೆಂಬ್ಲಿಯಲ್ಲಿ ಕೊಟ್ಟಿದ್ದೀರಿ, ಕೌನ್ಸಿಲ್‌ನಲ್ಲಿ ಕೊಟ್ಟಿದ್ದೀರಿ, ಹೊರಗಡೆಯೂ ಹೇಳಿದ್ದೀರಿ, Board of

Directors ಮೇಲೆ ಏಕೆ ನೀವು ಕೇಸ್ ಹಾಕಿಲ್ಲ? ಬೇರೆಯವರ Manager ಅಂತೆ. ಇಲ್ಲೇ ನನ್ನ ಹತ್ತಿರ FIR copies, charge sheet copies ಇವೆ. ಬೇರೆಯವರೆಲ್ಲರೂ ಮ್ಯಾನೇಜರ್‌ಗಳಂತೆ. ದೊಡ್ಡ ದೊಡ್ಡ ಕಂಪನಿಗಳೆಲ್ಲಾ ಮ್ಯಾನೇಜರ್ ಅಂತೆ. State Government Undertakings ಇರಬಹುದು, ಅವರೆಲ್ಲರಿಗೂ ಬರೀ fine ಅಂತೆ, 500 ರೂಪಾಯಿ, ಒಂದು ಸಾವಿರ, ಎರಡು ಸಾವಿರ ರೂಪಾಯಿ fine ಅಂತೆ. ಆದರೆ, ನನ್ನ ಒಂದು ಕುಟುಂಬಕ್ಕೆ ಮಾತ್ರ ಒಬ್ಬರಿಂದ Charge sheet ಹಾಕಿಸಿ, ಇವರನ್ನು arrest ಮಾಡಿಸಬೇಕೆಂದು ತಮ್ಮ ಅಧಿಕಾರಿಗಳನ್ನು ಕಳುಹಿಸುತ್ತಾರೆ. ಬಹುಶಃ, ಇದರ ಬಗ್ಗೆ ಜನರೇ ತೀರ್ಪು ಕೊಡಬೇಕು. ಅಧ್ಯಕ್ಷರೆ, ತಾವೇ ತೀರ್ಪು ಕೊಡಬೇಕು. ಇನ್ನು ನಾನು ಈ ವಿಚಾರಕ್ಕೆ ಬರುತ್ತೇನೆ. ನಾನು ಈ ಸಂದರ್ಭದಲ್ಲಿ date ವಿಚಾರಕ್ಕೆ ಬಂದೆ. Date ವಿಚಾರಕ್ಕೆ ಬರುವ ಮುನ್ನ forest ವಿಚಾರಕ್ಕೆ ಈಗ ಬರೋಣ. ಈಗ ನೀವು ಬೇಕಾದಷ್ಟು ಸಂಸ್ಥೆಗಳ ಮೇಲೆ ಕೇಸ್ ಹಾಕಿರುವಂತಹ ಸಂದರ್ಭದಲ್ಲಿ ನನ್ನ ಒಂದು ಕುಟುಂಬದ ಮೇಲೆ ಮಾತ್ರ ಕೇಸ್ ಹಾಕಿದ್ದೀರಿ, ಬೇರೆ ಕುಟುಂಬಗಳ ಮೇಲೆ ಹಾಕಿಲ್ಲ. ಬೇರೆ ಕಂಪನಿಗಳ ಮೇಲೆ ನೀವು ದ್ವೇಷ, ಆರೋಪ ಮಾಡುವುದಕ್ಕಾಗಿಲ್ಲ, Charge Sheet ಮಾಡುವುದಕ್ಕಾಗಿಲ್ಲವೆಂದು ನಾನು ಹೇಳಿದೆ. ಮೊನ್ನೆ ಇವರು ಹೇಳಿದಂತೆ forest case ಬಂದಿದೆ. ಈ forest case ಹಾಕಿದಂತಹ ಸಂದರ್ಭದಲ್ಲಿ, ಅಧ್ಯಕ್ಷರೆ, ಬಾಲಗಂಗಾಧರನಾಥ ಸ್ವಾಮೀಜಿಯವರ ಮೇಲೂ ಕೇಸ್! ಏಕೆಂದರೆ, ಏನೋ ಒಂದು Political difference ಇತ್ತೆಂದು ಬಾಲಗಂಗಾಧರನಾಥ ಸ್ವಾಮೀಜಿಯವರ ಮೇಲೂ ಒಂದು FIR. ಮತ್ತೆ ಇನ್ನೊಬ್ಬ ಸ್ವಾಮೀಜಿಯವರ ಮೇಲೂ FIR. ನಾನು ಇಲ್ಲಿಗೆ FIR ತಂದಿದ್ದೇನೆ. I have brought the FIR here. ಇಲ್ಲೇ FIR ಇದೆ. ಎಂ.ಪಿ.ಪ್ರಕಾಶ್ ಸಾಹೇಬರಿಗೆ ಗೊತ್ತಿದೆ. ನೋಡಿ, ಇಲ್ಲಿ ಆಗಿರುವುದನ್ನು with FIR, I have come here.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಪೂಜ್ಯ ಭಾವನೆಯಿಂದ ಯಡಿಯೂರಪ್ಪನವರು ಮಠ ಮಾನ್ಯಗಳಿಗೆಲ್ಲಾ ತಮ್ಮ ಗೌರವ ತೋರಿಸಿ ಸರ್ಕಾರದಿಂದ ಮೊದಲನೇ ಸಲ ಧನ ಸಹಾಯ ಮಾಡಿ ಈ ಸರ್ಕಾರದ ಸಾರಥ್ಯ

ವಹಿಸಿರುವವರಾಗಿದ್ದಾರೆ. ಇವರು ಹೇಳುತ್ತಿರುವುದರ ಬಗ್ಗೆ ನನಗೆ ನಂಬಿಕೆ ಇಲ್ಲ, ಸರ್. ಇರಲಾರದು. ನೀವು ಸುಮ್ಮನಿರುತ್ತೀರಾ? ಆ ತರಹವೆಲ್ಲಾ ಮಾಡಿದರೆ ಅವರು ಸುಮ್ಮನಿರುತ್ತಾರೆಯೇ?

ಶ್ರೀ ಕೆ. ಶ್ರೀನಿವಾಸಗೌಡ :- ಅಧ್ಯಕ್ಷರೆ, ಒಂದು ಕಡೆ ಮಠ-ಮಾನ್ಯಗಳ ಸ್ವಾಮೀಜಿಗಳ ಮೇಲೆ ಕೇಸು, ಇನ್ನೊಂದು ಕಡೆ ಮಠ-ಮಾನ್ಯಗಳಿಗೆ ದುಡ್ಡೂ ಕೊಡುವುದು! ಇದೊಂದು ತರಹ ಚೆನ್ನಾಗಿಯೇ ಇದೆ.

ಶ್ರೀ ಡಿ.ಕೆ. ಶಿವಕುಮಾರ್ :- ಈಗ ಕೇಸ್ ಹಾಕಿದ್ದಾರೋ, ಬಿಟ್ಟಿದ್ದಾರೋ ಎಂದು reply ಕೊಡುವಾಗ ಹೇಳುತ್ತಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ಅವರು FIR copy ಕೊಟ್ಟರೂ ಕೂಡ, ನೀವು certify ಮಾಡಿ, ನಂತರ, ಅವರು ಇವರಿಗೆ ಕೊಟ್ಟರು ಎಂದು ಹೇಳಿದರೆ ಮಾತ್ರ ನಾನು ನಂಬುತ್ತೇನೆ. ಇಲ್ಲದೇ ಹೋದರೆ, ಇವರು ತಮಗೆ ಬಂದಿರುವ ಸಿಟ್ಟಿಗೆ ಏನು ಬೇಕಾದರೂ ಹೇಳುವವರೇ. ನೀವು ಆ ತರಹ ಮಾಡುತ್ತೀರೆಂದು ನನಗೆ ನಂಬಿಕೆ ಇಲ್ಲ. ಏಕೆಂದರೆ.....

ಶ್ರೀ ಡಿ.ಕೆ. ಶಿವಕುಮಾರ್ :- ಸ್ವಾಮಿ, FIR ಆಗಿರುವುದು ನಿಜ ತಾನೇ?..... ಇದರ ಪ್ರತಿಯನ್ನು ಮಾನ್ಯ ಗೃಹ ಸಚಿವರಿಗೆ ಕಳುಹಿಸಿಕೊಡುತ್ತಿದ್ದೇನೆ. ದಯವಿಟ್ಟು ಅವರು ಇದನ್ನು ನೋಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ :- 5 ಕೋಟಿ ಮರಗಳನ್ನು ಬೆಳೆಸುತ್ತೇನೆ ಎಂದು ಕಾರ್ಯಕ್ರಮ ಹಾಕಿಕೊಂಡಂತಹ ಸ್ವಾಮೀಜಿಗಳ ಮೇಲೆ ಈ ತರಹ FIR ವೊಂದನ್ನು Forest Conservation Act ಅಡಿಯಲ್ಲಿ ಹಾಕಿದ್ದೀರಿ ಎಂದರೆ ಗತಿಯೇನು? His programme is to plant five crore plants in Karnataka. ಏನು ದುರ್ದೈವ ಇದು? ಕರ್ನಾಟಕ ರಾಜ್ಯದಲ್ಲಿ 5 ಕೋಟಿ ಗಿಡಗಳನ್ನು ಬೆಳೆಸುವ ಕಾರ್ಯಕ್ರಮವನ್ನು ಹಾಕಿಕೊಂಡಿರುವ ಸ್ವಾಮಿಗಳ ಮೇಲೆ Forest Conservation Act ಅಡಿಯಲ್ಲಿ ಕೇಸ್ ಹಾಕುವುದು ಎಂದರೆ ಗತಿಯೇನು?

ಶ್ರೀ ಎನ್. ಚಲುವರಾಯಸ್ವಾಮಿ :- ನೀವೆಲ್ಲಾ ಸ್ವಾಮೀಜಿಗಳ ಮೇಲೆ ಬಹಳ ಸಿಂಪತಿಯನ್ನು ತೋರಿಸುತ್ತಿದ್ದೀರಿ. ಸ್ವಾಮೀಜಿಯವರಿಗೆ ನಿಮ್ಮ ಸಿಂಪತಿ ಅಥವಾ ನಮ್ಮ ಸಿಂಪತಿ ಬೇಕಾಗಿಲ್ಲ. ಅವರು ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಮಾಡಲಿ. ಅದಕ್ಕೆ ಎಲ್ಲರ ಪ್ರೋತ್ಸಾಹ ಇದೆ.

ಶ್ರೀ ಕೆ. ಶ್ರೀನಿವಾಸಗೌಡ :- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಗಹನವಾದಂತಹ ವಿಷಯ. ಪ್ರತಿಯೊಬ್ಬರೂ ಬಹಳ ಗಂಭೀರವಾಗಿ ಚಿಂತನೆ ಮಾಡುವಂತಹ ವಿಷಯವಾಗಿದೆ. ಬಾಲ ಗಂಗಾಧರನಾಥರಂತಹ ಸ್ವಾಮೀಜಿಗಳು, ಶಿವಕುಮಾರ್‌ರಂತಹ ಸ್ವಾಮೀಜಿಗಳು ಈ ರಾಜ್ಯದಲ್ಲಿ ಅವರದೇ ಆದಂತಹ ಮಠ ಮಾನ್ಯಗಳ ಮೂಲಕ, ಅವರ ವಿದ್ಯಾ ಸಂಸ್ಥೆಗಳ ಮೂಲಕ ಅವರು ಅವರದೇ ಆದಂತಹ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾರೆ. ಇಂತಹವರ ಮೇಲೆ ಸರ್ಕಾರ ಕೇಸ್ ಹಾಕಿದೆ ಎಂದರೆ, ಇದು ಪ್ರತಿಯೊಬ್ಬರೂ ಕೂಡ ಗಾಬರಿ ಬೀಳುವಂತಹ ವಿಷಯವಾಗಿದೆ. ಮಾನ್ಯ ಶಿವಕುಮಾರ್‌ರವರು ಮಾನ್ಯ ಗೃಹ ಮಂತ್ರಿಗಳಿಗೆ FIR copy ಯನ್ನೂ ಕೂಡ ಕಳುಹಿಸಿದ್ದಾರೆ. ಒಂದು ಕಡೆ ಅವರು 5 ಕೋಟಿ ಗಿಡಗಳನ್ನು ಬೆಳೆಸಬೇಕು, Forest ಅನ್ನು ಬೆಳೆಸಬೇಕು ಎಂದು ಹೊರಟಿದ್ದಾರೆ. ಅವರು ಎಲ್ಲಿ ಅಗತ್ಯವಿದೆಯೋ ಅಲ್ಲಿ ಅಗತ್ಯವಾದಂತಹ ಎಲ್ಲಾ institutions ಅನ್ನು ಸ್ಥಾಪನೆ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಸ್ವಾಮೀಜಿಯನ್ನೂ ಕೂಡ ಬಿಡದಂತೆ ಕಾಡುವಂತಹ ಗತಿ ಸರ್ಕಾರಕ್ಕೇಕೆ ಬಂತು? ಇದರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಇದುವರೆಗೂ ಕೂಡ ನಮ್ಮ ರಾಜ್ಯದಲ್ಲಿ ಯಾವುದೆ ಸ್ವಾಮಿಗಳ ಮೇಲೆ ಈ ತರಹದ ಆರೋಪಗಳನ್ನು ಮಾಡಿರಲಿಲ್ಲ. ಇವತ್ತು ಬಾಲ ಗಂಗಾಧರನಾಥ ಸ್ವಾಮಿಗಳ ಮೇಲೆ ಈ ತರಹ ಆರೋಪ ಮಾಡಿ FIR ವೊಂದನ್ನು ಹಾಕುವುದೆಂದರೆ, ಇದೊಂದು ಸರ್ಕಾರ ತಲೆ ತಗ್ಗಿಸುವಂತಹ ಕೆಲಸವೆಂದು ನಾನಾದರೂ ಭಾವಿಸುತ್ತೇನೆ. ಈಗಲೇ ಅದಕ್ಕೆ ಬೇಕಾಗಿರುವಂತಹ ಕ್ರಮವನ್ನು ಜರುಗಿಸಬೇಕು ಇಲ್ಲದಿದ್ದರೆ ಅದನ್ನು withdraw ಮಾಡುವಂತಹ ಕೆಲಸವಾದರೂ ಆಗಬೇಕು. ಅವರಿಂದ ತಪ್ಪಾಗಿದ್ದರೆ ಅವರನ್ನು ಜೈಲಿಗೆ ಕಳುಹಿಸಿ. ಅಂತಹ ಪರಿಸ್ಥಿತಿ ಇದ್ದರೆ, ಅದಕ್ಕೂ ಕೂಡ ನಾವು ಒಪ್ಪೋಣ. ಆದರೆ ಒಬ್ಬ ಸ್ವಾಮಿಗಳಿಗೆ

ಈ ತರಹ ಒಬ್ಬ FIR ಹಾಕಿ ಅವಮಾನ ಮಾಡುವಂತಹ ಕೆಲಸ ಎಂದೆಂದಿಗೂ ಆಗಿಲ್ಲ. ಇಂದು ಈ ತರಹದ ಅವಮಾನವಾಗಿದೆ. ಇದರ ಬಗ್ಗೆ ನಾವು ನೇರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ :- Reply ಕೊಡುವಾಗ ಅದರ ಬಗ್ಗೆ ಹೇಳುತ್ತಾರೆ. ಈಗ ಅದರ ಬಗ್ಗೆ ಚರ್ಚೆ ಬೇಡ. ಈ ವಿಚಾರ ಬೇಡ ಬಿಡಿ, ಅದು ಆಯಿತು. ನಾನು ಸುಮ್ಮನೆ example ವೊಂದನ್ನು quote ಮಾಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ :- ಅಧಿಕಾರಿಗಳ ಜೊತೆಗೆ ಸೇರಿ, ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂದು ಯಾರಾದರೂ ಷಡ್ಯಂತ್ರ ಮಾಡಿದ್ದಾರೆಯೇ ಎಂಬ ಬಗ್ಗೆಯೂ ಸರ್ಕಾರ enquiry ಮಾಡಬೇಕಾಗುತ್ತದೆ. ಏಕೆಂದರೆ ಮಠದಲ್ಲಿ ಕುಳಿತಂತಹ ಸ್ವಾಮೀಜಿಯವರ ಮೇಲೆ case register ಆಗುತ್ತದೆ ಎಂದರೆ.....

(ಗೊಂದಲ)

ಮಾನ್ಯ ಶಿವಕುಮಾರ್‌ರವರು FIR copy ತರುತ್ತಾರೆ ಎಂದರೆ ಇದರ ಹಿಂದಿರುವ ರಾಜಕೀಯ ಪಿತೂರಿಗಳೂ ಸಹ ಹೊರಬರಬೇಕಾಗುತ್ತದೆ. ಈ ಸರ್ಕಾರಕ್ಕೆ ಕೆಟ್ಟ ಹೆಸರು ತರಬೇಕೆಂದು ಕೆಲವರು ಇರಬಹುದು. ಅದರ ಡೇಟ್ ಯಾವತ್ತು ಎಂಬುದನ್ನು ಅವರು ಹೇಳಬೇಕು. ಇದರ ಹಿಂದಿರುವ ಪಿತೂರಿ ಬಗ್ಗೆ ಮಾನ್ಯ ಸಚಿವರು enquiry ಮಾಡಿಸಬೇಕಾಗುತ್ತದೆ. ಏಕೆಂದರೆ, ಕೋಟಿಗಟ್ಟಲೆ ಸಸಿಗಳನ್ನು ನೆಡುವಂತಹ ಒಬ್ಬ ಮಠಾಧಿಪತಿ ಅವರಾಗಿದ್ದಾರೆ. ಇಡೀ ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಡುಗಳನ್ನು ಬೆಳೆಸುವಂತಹ concept ಕೊಟ್ಟಿರುವಂತಹ ಒಬ್ಬ ಮನುಷ್ಯನ ಮೇಲೆ ಇವತ್ತು FIR ಹಾಕಲಾಗಿದೆ ಎಂದರೆ, ಇದರ ಹಿಂದಿರುವ ಜಾಲವೇನು?.....

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :-.... ಈ ಸರ್ಕಾರದಲ್ಲಿ ನೀವು ಏಕೆ ಇದ್ದೀರಿ?

(ಗೊಂದಲ)

ಉಪಾಧ್ಯಕ್ಷರು :- ಒಂದು ನಿಮಿಷ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :- .... ತಪ್ಪು ಮಾಡಿರುವ ಸಾವಿರಾರು ಕಂಪನಿಗಳ ಮೇಲೆ ಕೇಸ್ ಹಾಕುವುದಿಲ್ಲ. ಬರೀ ಬಾಲ ಗಂಗಾಧರನಾಥ ಸ್ವಾಮೀಜಿ, ಡಿ.ಕೆ.ಶಿವಕುಮಾರ್ ಕುಟುಂಬ, ಕಾಂಗ್ರೆಸ್ ಕುಟುಂಬದವರ ಮೇಲೆ ಮಾತ್ರ ಕೇಸ್ ಹಾಕುವುದಕ್ಕೆ ಈ ಸರ್ಕಾರವಿದೆಯೇ?

(ಗೊಂದಲ)

ನಿನ್ನೆ ಅಥವಾ ಮೊನ್ನೆ ಮಾನ್ಯ ಚನ್ನಿಗಪ್ಪನವರು ಇಲ್ಲಿ reply ಕೊಟ್ಟರು. ಚಿಕ್ಕನಾಯಕನಹಳ್ಳಿ ವಿಭಾಗದಲ್ಲಿ at present no illegal mining is going on in the reserve forest of Gubbi and Chikkanayakanahalli Taluks of Tumkur forest division. However, earlier following 10 cases of illegal mining which are going on have been stopped ಎಂದು ಹೇಳಿ, ಜ್ಯೋತಿ ಬ್ರದರ್ಸ್, ಕರ್ನಾಟಕ ಮೈನ್, ಉಪೇಂದ್ರ ಮೈನಿಂಗ್, ಬಿ.ಆರ್.ಶಿವಕುಮಾರ್ ಸಿಂಗ್, ಮೋಹನ್ ಎಂದು ಒಂದಷ್ಟು ಹೆಸರುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಕನಕಪುರದಲ್ಲಿ ನೀವು ಹೇಗೆ ನನ್ನ ಕುಟುಂಬದ ಮೇಲೆ ಸೇಡು ತೀರಿಸಿಕೊಳ್ಳಲು Board of Directors ಮೇಲೆ ಕೇಸ್ ಹಾಕಿದಿರೋ, ಅದೇ ರೀತಿಯಲ್ಲಿ ಇಲ್ಲೂ ಕೇಸ್ ತೀರ್ಮಾನ ಆಗಬೇಕಾಗಿತ್ತಲ್ಲವೇ? You have arrested them. Why there is a special case? Forest Minister ಮಾನ್ಯ ಮುಖ್ಯಮಂತ್ರಿಗಳಿಗೆ ವರದಿ ಕೊಟ್ಟು ಒಂದು ವರ್ಷದ ಮೇಲಾಗಿದೆ. ಹೀಗಿದ್ದರೂ ಈ ಅವಧಿಯಲ್ಲಿ ಒಬ್ಬರನ್ನೂ ನೀವು ಅರೆಸ್ಟ್ ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಎನ್ನುವುದಾದರೆ ಹೇಗೆ? ಬರೇ ಕಾಂಗ್ರೆಸ್‌ನವರ ಮೇಲೆ ಕೇಸ್ ಹಾಕಿದ್ದೀರಿ. ಇದು ರಾಜಕಾರಣವೇ? ದ್ವೇಷವೇ? ಇದೇನು? I am ready to digest this. ಇದನ್ನು digest ಮಾಡಿಕೊಳ್ಳಲಿಕ್ಕೆ ನಾನು ತಯಾರಿದ್ದೇನೆ. ನನ್ನ ಮೇಲೆ ನೀವು ಕೇಸ್ ಬುಕ್ ಮಾಡಿ, ಅರೆಸ್ಟ್ ಮಾಡಿ, ಏನು ಬೇಕಾದರೂ ಮಾಡಿ. ಅದಕ್ಕೆ ನಾನು ತಯಾರಿದ್ದೇನೆ. ನನ್ನ ಹೆಂಡತಿಯನ್ನು ರಾಮನಗರದ ಜೈಲಿಗೆ ಕಳುಹಿಸಲು ನಾನು

ತಯಾರಿದ್ದೇನೆ. ನನಗೆ ಯಾವ ರೀತಿಯಾಗಿ ಹೋರಾಟ ಮಾಡಬೇಕೆಂಬುದು ಗೊತ್ತಿದೆ. ಆದರೆ ಈ blackmail ಗೆ ಕಾಂಗ್ರೆಸ್‌ನ ಜನ ಹೆದರುವುದಿಲ್ಲ. ಇದರ ಬಗ್ಗೆ ನಾವು ಹೋರಾಟ ಮಾಡುತ್ತೇವೆ. ಇದು ನ್ಯಾಯದ ಯುದ್ಧ. ಇದನ್ನು ಧರ್ಮದ ಯುದ್ಧ ಎಂದು ಕರೆಯಲಿಕ್ಕೆ ನಾನು ತಯಾರಿಲ್ಲ. ನ್ಯಾಯ ಏನಿದೆ ಎಂಬುದನ್ನು ಈ ರಾಜ್ಯದ ಜನ ತೀರ್ಮಾನ ಮಾಡುತ್ತಾರೆ. ನಾನು ಒಂದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಿಂದ ಅವರಿಗೆ ಬಹಳ ನೋವಾಗಬಹುದು. ಇದು ಎಲ್ಲರಿಗೂ ಗೊತ್ತು. ಇದು ಮಾನ್ಯ ಅಶೋಕ್‌ಗೆ ಗೊತ್ತು, ಮಾನ್ಯ ಚೆಲುವರಾಯಸ್ವಾಮಿಗೆ ಗೊತ್ತು ಎಂದು ನಾನು ಹೇಳುವುದಿಲ್ಲ. ಮಾನ್ಯ ಎಂ.ಪಿ.ಪ್ರಕಾಶ್‌ರವರಿಗೂ ಕೂಡ ಇದು ಗೊತ್ತು ಎಂದು ನಾನು ಹೇಳುವುದಿಲ್ಲ. ಒಬ್ಬ DFO ಅಣ್ಣಯ್ಯ ಎಂಬುವವನನ್ನು ಕರೆಸಿ, ಅವನನ್ನು in-charge ಎಂದು ಅಲ್ಲಿಗೆ ಹಾಕಿಸಿ, ಅವನ ಕೈಯಲ್ಲಿ ದ್ವೇಷದ ರಾಜಕಾರಣವನ್ನು ಮಾಡಿಸಿದ್ದೀರಿ. ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಅವನು suspend ಆಗಿದ್ದ. ಆಗ ಅವನು ಸ್ವಾಮೀಜಿಯವರ ಬಳಿಗೆ ಹೋಗಿ, ನನಗೆ ಈ ವಿಚಾರದಲ್ಲಿ ಏನಾದರೂ ಸಹಾಯ ಮಾಡಿ ಎಂದು ಕೇಳಿದನಂತೆ. ಆಗ ಅದಕ್ಕೆ ಸ್ವಾಮೀಜಿಯವರು ಒಪ್ಪಲಿಲ್ಲವಂತೆ. ಅದಕ್ಕಾಗಿ ಅವನನ್ನು ಅಲ್ಲಿಗೆ ಕರೆಸಿ, ಯಾರ‍್ಯಾರು ಏನೇನು ಸೇರಿ ಕುತಂತ್ರ ಮಾಡಿದರೋ ಗೊತ್ತಿಲ್ಲ ಅವರ ಮೇಲೆ ಒಂದು FIR ಹಾಕಿ ನೋಡೋಣ ಎಂದು ಅವರ ಮೇಲೆ FIR ಯನ್ನು ಹಾಕಿಸಲಾಯಿತು. ಇಲ್ಲಿಯವರೆಗೂ ಈ ಸರ್ಕಾರ ಅದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ಬಹುಶಃ ಈ ಸರ್ಕಾರಕ್ಕೆ ಕಣ್ಣು ಇದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಉಪಾಧ್ಯಕ್ಷರೇ ಆಲೋಚನೆ ಮಾಡಬೇಕು. ನಾನು ಇಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿ ಇಲ್ಲಿಗೆ ಬಿಡುತ್ತೇನೆ. ಎರಡನೆಯ ವಿಚಾರ ಏನೆಂದರೆ,.....

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಸ್ವಾಮೀಜಿಗಳು ಮತ್ತು ಸರ್ಕಾರಗಳ ನಡುವೆ ಯಾವ ಯಾವ ತರಹದ ಮುಜುಗರಗಳು ಉಂಟಾಗುತ್ತವೆ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ದಿವಂಗತ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದರು, ಮಾನ್ಯ ಎಂ.ಪಿ.ಪ್ರಕಾಶ್‌ರವರು ಮಂತ್ರಿಗಳಾಗಿದ್ದರು,

ಶ್ರೀಮಾನ್ ಸೋಮಶೇಖರ್‌ರವರು ಕಂದಾಯ ಇಲಾಖೆ ವಹಿಸಿಕೊಂಡಿದ್ದರು, ಮಾನ್ಯ ದೇವೇಗೌಡರು ಪದಚ್ಯುತರಾಗಿದ್ದರು. ಬಾಲ ಗಂಗಾಧರನಾಥ ಸ್ವಾಮೀಜಿಯವರ ಸಂಸ್ಥೆಗೆ ಸಂಬಂಧಿಸಿದ ಕೆಲವು ಜಮೀನುಗಳ ಫೈಲ್‌ಗಳು ನ್ಯಾಯಬದ್ಧವಾಗಿಯೇ ಅಲ್ಲಲ್ಲೇ ಉಳಿದು ಹೋಗಿದ್ದವು, ಕೆಲವು ಅಡಚಣೆಗಳಿದ್ದವು. ಮಾನ್ಯ ಸೋಮಶೇಖರ್‌ರವರು, ಇವತ್ತು ಅವರು ಸದನದಲ್ಲಿ ಇಲ್ಲ, with due respect, we should recollect, ಸ್ವಲ್ಪ ಆ ಮನುಷ್ಯ ಸ್ವಾಭಿಮಾನಿ. ತಮ್ಮದೇ ಆದಂತರ ಶೈಲಿಯಲ್ಲಿ ಕೆಲಸ ಮಾಡತಕ್ಕಂಥ ಮನುಷ್ಯ ಅವರಾಗಿದ್ದರು. ಆತ ಇದಕ್ಕೇನು ಅಂತಹ special attention ಏನೂ ಕೊಟ್ಟಿರಲಿಲ್ಲ. ಇದು ಒಂದು ರೀತಿಯ ಅಪಾರ್ಥಕ್ಕೆ ಈಡಾಗಿ, ವೀರಶೈವ ಸಮಾಜಕ್ಕೆ ಸೇರಿದಂತಹ ಪಟೇಲ್‌ರು ಮುಖ್ಯಮಂತ್ರಿ, ಅಧಿಕಾರವನ್ನು ಕಳೆದುಕೊಂಡಿದ್ದಂತಹ ಮಾನ್ಯ ದೇವೇಗೌಡರು ಮತ್ತೊಂದು ಕಡೆಗೆ, ಸ್ವಾಮೀಜಿ ಒಕ್ಕಲಿಗ ಸಮಾಜದ ಸ್ವಾಮೀಜಿ, ಮಂತ್ರಿಗಳು ಪರಿಶಿಷ್ಟ ಜಾತಿಗೆ ಸೇರಿದವರು. ತಮಗೆ ನೆನಪಿದೆ. ಎಷ್ಟೊಂದು ಕಾಳಜಿಯಿಂದ ಮಾನ್ಯ ಪಟೇಲರು, ಆ ರೂಲ್ಸ್ ಗೀಲ್ಸ್ ಕಿತ್ತು ಬಿಸಾಕಪ್ಪ, ಸುಮ್ಮನೆ ಅದನ್ನು ಸ್ಟ್ರಿಕ್ಟ್ ಆಗಿ ನೋಡುವುದು ಬೇಡ, ನಮ್ಮನ್ನು ತಪ್ಪು ತಿಳಿದುಕೊಳ್ಳುವುದು ಬೇಡ, ಅದೇನು ಇದೆಯೋ ತೆಗೆದುಕೊಂಡು ಬನ್ನಿ, ನನ್ನ ಮೈಮೇಲೆ ಹಾಕಿಕೊಳ್ಳುತ್ತೇನೆ. ನಾನು ಅದಕ್ಕೆ ಸಹಿ ಹಾಕುತ್ತೇನೆ. ಎಂದು ಹೇಳಿ ಜಮೀನುಗಳ ಮಂಜೂರಾತಿಯನ್ನು ಮಾಡುತ್ತಾರೆ. ಮಾನ್ಯ ಪ್ರಕಾಶ್‌ರವರಿಗೆ ಇದೆಲ್ಲಾ ಗೊತ್ತಿದೆ. You are a witness. ಔದಾರ್ಯ ಎಂದರೆ, ಅಧಿಕಾರದ ಉಪಯೋಗವೆಂದರೆ ಆ ರೀತಿ ಹೋಗಬೇಕು, ಈ ರೀತಿಯಲ್ಲ.

ಶ್ರೀ ಎನ್.ಚಲುವರಾಯಸ್ವಾಮಿ :– ಸ್ವಾಮೀಜಿಯವರ ವಿಚಾರದಲ್ಲಿ, ಮಠ ಮಾನ್ಯಗಳ ವಿಚಾರದಲ್ಲಿ ಈ ಸರ್ಕಾರ ಸಹ ನಿಮಗಿಂತ ಒಂದು ಹೆಜ್ಜೆ ಮುಂದೆ ಹೋಗಿದೆ. ಈ FIR ಬಗ್ಗೆ ನನಗೆ ಮಾಹಿತಿ ಗೊತ್ತಿಲ್ಲದಿರುವುದರಿಂದ.....

ಶ್ರೀ ಡಿ.ಕೆ. ಶಿವಕುಮಾರ್ :– ಏಕೆ ನೀವು ಆ ಆಫೀಸರ್ ಅನ್ನು suspend ಮಾಡಿಲ್ಲ? ಏಕೆ ಅವನ ಮೇಲೆ ಕ್ರಮ ತೆಗೆದುಕೊಂಡಿಲ್ಲ? ಏಕೆ ನೀವು ಇನ್ನೂ ಅವನನ್ನು ಇಟ್ಟುಕೊಂಡಿದ್ದೀರಿ? ಏಕೆ ನೀವು ಅವನನ್ನು ರಕ್ಷಣೆ ಮಾಡುತ್ತಿದ್ದೀರಿ?

ಸ್ವಾಮೀಜಿ ಮೇಲೆ ಅವನನ್ನು ಉಪಯೋಗಿಸಿಕೊಂಡು ದ್ವೇಷದ ರಾಜಕಾರಣವನ್ನು ನೀವು ಮಾಡುತ್ತಿದ್ದೀರಾ?

ಶ್ರೀ ಎನ್.ಚಲುವರಾಯಸ್ವಾಮಿ :- ಯಾರನ್ನೂ ಈ ಸರ್ಕಾರ ಇಲ್ಲಿ ರಕ್ಷಣೆ ಮಾಡುತ್ತಿಲ್ಲ. ಯಾವ ಅಧಿಕಾರಿಗೂ ಈ ಸರ್ಕಾರ certificate ಕೊಡುತ್ತಿಲ್ಲ. ನನಗೆ ಇದರ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ನಾನು ಅದರ ಬಗ್ಗೆ ಮಾತನಾಡುತ್ತಿಲ್ಲ. ಆದರೆ ಚುಂಚನಗಿರಿ ಇರಬಹುದು, ದೇಶಿಕೇಂದ್ರ ಇರಬಹುದು, ಇನ್ನೊಂದು ಸ್ವಾಮೀಜಿ ಇರಬಹುದು, ಯಾವ ಸ್ವಾಮೀಜಿಗಳ ಬಗ್ಗೆಯೂ, ಯಾವ ಮಠಾಧೀಶರ ಬಗ್ಗೆಯೂ ಬಹಳ ಅವಹೇಳನವಾಗಿ ಅಥವಾ ಅವರ ವಿರುದ್ಧವಾದಂತಹ ತೀರ್ಮಾನವನ್ನು ಈ ಸರ್ಕಾರ ತೆಗೆದುಕೊಂಡಿಲ್ಲ. ಎಲ್ಲಾ ಸರ್ಕಾರಗಳಿಗಿಂತ ಹೆಚ್ಚಿನ ಆದ್ಯತೆಯನ್ನು, ಮಠಕ್ಕೆ ಪ್ರೋತ್ಸಾಹವನ್ನು ಈ ಸರ್ಕಾರ ಕೊಡುತ್ತಿದೆ. ಅವರ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿಕೊಂಡು ಬಂದಿದೆ. ಈ ವಿಚಾರದಲ್ಲಿ ಸದನದಲ್ಲಿರುವ ಮಾನ್ಯ Home Minister ರವರು ಉತ್ತರ ಕೊಡುತ್ತಾರೆ. Mostly ಅದು withdraw ಆಗಿರಬೇಕು, ಅದರ ಮೇಲೆ ಕ್ರಮವೂ ಆಗಿರಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ನನಗೆ ಪೂರ್ತಿ ಮಾಹಿತಿ ಗೊತ್ತಿಲ್ಲದಿರುವುದರಿಂದ ಆ ಬಗ್ಗೆ ಸದನದಲ್ಲಿ ನಾನು ಹೆಚ್ಚು ಹೇಳುವುದಿಲ್ಲ. ಯಾವುದೋ ಒಂದು ಹಂತದಲ್ಲಿ ಕೆಲವು ಇಂತಹ ಅಧಿಕಾರಗಳಿದ್ದಾರೆ. ನೀವೇ ಹೇಳಿದಿರಿ, ಮಾನ್ಯ ಸೋಮಶೇಖರ್‌ರವರು ಹಿಂದೆ ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ, ನಮ್ಮ ತಾಲ್ಲೂಕಿನ ಲ್ಯಾಂಡ್ ಅನ್ನು, ಅವರು ಇರತಕ್ಕಂಥ ಆದಿಚುಂಚನಗಿರಿ ಮಠದ ಲ್ಯಾಂಡ್ ಅನ್ನೇ ಅವರು ಅಲಾಟ್ ಮಾಡದೇ withdraw ಮಾಡತಕ್ಕಂಥ ಪರಿಸ್ಥಿತಿಗೆ ಹೋದಾಗ,.....

ಶ್ರೀ ಜೆ.ಸಿ. ಮಾಧುಸ್ವಾಮಿ :- ಸೋಮಶೇಖರ್ ವಿಷಯ ಚರ್ಚೆ ಯಾಗಬೇಕೆಂದರೆ, ಅವರು ಈ ಸದನದಲ್ಲಿ ಇಲ್ಲ. ಸೋಮಶೇಖರ್‌ರವರು ಕಾನೂನುಬದ್ಧವಾಗಿ ಮಾಡುವವರೋ, ವಿರುದ್ಧವಾಗಿ ಮಾಡುವವರೋ, ಟೇಬಲ್ ಮೇಲೆ ದಾಖಲೆಗಳನ್ನು ಇಡಬೇಕಾಗುತ್ತದೆ. You cannot take names.

ಅಣ್ಣಯ್ಯನವರದೂ ಅಷ್ಟೇ. ಅಣ್ಣಯ್ಯನವರು ಕಾನೂನು ಪ್ರಕಾರ ಮಾಡಿದ್ದಾರೋ, ಕಾನೂನಿಗೆ ವಿರುದ್ಧವಾಗಿ ಮಾಡಿದ್ದಾರೋ, ಅದನ್ನೂ ಮಾಡಬೇಕಾಗುತ್ತದೆ. ಅಣ್ಣಯ್ಯನವರು ಒಂದು FIR ಹಾಕಿದ್ದಾರೆ ಎನ್ನುತ್ತಿದ್ದಂತೆಯೇ, ಶಿವಕುಮಾರ್‌ರವರು ಹೇಳಿದಂತೆ ಅವರನ್ನು suspend ಮಾಡಲು ಆಗುವುದಿಲ್ಲ. ಸೋಮಶೇಖರ್‌ರವರು ಒಂದು file ಅನ್ನು stall ಮಾಡಿದರು ಎಂದರೆ why did he stall ಎನ್ನುವುದನ್ನೂ ನೋಡಬೇಕಲ್ಲ.

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ :– ಆದರೆ, ಇದನ್ನು advantage ಆಗಿ ತೆಗೆದುಕೊಳ್ಳುವುದು ಬೇಡ. ಜನತಾದಳ, ಬಿಜೆಪಿಯವರು ಸೇರಿಕೊಂಡು.....

(ಗೊಂದಲ)

ಶ್ರೀ ಎನ್.ಚಲುವರಾಯಸ್ವಾಮಿ :– .... advantage ಆಗಿ ತೆಗೆದುಕೊಳ್ಳುವಂಥ ಅವಶ್ಯಕತೆ ಇಲ್ಲ. ಇದರ ಬಗ್ಗೆ ಮಾಹಿತಿ ನೋಡಿ ಅವರು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ರಮೇಶ್‌ಕುಮಾರ್‌ರವರು ಜೆ.ಹೆಚ್.ಪಟೇಲರನ್ನು complement ಮಾಡುವುದಕ್ಕಾಗಿ ಆಡಿದ ಮಾತನ್ನು ತಿರುಚಿ, ಸೋಮಶೇಖರ್‌ರವರು ಅಲ್ಲಿ ಮಂಜೂರಾತಿಗೆ ತಡೆದಿದ್ದರು ಎಂದು ಏಕೆ ಅನಿಸಬಾರದು? No. I kept quite. ಸೋಮಶೇಖರ್‌ರವರ ಹೆಸರು ತೆಗೆದುಕೊಂಡು ನಾನೇಕೆ.....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಒಂದು ನಿಮಿಷ. Mr.Patel was so magnanimous ಎನ್ನುವ ಪದ ಬಳಸುವುದಕ್ಕೆ ಉದಾಹರಣೆ ತೆಗೆದುಕೊಂಡದ್ದು ಬಿಟ್ಟರೆ, Somashekar was never illegal. Mr. Somashekar can never do illegal things..... ಸೋಮಶೇಖರ್‌ರವರು ತಪ್ಪು ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂದು ನಾನು ಹೇಳುತ್ತೇನೆ.... ನೀವು ತಿರುಚಿ ಹೇಳಿದ್ದೀರಿ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ :- ಸೋಮಶೇಖರ್‌ರವರ ಕಾಲದಲ್ಲಿ ಹಿಂದೆ ಏನಾಗಿತ್ತು ಎಂಬುದು ನನಗೆ ಗೊತ್ತಿದೆ. ಅದು ನಮ್ಮ ಕ್ಷೇತ್ರದ ವಿಚಾರ. ಆದರೆ, ಆ ಅಧಿಕಾರಿಗಳು ಸೋಮಶೇಖರ್ ಅವರಿಗೆ ಏನು ಮಾಹಿತಿ ಕೊಟ್ಟಿದ್ದರು ಎಂಬುದನ್ನು ನಾನು ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. FIR ಹಾಕಿದ್ದಾರೆಂದು ನೀವು ಹೇಳಿದ್ದೀರಿ. FIR ಏನಾಗಿದೆ, ಯಾಕೆ ಹಾಕಿದ್ದಾರೆ? ಯಾವ ವಿಚಾರದಲ್ಲಿ ಹಾಕಿದ್ದಾರೆ? Withdraw ಆಗಿದೆಯೇ? ಕ್ರಮವಾಗಿದೆಯೇ? ಹಾಕಿರುವುದು ಸರಿಯೇ? ತಪ್ಪೇ? ಎನ್ನುವುದರ ಬಗ್ಗೆ ಮಾಹಿತಿ ಕೇಳಲಿ, ಅದು OK. ಆದರೆ, ಅದನ್ನು ಬಿಟ್ಟು ಅದರ ಬಗ್ಗೆ ದೀರ್ಘವಾಗಿ ಸ್ವಾಮೀಜಿಯವರ ವಿರುದ್ಧ ಈ ಸರ್ಕಾರ ಪಿತೂರಿ ಮಾಡುತ್ತಿದೆ..... ಎಂದು ಹೇಳುವ ಅವಶ್ಯಕತೆ ಇಲ್ಲ, ದಯಮಾಡಿ ಅವೆಲ್ಲಾ ಬೇಕಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಸೋಮಶೇಖರ್‌ರವರು ನಮ್ಮ ಪಕ್ಷದ ಅಧ್ಯಕ್ಷರು, ಈ ಸಭೆಯಲ್ಲಿ ಹೇಳುತ್ತಿದ್ದೇನೆ. ಸೋಮಶೇಖರ್‌ಗೆ ಯಾರ ಬಗ್ಗೆಯೇ ಭಿನ್ನಾಭಿಪ್ರಾಯವಿದ್ದರೂ ಕಾನೂನು ಮೀರಿ ಮಾಡಲಾರದಂತಹ ಮನುಷ್ಯ. ಸೋಮಶೇಖರ್ ಇವತ್ತು ರಾಜಿ ಆಗಿದ್ದರೆ, ಏನೋ ಆಗುತ್ತಿತ್ತೆಂದು ನಾವು ಇವತ್ತು ಭಾವಿಸಿಕೊಂಡಿದ್ದೇವೆ. ಸೋಮಶೇಖರ್ ಯಾವತ್ತೂ ಕಾನೂನಿನ ಜೊತೆ ರಾಜಿಯಾಗದೇ ಇರುವುದು ತಪ್ಪಾ? ಅದೇ ಅಪರಾಧವೇ? ಕಾನೂನನ್ನು ಇಟ್ಟುಕೊಂಡು ನಾನು ಅಧಿಕಾರ ಮಾಡುತ್ತೇನೆ ಎಂಬ ಮನುಷ್ಯನನ್ನೇ ನಾವಿಲ್ಲಿ ಟೀಕೆ ಮಾಡಿಕೊಂಡು ಕುಳಿತುಕೊಳ್ಳಬೇಕೇ? ಹಾಗಾದರೆ, ರೆಕಾರ್ಡ್ ತನ್ನಿ. ನಾನು ಆ ವಿಷಯದಲ್ಲಿ ಪ್ರಕಾಶ್‌ರವರು ಪಟೇಲರನ್ನು ಕಾಂಪ್ಲಿಮೆಂಟ್ ಮಾಡುವುದಕ್ಕೆ ಸೋಮಶೇಖರ್ ಫೈಲನ್ನು ಹಿಡಿದಿದ್ದರು ಎಂದರೂ ಕೂಡ ಸೋಮಶೇಖರ್‌ರವರು ಸುಮ್ಮಸುಮ್ಮನೆ ಹಿಡಿದಿರಲಾರರು. ಸೋಮಶೇಖರ್‌ರವರು ಏಕೆ ಹಿಡಿದರು ಎಂಬುದು ಚರ್ಚೆಯಾಗಬೇಕಲ್ಲ. He cannot cast aspersions like that. ಸೋಮಶೇಖರ್‌ರವರು ತಡೆದುಬಿಟ್ಟಿದ್ದರು ಎಂಬ ಅಭಿಪ್ರಾಯ ಬರುವಂತೆ ಈ ಸದನದಲ್ಲಿ ಚರ್ಚೆಯಾಗಬಾರದು.

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) :- ಮಾನ್ಯ ಅಧ್ಯಕ್ಷರೆ, ಉಪಮುಖ್ಯಮಂತ್ರಿಯವರು ಸದನದಲ್ಲಿದ್ದಾರೆ, ಗೃಹ ಸಚಿವರೂ ಸದನದಲ್ಲಿದ್ದಾರೆ.

ಇದೊಂದು ಗಂಭೀರವಾದ ವಿಚಾರ. ಪ್ರಾಯಶಃ, ಎಲ್ಲಿಯೋ ಒಂದು ಕಡೆ ಇದಕ್ಕೆ ರಾಜಕೀಯವನ್ನು ಸೇರಿಸುವುದಾಗಲಿ, ಮತ್ತೊಂದನ್ನು ಮಾಡುವ ಅವಶ್ಯಕತೆ ಇಲ್ಲ. ಅನಿರೀಕ್ಷಿತವಾಗಿ ಏನಾದರೂ ಇಂತಹ ಘಟನೆಗಳು ನಡೆಯುವಾಗ ಒಬ್ಬ ಅಧಿಕಾರಿ ಅವನು ಎಷ್ಟೇ ದೊಡ್ಡವನಾದರೂ ಇಂತಹ ಧಾರ್ಮಿಕ ಕೆಲಸಗಳನ್ನು ಮಾಡತಕ್ಕವರಿಗೆ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡತಕ್ಕವರಿಗೆ ಇಡೀ ರಾಜ್ಯದಲ್ಲಿ ಒಂದು ಚಾಲನೆ ಕೊಟ್ಟು ಇವತ್ತು ಏನಾದರೂ ಪರಿಸರಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಯಾರಾದರೂ ಇದಕ್ಕೊಂದು awareness create ಮಾಡಿದರು ಎಂದರೆ, ಅದಕ್ಕೆ ಪ್ರಮುಖ ಕಾರಣಕರ್ತರು ಪೂಜ್ಯ ಬಾಲಗಂಗಾಧರನಾಥ ಮಹಾಸ್ವಾಮಿಗಳು. ಎಲ್ಲೆಲ್ಲಿ ಸಣ್ಣಪುಟ್ಟ ಮಠಗಳಿದ್ದವು, ಎಲ್ಲೆಲ್ಲಿ ಫಾರೆಸ್ಟ್ ಇಲಾಖೆ ಇತ್ತು, ಎಲ್ಲೆಲ್ಲಿ ಸಂಘ-ಸಂಸ್ಥೆಗಳಿತ್ತು, ಇವೆಲ್ಲವನ್ನೂ ಇಡೀ ರಾಜ್ಯಾದ್ಯಂತ ಒಂದು ಗೂಡಿಸಿ ಎಲ್ಲಾ ಕಡೆ ಕುಡಿಯುವ ನೀರಿನ ವ್ಯವಸ್ಥೆ ಮಾಡತಕ್ಕದ್ದು, ಡಾಕ್ಟರ್‌ಗಳನ್ನು ಕರೆಸತಕ್ಕದ್ದು, ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಇವತ್ತು ಕೆಂಗೇರಿ ಬಳಿ ಅಂಧರಿಗೆ, ಅಬಲೆಯರಿಗೆ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಅಂತಹವರ ಮೇಲೆ ಎಲ್ಲಿಯೋ ಒಂದು ಕಡೆ ಸರ್ಕಾರ ಇವತ್ತು ಇಂತಹ ಕ್ರಮವನ್ನು ತೆಗೆದುಕೊಂಡಿರುವಂಥಾದ್ದು ಯಾರಿಗೂ ಒಳ್ಳೆಯದಲ್ಲ, ಸಾಧುವಾದ ಕ್ರಮವೂ ಅಲ್ಲ. ಉಪಮುಖ್ಯಮಂತ್ರಿಯವರಿಗೆ, ಗೃಹ ಸಚಿವರಿಗೆ ವಿನಂತಿ ಮಾಡುತ್ತೇನೆ. ಅಂತಹ ಕೆಲಸವೇನಾದರೂ ಆಗಿದ್ದರೆ, ದಯಮಾಡಿ ಅದಕ್ಕೆ ಯಾವ ರೀತಿ ಮಾರ್ಗೋಪಾಯವನ್ನು ಕಂಡುಹಿಡಿಯಬೇಕು ಮತ್ತು ಯಾವುದೇ ಕಾರಣಕ್ಕೂ ಇಂತಹ ಮಹನೀಯರ ಹೆಸರು ಸಾಮಾನ್ಯ ಜನರಲ್ಲಿ ಒಂದು ರೀತಿಯ ತಪ್ಪು ಗ್ರಹಿಕೆಯುಂಟಾಗಲು ಅವಕಾಶ ಕಲ್ಪಿಸಿಕೊಡುವಂಥಾದ್ದು ಸರಿಯಾದ ಕ್ರಮವಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :- ನಾನು ಹಿಂದೆ ನಮ್ಮ ಲೋಕಾಯುಕ್ತರ scope of investigation ಬಗ್ಗೆ ಮಾತನಾಡುತ್ತಿದ್ದೆ. ಹಿಂದೆ 1995ರಿಂದ ಏಕೆ ಮಾಡಲು ಆಗಲಿಲ್ಲ? ಈವತ್ತಿನವರೆಗೂ ಏಕೆ ಪ್ರಸ್ತಾವನೆ ಮಾಡಲು ಆಗಲಿಲ್ಲವೆಂದು ಒಂದು date ಅನ್ನು ತಮಗೆ ಕೊಟ್ಟೆ. ಲೋಕಾಯುಕ್ತಕ್ಕೆ ಸಂಬಂಧಿಸಿದಂತೆ ಸರ್ಕಾರ ಏನು ಆದೇಶ ಮಾಡಿದೆ, ದಿನಾಂಕ 1.1.2000 ರಿಂದ 22.7.2006 ರವರೆಗೆ

ನೀವು ತನಿಖೆ ಮಾಡಬಹುದು ಎಂದು ಹೇಳಿದ್ದಾರೆ. ಅಂದರೆ, ಏನೇನು ಲಾಸ್ ಆಗಿದೆ, ಯಾರ್‍ಯಾರು ಏನೇನು ಮಾಡಿದರು ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಅದಾದ ಮೇಲೆ ಬೇಕಾದಷ್ಟು recommendations ಡೆಲ್ಲಿಗೆ ಹೋಗಿದೆ, ಬೇಕಾದಷ್ಟು leases sanction ಆಗಿದೆ, ಬೇಕಾದಷ್ಟು agreement ಗಳಾಗಿವೆ. 7ನೇ ತಿಂಗಳಾದ ಮೇಲೆ ಇಲ್ಲಿಯವರೆಗೆ 5–6 ತಿಂಗಳಿನಲ್ಲಿ ಬೇಕಾದಷ್ಟು agreement ಗಳಾಗಿವೆ. Mining Minister ಏನು ಮಾಡಿದರು, Forest Minister ಏನು ಮಾಡಿದರು, ಎಂಬುದನ್ನೆಲ್ಲಾ ಒಂದು ಕಡೆ ಇಟ್ಟು, ಬರೀ ಆ specified date ಅನ್ನು ಉದಾಹರಣೆ ಕೊಡುತ್ತೇನೆ. ದಿನಾಂಕ 22.07.2006ಕ್ಕೆ investigation time ಮುಗಿದು ಹೋಗುತ್ತದೆ. ಅಲ್ಲಿಯವರೆಗೆ ಮಾತ್ರ ನೀವು ಮಾಡಬಹುದು. ದಿನಾಂಕ 22.7.2006ಕ್ಕೆ MML ನವರು ಒಂದು Board Meeting ಕರೆಯುತ್ತಾರೆ. ಪಾಪ! MML ನ M.D. ಬಹಳ ಪ್ರಾಮಾಣಿಕರು. ಅವರು ನಮ್ಮ Commerce and Industry Secretary ಕೂಡಾ ಆಗಿದ್ದಾರೆ. ಅವರಿಗೆ ಬಹಳ ದುಡ್ಡನ್ನು ಉಳಿಸಬೇಕು, MML ಗೆ loss ಆಗುತ್ತಿದೆ ಎಂದು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಪ್ರಯತ್ನ ಮಾಡುತ್ತಿದ್ದವರು, ಒಂದು Board Meeting ಮಾಡುತ್ತಾರೆ. ಹಿಂದೆ ಧರ್ಮಸಿಂಗ್ ಸಾಹೇಬರ ಕಾಲದಲ್ಲಿ ಶಿವಶಂಕರ್ ಸಂಸ್ಥೆಯವರಿಗೆ ಸಂಬಂಧಿಸಿದಂತೆ 2004 ರಲ್ಲಿ ಯಾವುದೋ ಒಂದು agreement ಆಗಿದೆ. time lapse ಆಯಿತೆಂದು ಹೇಳಿ, ಬೇರೆಯವರಿಗೆಲ್ಲಾ, ಸರ್ಕಾರಕ್ಕೆ ಎಲ್ಲೆಲ್ಲಿ ಲಾಸ್ ಆಗುತ್ತದೋ, ಆ agreement ಗಳೆಲ್ಲಾ cancel ಆಗಿ ಹೋಗುತ್ತವೆ. ಕೋರ್ಟು–ಕಛೇರಿಗಳಿಗೆ ಕೇಸ್‌ಗೆ ಹೋಗುತ್ತಾರೆ. ಕೋಟಿ ರೂಪಾಯಿ ಲಾಸ್ ಆಗುತ್ತಿದೆ ಎಂದು ಹೇಳಿ ಅವರ ಮೇಲೆ ಕೇಸ್ ಹಾಕುತ್ತಾರೆ. ಆದರೆ, ಇಲ್ಲಿ ಒಂದು special case ಏನೆಂದರೆ, ದಿನಾಂಕ 4.8.2006ರಂದು ಮಾಡಿದಂತಹ ಬೋರ್ಡ್ ಮೀಟಿಂಗ್‌ನಲ್ಲಿ ಒಂದು ಅಗ್ರಿಮೆಂಟ್ ಮಾಡುತ್ತಾರೆ. ಇಲ್ಲಿ ಏನು agreement ಮಾಡುತ್ತಾರೆಂದರೆ, ರೂ. 231.00ನಂತೆ ಟನ್ ಒಂದಕ್ಕೆ agreement ಮಾಡುತ್ತಾರೆ. 231.00 ರೂ. lumps and dumps ಗೆ ಎಂದು ತೀರ್ಮಾನ ಮಾಡುತ್ತಾರೆ. ಆವತ್ತು 243 ರೂಪಾಯಿ ಇತ್ತು. ಆದರೆ, ಈಗ ಮಾಡಿಕೊಂಡಿರುವ

Special Supplementary agreement ಮಾಡುತ್ತಾರೆ. ಇವತ್ತು ಇದರ ಬೆಲೆ 1 ಟನ್‌ಗೆ 1,200.00 ರೂ. ಇದೆ. ಬರೀ 231.00 ರೂಪಾಯಿಗೆ ಇವರು agreement ಮಾಡುತ್ತಾರೆ. ಈ 900.00 ರೂ. ಯಾರಿಗೆ ಸೇರುತ್ತಿದೆ? ಇದು ಡಿ.ಕೆ.ಶಿವಕುಮಾರ್‌ಗೆ ಸೇರುತ್ತಿದೆಯೇ? ಮಾನ್ಯ ಮುಖ್ಯಮಂತ್ರಿಗಳಿಗೆ ಸೇರುತ್ತಿದೆಯೇ? ಇನ್ನು ನನ್ನ ಯಾರಾದರೂ ಸಹೋದರಿಗೆ ಸೇರುತ್ತಿದೆಯೇ? ಅಥವಾ ಇನ್ಯಾರೋ ಸಹೋದರಿಗೆ ಸೇರುತ್ತಿದೆಯೇ? ಇಲ್ಲವೆಂದರೆ, ಯಾರ ಸಹೋದರರಿಗೆ ಸೇರುತ್ತಿದೆ? ಯಾವ ರೀತಿ ಸೇರುತ್ತಿದೆ ಎಂಬ ತನಿಖೆಯನ್ನು ಯಾರು ಮಾಡಬೇಕು? ಇಲ್ಲೇ agreement ಇದೆ. ಈ agreement ಮತ್ತು ಇನ್ನು ಏನೇನು ಬೇಕೋ ತಂದುಕೊಡುತ್ತೇನೆ. ಈ ರೀತಿ Special case ಏಕೆ? ಈ date ವರೆಗೆ ಏಕೆ deadline ನಿಂತುಕೊಂಡಿತು? ಈ deadline extend ಮಾಡಬಹುದಾಗಿತ್ತಲ್ಲವೇ? ಇದಕ್ಕೆ ಲೋಕಾಯುಕ್ತ ಏಕೆ ಬೇಕು? Specific ಆಗಿ ಇಂಥವರ ಮೇಲೆ loss ಆಗುತ್ತದೆಂದು ತಾವೇನು ಪಟ್ಟಿಯನ್ನು ಕೊಟ್ಟಿದ್ದೀರಲ್ಲಾ, ಆ ಪಟ್ಟಿಯ scope ಅನ್ನು ನೀವು ಏಕೆ widen ಮಾಡುತ್ತಿಲ್ಲ? ಏಕೆ ನೀವು ಈ date ಕೊಡುತ್ತಿದ್ದೀರಿ? ತಾವೇನು ಆದೇಶ ಮಾಡಿದಿರಿ, ತಮ್ಮ ಸಂಸ್ಥೆಗೆ ಏನು ಆದೇಶ ಮಾಡಿದಿರಿ, ಅದರ ಮೇಲೆ ಏನೂ ತನಿಖೆ ಆಗಬಾರದೇ? ಬರೀ ಕಾಂಗ್ರೆಸ್‌ನವರ ಮೇಲೆ ಮಾತ್ರ ಆಗಬೇಕೇ? ಧರ್ಮಸಿಂಗ್ ಕಾಲದ್ದು ಮಾತ್ರ ಆಗಬೇಕೇ? ಎಸ್.ಎಂ.ಕೃಷ್ಣರವರ ಕಾಲದ್ದು ಮಾತ್ರ ಆಗಬೇಕೇ? ಮುನಿಯಪ್ಪನವರ ಕಾಲದ್ದು ಮಾತ್ರ ಆಗಬೇಕೇ? ಡಿ.ಕೆ.ಶಿವಕುಮಾರ್ ಅವರದ್ದು ಮಾತ್ರ ಆಗಬೇಕೇ? ಈ ರಾಜ್ಯದ ಹಿತದೃಷ್ಟಿಯಿಂದ ಸತ್ಯಾಂಶವನ್ನು ಯಾರೂ ಕೂಡ ಮುಚ್ಚಿ ಹಾಕಲು ಸಾಧ್ಯವಿಲ್ಲ. ನೀವು ಎಷ್ಟೇ ಯಾರಿಗಾದರೂ ತೊಂದರೆ ಕೊಡಬಹುದೆಂದು ಏನೇ ಪ್ರಯತ್ನ ಮಾಡಬಹುದು, ಯಾರನ್ನೇ ನೀವು ಬ್ಲಾಕ್‌ಮೇಲ್ ಮಾಡಬಹುದು, ಏನು ಬೇಕಾದರೂ ಕೇಸ್ ಹಾಕಬಹುದು. ಆದರೆ, ಯಾವತ್ತಾದರೂ ಒಂದು ದಿವಸ ಇವೆಲ್ಲವೂ ಹೊರಕ್ಕೆ ಬಂದೇ ಬರುತ್ತದೆ. ಈ ತನಿಖೆ, ಈ date ಬಗ್ಗೆ, ಕಾಂಗ್ರೆಸ್ party ಇವತ್ತಲ್ಲ ನಾಳೆ ನಾವು ಏನು stand ಗೆ ಬಂದಿದ್ದೇವೆ, ಅದಕ್ಕೆ ಬದ್ಧರಾಗಿದ್ದೇವೆ. ನಮಗೆ ಗೊತ್ತಿದೆ. ಯಾವ ಸಂದರ್ಭದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು, ನಾವೇನು ಮಾಡಬೇಕು,

ನಮ್ಮ ಅಜೆಂಡಾ ಏನು, ನಮ್ಮದೇ ಆದಂತಹ ಕೆಲಸವನ್ನು ನಾವು ಮಾಡುತ್ತೇವೆ. ಆದರೆ, ಈ witch hunting, ರಾಜ್ಯದಲ್ಲಿ ಈ ಕೆಲಸ ಜಾಸ್ತಿ ದಿವಸ ನಡೆಯಲು ಸಾಧ್ಯವಿಲ್ಲ. MMTC rate ಏನಿತ್ತು, ಇವತ್ತೇ different of rates ಏನು ಇದೆ. ಇದಕ್ಕೆ ಜವಾಬ್ದಾರಿಯನ್ನು ತಾವು ತೆಗೆದುಕೊಳ್ಳಬೇಕು. ತಾವು ರಾಜೀನಾಮೆಯನ್ನು ಕೊಡಿ ಎಂದು ನಾವು ಕೇಳಲು ತಯಾರಿಲ್ಲ. ಆದರೆ, ನೀವು ಯಾರನ್ನು ಶೀಲ್ಡ್ ಮಾಡುತ್ತಿದ್ದೀರಿ? ಇಷ್ಟು ಲಾಸ್ ಆಗುತ್ತಿದೆಯಲ್ಲ, 250 ಕೋಟಿ ರೂಪಾಯಿ 1–2–3–4 agreement ಗಳಲ್ಲಿ ಲಾಸ್ ಆಗುತ್ತಿದೆಯಲ್ಲ, ಇದನ್ನು ಕಟ್ಟಿಕೊಡುವಂತಹವರು ಯಾರು? ಇದನ್ನೇಕೆ ತನಿಖೆಗೆ ಒಳಪಡಿಸಲಿಲ್ಲ? ಇದೇಕೆ investigation ಆಗಬಾರದು? ಇದು ಸರಿಯೋ ತಪ್ಪೋ? ಏಕೆಂದರೆ, ಮುಖ್ಯಮಂತ್ರಿಯವರು ಹೇಳಿದರು, ನನಗೆ dumps ಗೊತ್ತಿಲ್ಲ, lumps ಗೊತ್ತಿಲ್ಲಾ. ನನಗೆ ಏನೂ ಗೊತ್ತಿಲ್ಲ ಎಂದು ನಾನು 3–4 ದಿವಸಗಳಾದ ಮೇಲೆ ಒಂದು press conference ಮಾಡಿ ಇಲ್ಲಾ, lumps, dumps ಎಲ್ಲಾ ನಿಮ್ಮ ಮನೆಯವರಿಗೂ ಗೊತ್ತಿದೆ, ತಮಗೂ ಗೊತ್ತಿದೆ ಸ್ವಾಮಿ ಎಂದು ಹೇಳಿದೆ. ಅದಾದ ಮೇಲೆ, ನನ್ನ ಮೇಲೆ ಕೇಸು ಶುರುವಾಯಿತು, ನಾನಂತೂ ಹೆದರುವ ಮಗನಲ್ಲ. ಹೋರಾಟ ಮಾಡಲು ತಯಾರಿದ್ದೇನೆ, ತಪ್ಪು ಮಾಡಿದ್ದರೆ ಶಿಕ್ಷೆ ಪಡೆಯಲೂ ತಯಾರಿದ್ದೇನೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಎಲ್ಲವನ್ನೂ ನಾನು ಸ್ವೀಕಾರ ಮಾಡಲು ತಯಾರಿದ್ದೇನೆ. ಮೇಲಿನ ನ್ಯಾಯಾಲಯದ ತೀರ್ಪು ಏನಿದೆ, ಅದನ್ನು ನಾನು ತೆಗೆದುಕೊಳ್ಳಲು ನಾನು ತಯಾರಿದ್ದೇನೆ. ಆದರೆ, ಇದು ಶಾಶ್ವತವಲ್ಲ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳಲು ಬಯಸುತ್ತೇನೆ. Table turn ಆಗುತ್ತಿರುತ್ತದೆ. ಯಾರು ಎಲ್ಲೆಲ್ಲಿ ಕುಳಿತುಕೊಳ್ಳುತ್ತಾರೋ ಎಂದು ಹೇಳಲು ಬರುವುದಿಲ್ಲ. ಅದೇ ಅಧಿಕಾರಿಗಳು ಇವತ್ತು ಅಧಿಕಾರ ಮಾಡುತ್ತಿದ್ದಾರೆ, ಯಾರು ಸ್ಪೆಷಲ್ ಆಗಿ ಮಾಡುತ್ತಿದ್ದಾರೆ, ಆ ಅಧಿಕಾರಿಗಳನ್ನೆಲ್ಲಾ ನೋಡಿದ್ದೇವೆ. ಎಲ್ಲಾ ರೌಂಡ್ ಟೇಬಲ್, ಮ್ಯೂಸಿಕಲ್ ಚೇರ್‌ನಲ್ಲಿ ಅವರೆಲ್ಲಾ ಇರುತ್ತಾರೆ. ಯಾರು ಕೈಯಿನಲ್ಲಿ ಮಾಡಿಸುವುದಕ್ಕೆ ಸಾಧ್ಯವೋ ಮತ್ತೆ ಅವರೇ ಪುನಃ ಅಧಿಕಾರ ಮಾಡುತ್ತಾರೆ. ಇಷ್ಟನ್ನು ತಾವು ಈ ಸಂದರ್ಭದಲ್ಲಿ ತಿಳಿದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಮತ್ತೊಂದು ವಿಚಾರ, ಮಂತ್ರಿಗಳಾದ ರೇವಣ್ಣನವರು ಇಲ್ಲಿದ್ದಂತಹ ಸಂದರ್ಭದಲ್ಲಿ, ಮೊದಲು

ನಮ್ಮ ಅಧ್ಯಕ್ಷರು ಮಾತನಾಡುವಾಗ, ದೇಶಪಾಂಡೆಯವರು ಮಾತನಾಡುವಾಗ, ನೀವು ಗೌರ್ನರ್‌ಗೆ ನೀವು ಏನೇನು ಕೊಟ್ಟಿರಿ ಹೇಳಿ, President of India ಗೆ ಏನೇನು ಕೊಟ್ಟಿರಿ ಹೇಳಿ, Prime Minister ಗೆ ಏನೇನು ಕೊಟ್ಟಿರಿ ಹೇಳಿ, ಓದಿರಿ ಓದಿರಿ ಎನ್ನುತ್ತಿದ್ದರು. ನಮ್ಮ ಪಕ್ಷದ್ದು ಏನು ಒಂದು ಸಿದ್ಧಾಂತ ಇದೆಯೋ ಅದನ್ನು ಕೊಟ್ಟಿದ್ದೇವೆ. ಹೇಳಬೇಕೆಂದರೆ ಹೇಳುತ್ತೇನೆ. ಅಲ್ಲಿ ಏನೇನು ಕೊಟ್ಟಿದ್ದೇವೆಂದರೆ, ಪ್ರೆಸ್ ಕಟಿಂಗ್ಸ್ ಕೊಟ್ಟಿದ್ದೇವೆ. ಯಾವುದ್ಯಾವುದು ಆಸ್ತಿಗಳಿದ್ದಾವೆನ್ನುವುದನ್ನು ಕೊಟ್ಟಿದ್ದೇವೆ. Forest Minister Report, illegal ಮೈನಿಂಗ್‌ನಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಲಾಸ್ ಆಗುತ್ತಿದೆ ಎಂದು, Forest Minister ಏನೊಂದು Report ಕೊಟ್ಟಿದ್ದರು, ಆ Principal Secretary ಅವರು ಏನು Report ಕೊಟ್ಟಿದ್ದರು ಅದನ್ನು ನಾವು ಕೊಟ್ಟಿದ್ದೇವೆ. Forest Minister ಅವರು ಒಂದು ಕಡೆ ಏನು ಹೇಳುತ್ತಾರೆಂದರೆ, ಇದನ್ನು ನಕ್ಸಲೈಟ್ಸ್ ಸಿಎಂ ಹೆಸರಿನಲ್ಲಿ ಕಲೆಕ್ಟ್ ಮಾಡಿಬಿಟ್ಟಿದ್ದಾರೆಂದು ಒಂದು statement ಕೊಟ್ಟರು. ಆ ನಕ್ಸಲೈಟ್ಸ್ ಕಲೆಕ್ಟ್ ಮಾಡಿರುವುದು ನಿಜವೋ ಎಂಬುದರ ಬಗ್ಗೆ ಸಿಬಿಐ ಎನ್‌ಕ್ವೈರಿ ಆಗಬೇಕೋ ಬೇಡವೋ? ನಮ್ಮ ಮಂತ್ರಿಗಳು ಹೇಳಿದ್ದು ಎನ್‌ಕ್ವೈರಿ ಆಗಬೇಕೋ ಬೇಡವೋ? ಇನ್ನೊಂದು ಕಡೆ Forest Minister'son ಏನು ಹೇಳುತ್ತಾರೆಂದರೆ, ನಾವು ಒಂದು ಸಂಸ್ಥೆ ಮಾಡಿದ್ದೇವೆ, 25 ಕೋಟಿ ನಮ್ಮ ಮನೆಯದನ್ನು ಹಾಕಿದ್ದೇವೆ, 25 ಕೋಟಿ ಸಾರ್ವಜನಿಕರು ಹಾಕಿ, ನಾವು 50 ಕೋಟಿಯಲ್ಲಿ ಒಂದು ಸಂಸ್ಥೆ ಕಟ್ಟಿದ್ದೇವೆ, ದೊಡ್ಡ ವೃದ್ಧಾಶ್ರಮವನ್ನು ಕಟ್ಟಿದ್ದೇವೆಂದು ಹೇಳುತ್ತಾರೆ. 25 ಕೋಟಿ ನಿಮ್ಮದು ಯಾವುದು? 25 ಕೋಟಿಯನ್ನು ಯಾರ್ಯಾರು ಪುಣ್ಯಾತ್ಮರು ಕೊಟ್ಟರೆಂದು, ಇಷ್ಟು ದೊಡ್ಡ ವಿರೋಧಪಕ್ಷ ಕೇಳುವುದಕ್ಕೆ ಶಕ್ತಿ ಇಲ್ಲವೆಂದರೆ ಇನ್ನೇನು ಹೇಳುವುದಕ್ಕೆ ಸಾಧ್ಯ? ಹೀಗೆ ನಾವು ಬೇಕಾದಷ್ಟು CNN-IBN ನಲ್ಲಿ ಬಂತೋ DVD ಗಳು ಬಂತೋ, ಪೇಪರ್‌ನಲ್ಲಿ ಬಂತೋ, ಒಂದು ವಿರೋಧಪಕ್ಷವಾಗಿ ವಿರೋಧಪಕ್ಷದ ಸ್ಥಾನದಲ್ಲಿಟ್ಟುಕೊಂಡು, ಇವೆಲ್ಲಾ ಪೇಪರ್‌ನಲ್ಲಿ ಬರುವಾಗ, ನೀವು ಏನಾದರು ಮಾಡಿಕೊಂಡು ಹೋಗಿರಪ್ಪ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ ಎನ್ನುವುದಕ್ಕಾ ಜನರು ನಮ್ಮನ್ನು ಕಳುಹಿಸಿರುವುದು? ನಮ್ಮನ್ನು ವಿರೋಧಪಕ್ಷವಾಗಿ ಜನರು ಕಳುಹಿಸಿದ್ದಾರೆ, ನಮಗೆ ಬಹುಮತ ಜಾಸ್ತಿ ಕೊಟ್ಟಿದ್ದರೆ, ನಾವು ಅಲ್ಲಿ ಇರುತ್ತಿದ್ದೆವು,

ನಮಗೆ ಕೊಡಲಿಲ್ಲ, ಅದಕ್ಕೆ ನಾವು ಇಲ್ಲಿ ಇದ್ದೇವೆ. ಆದರೆ ಪ್ರಬಲವಾಗಿ ವಿರೋಧ ಪಕ್ಷ ಮಾಡುವಂತಹ ಕೆಲಸವನ್ನು ನಾವು ಮಾಡಿದ್ದೇವೆ.

ಶ್ರೀ ಎನ್.ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :- ಉಪಾಧ್ಯಕ್ಷರೆ, ಇಲ್ಲಿ ಪೂರ್ತಿ ಕುಟುಂಬದ ವಿಚಾರ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯಾ? ತಾವು ಕೊಟ್ಟಿರುವ ಅನುಮತಿಯಲ್ಲಿ, ಈಗ ಬಿ.ಎಲ್.ಭಟ್ ಆಯೋಗವನ್ನು ವಿತ್‌ಡ್ರಾ ಮಾಡಿದ್ದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೇಳಿದಿರಿ. ಮಾತನಾಡಲಿ, ನಿಮಗೆ ಅವಕಾಶವಿದ್ದರೆ ಬೇರೆ ತರಹದಲ್ಲಿ ಅವಕಾಶ ಮಾಡಿ ಕೊಡಿ ಆ ತರಹ ಚರ್ಚೆ ಆಗಲಿ. ವಿಚಾರ ಎತ್ತಿರುವುದು ಯಾವುದು, ಮಾತನಾಡುತ್ತಿರುವುದು ಯಾವುದು? ಅವರು ವೈಯಕ್ತಿಕವಾಗಿ ವಿಚಾರ ಎತ್ತಿರುವುದಕ್ಕೆ ನನಗೇನೂ ನೋವಾಗುತ್ತಿಲ್ಲ, ಆದರೆ ಈ ರೂಲ್ 69 ನಲ್ಲಿ ಅನುಮತಿ ಕೊಟ್ಟಿರುವುದಕ್ಕೂ, ಅವರು ಚರ್ಚೆ ಮಾಡುತ್ತಿರುವುದಕ್ಕು ಸಂಬಂಧವಿಲ್ಲ, ದಯಮಾಡಿ, ಸುಮ್ಮನೆ ಕುಳಿತು ಕೇಳುವುದು ಸೂಕ್ತವಲ್ಲವೆಂದು ತಮಗೆ ನನ್ನ ರಿಕ್ವೆಸ್ಟ್.

ಶ್ರೀ ಡಿ.ಕೆ. ಶಿವಕುಮಾರ್ :- ತಾವು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದಿರಿ, ತಾವು ತಮ್ಮ ಡ್ಯೂಟಿಯನ್ನು ಮಾಡಲೇ ಬೇಕು, ಅದನ್ನು ತಪ್ಪೆಂದು ನಾವು ಹೇಳುವುದಿಲ್ಲ, ಅವರು ಕೇಳುತ್ತಾರೋ ಬಿಡುತ್ತಾರೋ, ನಾನು ಹೇಳುವ ವಿಚಾರವನ್ನು ಹೇಳಲೇ ಬೇಕು.

ಶ್ರೀ ಎನ್. ಚೆಲುವರಾಯಸ್ವಾಮಿ :- ಈಗ ಯಾವ ವಿಚಾರ, ನೀವೇ ಚರ್ಚೆ ಮಾಡಿ, ಏಕೆಂದರೆ ನಾನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಹೋದರೆ ವೈಯಕ್ತಿಕವಾಗಿ ಡಿ.ಕೆ.ಶಿವಕುಮಾರ್ ಅವರ ಬಗ್ಗೆ ಹೇಳಿದ ಹಾಗೆ ಆಗುತ್ತದೆ. ಅವರಿಗೆ ಕೆಲವು FIR ಕೇಸ್ ಆಗಿರುವುದನ್ನು, ಬೇಕಾದ ಮಾಹಿತಿ ಸರ್ಕಾರವನ್ನು ಕೇಳಲಿ, ಪಡೆದುಕೊಳ್ಳಲಿ ಅಥವಾ ಯಾವುದಾದರೂ ಸೆಕ್ಷನ್‌ನಲ್ಲಿ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಮಾತನಾಡಲಿ. ನನ್ನ ಕುಟುಂಬದ ಬಗ್ಗೆ ವೈಯಕ್ತಿಕವಾಗಿ ಸರ್ಕಾರ ದ್ವೇಷ ಮಾಡುತ್ತಿದೆ ಅಥವಾ ಯಾವ ಇಲಾಖೆ ಮಾಡುತ್ತಿದೆ ಎನ್ನುವುದರ ಬಗ್ಗೆ ಹೇಳಲಿ, ನೀವು ಕೇಳಿರುವ ವಿಚಾರವೇ ಬೇರೆ, ಮಾತನಾಡುವ ವಿಚಾರವೇ ಬೇರೆಯಾದರೆ, ಸುಮ್ಮನೆ ನಾವಿಲ್ಲಿ ಕುಳಿತು ಕೇಳಬೇಕೆಂದರೆ, ಇದಕ್ಕೇನು ಅರ್ಥವಿರುತ್ತದೆಯೇ ಸರ್?

ಶ್ರೀ ಡಿ.ಕೆ. ಶಿವಕುಮಾರ್ :- ನಾನು DPAR ಗೆ ಕೆಲವು ಅಧಿಕಾರಿಗಳ ಮಾಹಿತಿಯನ್ನು ಕೇಳಿದೆ. ಏನು, ಈ ಅಧಿಕಾರಿಗಳು ಇಂತಿಂತಹ ಬಿಸಿನೆಸ್ ಮಾಡುತ್ತಿದ್ದಾರೆ, ಇಂತಿಂತಹ ಅಧಿಕಾರಿಗಳೆಲ್ಲಾ 50-60 ಕೋಟಿ ರೂಪಾಯಿಗಳಷ್ಟು, 2-3 ತಿಂಗಳಿಗೆ ಎಕ್ಸ್‌ಪೋರ್ಟ್ ಮಾಡಿಬಿಟ್ಟಿದ್ದಾರೆ. ಇವರು ಏನಾದರೂ ಸರ್ಕಾರದಿಂದ ಪರ್ಮಿಷನ್ ತೆಗೆದುಕೊಂಡಿದ್ದಾರೋ ಇಲ್ಲವೋ ಎಂದು ಕೇಳಿದೆ. ನಾನು ಒಬ್ಬ MLA ಆಗಿ ಕೇಳಿದ್ದೇನೆ, Right to Information Act ಕೆಳಗೆ ಕೇಳಿದ್ದೇವೆ, ಅದನ್ನು ಇವತ್ತಿನವರೆಗೆ DPAR ನವರು ಕೊಡುವುದಕ್ಕೆ ಸಾಧ್ಯವಿಲ್ಲ. ಅವರ ಕುಟುಂಬದವರು ಈ ಬಿಸಿನೆಸ್‌ಗೆ ಪರ್ಮಿಷನ್ ತೆಗೆದುಕೊಂಡಿದ್ದಾರಾ, ಇಲ್ಲವಾ ಎಂಬುದನ್ನು ಕೇಳಿದ್ದೇನೆ. ಪ್ರತಿಯೊಂದಕ್ಕೂ ಇಷ್ಟು ದೊಡ್ಡ ವ್ಯವಸ್ಥೆ ಇರುವಾಗ ನಾನು Right to Information Act ಕೆಳಗೆ ಕೇಳಿದ್ದೇನೆ. ಒಬ್ಬ MLA ಆಗಿ ಕೇಳಿದ್ದೇನೆ. ಏನು? ಇಂತಹವರು ಇಂತಹ ಅಧಿಕಾರದಲ್ಲಿದ್ದರು, ಏನು ವ್ಯವಹಾರ ಮಾಡಿದ್ದಾರೆ? ಏನು ಬಿಟ್ಟಿದ್ದಾರೆ? ಪರ್ಮಿಷನ್ ತೆಗೆದುಕೊಂಡಿದ್ದಾರಾ? ಏಕೆಂದರೆ, ತಾವು 2000 ದಿಂದ ಎಂದು ಒಂದು ಡೇಟ್ ಅನ್ನು ನಿಗದಿ ಮಾಡಿದ್ದೀರಿ. ಏನಾದರೂ ಹಿಂದೆ ಸರ್ಕಾರದಲ್ಲಿ ಪರ್ಮಿಷನ್ ತೆಗೆದುಕೊಂಡಿದ್ದಾರಾ? ಏಕೆಂದರೆ ಒಬ್ಬ ಸರ್ಕಾರಿ ನೌಕರ, ಯಾವ IAS Officer ಇರಬಹುದು. KAS ಇರಬಹುದು, ಇನ್ನೊಬ್ಬ ಸಣ್ಣ ಅಧಿಕಾರಿ ಇರಬಹುದು, ಏನಾದರೂ ಒಂದು ಬಿಸಿನೆಸ್ ಮಾಡಬೇಕಾದರೆ ಅವನಾಗಲಿ ಅವನ ಕುಟುಂಬವಾಗಲಿ, ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳಬೇಕು. ಏನಾದರು ತೆಗೆದುಕೊಂಡಿದ್ದಾರಾ ಇಲ್ಲವಾ ಎಂದು ಕೇಳಿದರೆ, ಅದನ್ನು ಇವತ್ತಿನವರೆಗೆ ಕೊಡುವುದಕ್ಕಾಗಿಲ್ಲ. ಏನು ಅದರಲ್ಲಿ ಅಷ್ಟೊಂದು ಮುಚ್ಚು? ಏನು ಅಷ್ಟು ಗೌಪ್ಯ?, ಸತ್ಯವಿತ್ತೆಂದರೆ ತೋರಿಸುವುದಕ್ಕೆ ಏನಿದೆ? ಪಾರದರ್ಶಕತೆ ಇದ್ದರೆ ಈಚೆಗೆ ಇಡಬೇಕು ತಾನೆ? ಇವರು ಹೇಳಿದ ಹಾಗೆ Ceasar's wife should be above suspicion. ಮತ್ತೊಂದು ಯಾವುದೋ ಅಗ್ನಿಪರೀಕ್ಷೆ ಎಂದು ಏನು ಹೇಳುತ್ತಾರೆ, ಅದು ಈಚೆಗೆ ಬರಬೇಕು ತಾನೇ?

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಇಷ್ಟಕ್ಕೂ ನೀವು ಯಾರ ಹೆಸರನ್ನು ಹೇಳುತ್ತಿದ್ದಿರಿ?

ಶ್ರೀ ಡಿ.ಕೆ. ಶಿವಕುಮಾರ್ :– ನಾನು ಯಾರ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ.

ಶ್ರೀ ಎನ್. ಚೆಲುವರಾಯ ಸ್ವಾಮಿ :– ಉಪಾಧ್ಯಕ್ಷರು, ಮೌನ ತಾಳಿದ್ದಿರಿ, ದಯಮಾಡಿ ಈ ವಿಷಯಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದಿರಾ, ಈ ವಿಚಾರ ಬರುತ್ತದೆಯಾ ಎಂದು ನೋಡಿ, ತಾವು ಸುಮ್ಮನೆ ಕುಳಿತರೆ, ಇವರು ಏನು ಬೇಕಾದರು ಮಾತನಾಡುತ್ತಿದ್ದರೆ, ನಾವು ಕೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ದಿನೇಶ್ ಗುಂಡೂರಾವ್ :– ಸರ್, ಅವರು ಏನು ಬೇಕಾದರೂ ಮಾತನಾಡುತ್ತಿಲ್ಲ, ಅವರು ಹೇಳುತ್ತಿರುವುದು, ಈ ಭಟ್ ಕಮಿಷನ್ ಮತ್ತು ಗಣಿ ವಿಚಾರದಲ್ಲಿ ಏನು ಅವ್ಯವಹಾರವಾಗಿದೆ ಎಂಬುದರ ಬಗ್ಗೆ ಹೇಳುತ್ತಿರುವುದು. ನಿಮಗೆ ಅವ್ಯವಹಾರದ ಬಗ್ಗೆ ಕಾಳಜಿ ಇಲ್ಲವೆಂದರೆ ನಾವೇನು ಮಾಡುವುದು

(ಗೊಂದಲ)

ಶ್ರೀ ಎನ್. ಚೆಲುವರಾಯ ಸ್ವಾಮಿ :– ನೀವು ಅವರ ರಕ್ಷಣೆಗೆ ಹೋಗುವುದು ಬೇಡ, ದಯಮಾಡಿ ಅವರಿಗೆ ಅವರದ್ದೇ ಆದ ವಿಚಾರವನ್ನು ಮಾತನಾಡುವುದಕ್ಕೆ ಇತಿಮಿತಿ ಇರುತ್ತದೆ, ದಯಮಾಡಿ ನೀವು ಸಮಾಧಾನವಾಗಿ ಕುಳಿತುಕೊಳ್ಳಿ. ಅವರು Right to Information Act ಪ್ರಕಾರ ಮಾಹಿತಿ ಕೊಡುತ್ತಿಲ್ಲವೆಂದರೆ, ಯಾರನ್ನು ಕೇಳಬೇಕು? ತಾವು ಅನುಮತಿಯನ್ನು ಕೊಟ್ಟಿದ್ದಿರಿ, ಉಪಾಧ್ಯಕ್ಷರು ಮೌನ ತಾಳಿದರೆ ಅದು ನನಗೇನೋ ಸರಿ ಅನಿಸುತ್ತಿಲ್ಲ ಸ್ವಾಮಿ. ತಾವು ನಾನು ಇದಕ್ಕೆ ಅನುಮತಿಯನ್ನು ಕೊಡುತ್ತಿದ್ದೇನೆ, ಇದರ ಬಗ್ಗೆ ಅವರು ಏನು ಬೇಕಾದರೂ ಮಾತನಾಡಬಹುದು ಎನ್ನುವುದಾದರೆ ನಾನು ಮಾತಾಡುವುದಿಲ್ಲ.

ಶ್ರೀ ಬಿ.ಆರ್. ಪಾಟೀಲ್ (ಆಳಂದ) :– ಮಾನ್ಯ ವಿರೋಧ ಪಕ್ಷದವರು ಎತ್ತಿದಂತಹ ವಿಚಾರದ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ರೂಲ್ 69 ನಲ್ಲಿ ಮುಕ್ತವಾದ ಅವಕಾಶವಿದೆ. ನಾನು ಮೇಲ್ಮನೆಯಲ್ಲಿ ಅದೇ ಸ್ಥಾನದಲ್ಲಿ ಕುಳಿತು ಕೆಲಸ ಮಾಡಿದಂತಹ ಅನುಭವ ನನಗಿದೆ, ಈ ಕಾನೂನಿನ ಬಗ್ಗೆ ನನಗೆ ಸ್ವಲ್ಪ ಅರಿವಿದೆ. ಮೊನ್ನೆ ಎ.ಟಿ. ರಾಮಸ್ವಾಮಿಯವರು ಗಣಿ ಹಗರಣದ ಬಗ್ಗೆ

ಮಾತನಾಡುತ್ತಿರಬೇಕಾದರೆ, ಜನಾರ್ಧನ ರೆಡ್ಡಿ ಹತ್ತಿರ 150 ಕೋಟಿ ಲಂಚ ಕೊಡಬೇಕಾದಂತಹ ಸಂದರ್ಭದಲ್ಲಿ ಅವನಿಗೆ ಎಲ್ಲಿಂದ ಹಣ ಬಂತೆಂಬುದರ ಬಗ್ಗೆಯೂ ತನಿಖೆಯಾಗಬೇಕು ಎನ್ನುವ ಮಾತನ್ನು ಕೂಡ ಅವರು ಹೇಳುವಾಗ ಡಿ.ಕೆ.ಶಿವಕುಮಾರ್‌ರವರು ಏನು ಹೇಳಿದ್ದಾರೆ, 50 ಕೋಟಿ ರೂಪಾಯಿಗಳ ಒಂದು ಸಂಸ್ಥೆಯನ್ನು ಕಟ್ಟುವಾಗ ಚೆನ್ನಿಗಪ್ಪನವರ ಮಗ ತನ್ನ ಮನೆಯಿಂದ ಹಾಕಿದ್ದರೆಂದು ಹೇಳಿದ್ದಾರೆ. ಸ್ವಾಮಿ, ಇದೆಲ್ಲಾ ಈ ರಾಜ್ಯದಲ್ಲಿ ಚರ್ಚೆಯಾಗಬೇಕು. ಯಾವ್ಯಾವ ಹಣ ಎಲ್ಲೆಲ್ಲಿ ಓಡಾಡುತ್ತಿದೆ, ಯಾರು ಕೊಟ್ಟರು ಎಲ್ಲಿಂದ ಬಂತು? ಎಂದಲ್ಲಾ ಚರ್ಚೆಯಾಗಬೇಕಾದರೆ ಡಿ.ಕೆ.ಶಿವಕುಮಾರ್‌ರವರು ಎತ್ತಿರುವ ವಿಚಾರ ರಿಲವೆನ್ಸ್ ಇಲ್ಲವೆಂದು ಹೇಗೆ ಹೇಳುತ್ತೀರಿ? ಇಡೀ ಹಗರಣದ ಬಗ್ಗೆ ಚರ್ಚೆ ಆಗಬೇಕಾದಂತಹ ಸಂದರ್ಭದಲ್ಲಿ ಇವೆಲ್ಲವು ಕೂಡ ಪ್ರಸ್ತುತವಾಗುತ್ತವೆ, ಹಾಗಾಗಿ ಡಿ.ಕೆ.ಶಿವಕುಮಾರ್ ಎತ್ತಿದಂತಹ ವಿಷಯ ರಿಲವೆಂಟ್ ಇದೆ, ಅದು ಚರ್ಚೆ ಆಗಬೇಕಾಗಿರುವಂತಹ ವಿಷಯ.

ಶ್ರೀ ಡಿ.ಕೆ. ಶಿವಕುಮಾರ್:- ನಾನು ಪಬ್ಲಿಕ್ ಸರ್ವೆಂಟ್ ಆದ್ದರಿಂದ, ಇದನ್ನು ಏತಕ್ಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, 2000 ದಿಂದ ಇಲ್ಲಿಯವರೆಗೆ ಎಂದು ಒಂದು ಡೇಟ್ ಫಿಕ್ಸ್ ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಸರ್, ನಾನು ಚೆಲುವರಾಯ ಸ್ವಾಮಿಯವರ ಮಾತನ್ನು ಒಪ್ಪುತ್ತೇನೆ. ಎಲ್ಲಿಂದ ಎಲ್ಲಿಗೋ ಹೋಗಿಬಿಟ್ಟರೆ ಕಷ್ಟವಾಗುತ್ತದೆಂದು ಅವರು ಹೇಳಿದರು. ಇವರು ಹೇಳುತ್ತಾರೆ, ಯಾರೋ ಒಬ್ಬರು ಕೆಎಎಸ್ ಆಫೀಸರ್ ರವರ ವಿವರವನ್ನು Right to Information Act ಕೆಳಗೆ ನಾನು ಕೇಳಿದೆ ಎಂದು. ಹಾಗೆ ಮಗುಂ ಆಗಿ ಹೇಳಿ ಕುಳಿತುಬಿಟ್ಟರೆ ರಾಜ್ಯದಲ್ಲಿ ಎಷ್ಟೋ ಜನ ಕೆಎಎಸ್ ಆಫೀಸರ್ಸ್ ಇದ್ದಾರೆ, ಪ್ರಾಮಾಣಿಕರಿದ್ದಾರೆ, ಅಪ್ರಾಮಾಣಿಕರಿದ್ದಾರೆ, ನೀವು ಯಾರ ಬಗ್ಗೆ ಕೇಳಿದ್ದಿರಿ ಎಂಬುದು ಸದನಕ್ಕೆ ಗೊತ್ತಾಗಬೇಕು. ಹೇಳುವವರೆಗೆ ಅದು ನಿಮ್ಮ ವಿಷಯವಾಯಿತು. ನಿಮ್ಮ ಬಾಯಿಯಿಂದ ಹೊರಗೆ ಬಿದ್ದ ಮೇಲೆ ಅದು ಈ ಸದನದ ವಸ್ತು, ನಮಗೆ ಸತ್ಯ ತಿಳಿದುಕೊಳ್ಳುವ ಹಕ್ಕಿದೆ. ಆದುದರಿಂದ ಅವರ್‍ಯಾರು ಆಫೀಸರ್, ಅವರು ರಿಟೈರ್ಡ್ ಆಗಿದ್ದಾರಾ, ಸರ್ವೀಸ್‌ನಲ್ಲಿದ್ದಾರಾ, ಏನೇನು

ಹುದ್ದೆಯಲ್ಲಿದ್ದರು, ನೀವು ಏನು ಕೇಳಿದಿರಿ? ನೀವು ಸತ್ಯ ಹೇಳಬೇಕು, ನೀವು ಹಾಗೆ ಹೇಳಿ ಹಾರಿಸಿಕೊಂಡು ಹೋಗಿ ಬಿಟ್ಟರೆ, ಪಾಪ ಕೆಎಎಸ್ ಆಫೀಸರ್ಸ್ ಇಲ್ಲಿ ಬಂದು ತಮ್ಮನ್ನು ತಾವು ಡಿಫೆಂಡ್ ಮಾಡುಕೊಳ್ಳುವಂತಿಲ್ಲ.

ಉಪಾಧ್ಯಕ್ಷರು :– ಡಿ.ಕೆ.ಶಿವಕುಮಾರ್‌ರವರೆ, ನೀವು ಪ್ರಾರಂಭ ಮಾಡಿ 45 ನಿಮಿಷವಾಯಿತು, ಉತ್ತರ ಹೇಳಬೇಕು, ಬೇಗ ಮುಗಿಸಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಹಾಗಾದರೆ ಅವರ್‍ಯಾರೆಂದು ತಾವು ಹೇಳುವುದಿಲ್ಲ?

ಶ್ರೀ ಡಿ.ಕೆ. ಶಿವಕುಮಾರ್ :– ಬೇಡ ಪಾಪ ಸುಮ್ಮನೆ ಏಕೆ, ಯಾರೆಂದು ನನಗೆ ಗೊತ್ತಿಲ್ಲ, ನಾನು DPAR ಗೆ ಅರ್ಜಿಯನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಅಭಯಚಂದ್ರ :– ಮಾಧುಸ್ವಾಮಿಯವರಿಗೆ ಗೊತ್ತಿದ್ದರೆ ಹೇಳಬಹುದು.

ಶ್ರೀ ಡಿ.ಕೆ. ಶಿವಕುಮಾರ್ :– Right to Information Act ಕೆಳಗೆ ದುಡ್ಡು ಕಟ್ಟಿದ್ದೇವೆ, ನಾನು ಹೆಸರು ಹೇಳುವುದಕ್ಕೆ ತಯಾರಿಲ್ಲ, ಬೇಡ ಪಾಪ Special case ಎಂದು ನಾನು ಇದನ್ನು ಕೇಳುತ್ತಿದ್ದೇನೆ. ಏಕೆಂದರೆ, ಈ ಎಲ್ಲಾ ವಿಚಾರಗಳ ಬಗ್ಗೆ ತನಿಖೆಯಾಗಬೇಕಾದರೆ CBI ನಿಂದ ಈ ಸ್ಪೆಸಿಫಿಕ್ ಡೇಟ್ ಒಳಗೆ ಆಗಬೇಕು. ಫರ್ದರ್ ಈಗ ಲೋಕಾಯುಕ್ತಕ್ಕೂ ಹಾಕಿದ ಮೇಲೆ ನಾವು ಸುಮ್ಮನೆ ಇದ್ದರೂ ಲೋಕಾಯುಕ್ತರು ನಮ್ಮನ್ನು ಕರೆಯುತ್ತಾರೆ. ನೀನಿ ಪೇಪರ್ ಸ್ಟೇಟ್‌ಮೆಂಟ್ ಕೊಟ್ಟಿದ್ದ್ಯಲ್ಲ, ನೀನು ಹೀಗೆ ಆರೋಪ ಮಾಡಿದ್ದ್ಯಲ್ಲ, ನೀನು ಗಣ್ಯ ವ್ಯಕ್ತಿಗಳ ಮೇಲೆ ಹೀಗೆ ಆರೋಪ ಮಾಡಿದ್ದ್ಯಲ್ಲ, ನೀನು ಇದನ್ನು ಪ್ರೂವ್ ಮಾಡು ಇಲ್ಲವೆಂದರೆ, ನಿನ್ನನ್ನು ಒದ್ದು ಒಳಕ್ಕೆ ಹಾಕುತ್ತೇವೆಂದು ಲೋಕಾಯುಕ್ತರವರು ಇವತ್ತಲ್ಲ ನಾಳೆ ನನ್ನನ್ನು ಕರೆಯುತ್ತಾರೆ ಅದು ನನಗೆ ಗೊತ್ತಿದೆ, ಅದಕ್ಕೇ ನನಗೆ ಆ ಮಾಹಿತಿ ಬೇಕು. ಏನು, ಇಂತಹ ಆಫೀಸರ್ ಈ ರೀತಿಯ ವ್ಯವಹಾರ ಮಾಡಿದ್ದಾರೆ, ಏನು ಸತ್ಯಾಂಶ? ಉದಾಹರಣೆಗೆ ಬೇರೆ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಒಬ್ಬ ಐಎಫ್‌ಎಸ್ ಆಫೀಸರ್ ಬೇಡ, ಒಬ್ಬ ಫಾರೆಸ್ಟ್ ಆಫೀಸರ್ ಬಗ್ಗೆ ರಾಜಶೇಖರನ್ ಎಂಬುವ ಒಬ್ಬ ಡಿಎಫ್‌ಒ, ಬಹಳ ಪ್ರಾಮಾಣಿಕರು, ಬಹಳ ಕೆಲಸ ಮಾಡಿಬಿಟ್ಟಿದ್ದಾನೆ, ಅವನ ಮೇಲೆ ನಮ್ಮ ಮಂತ್ರಿಗಳು ಹೇಳುತ್ತಾರೆ,

ನಮ್ಮ ಮಂತ್ರಿಗಳು ಹೇಳುತ್ತಾರೆ, ಫೇಕ್ ಪರ್ಮಿಟ್ ಇಲ್ಲೀಗಲ್ ಆಗಿ ನಡೆಯುತ್ತಿದೆ, ಇವನನ್ನು ಸಸ್ಪೆಂಡ್ ಮಾಡಬೇಕು. ಪಿ.ಸಿ.ಸಿ.ಎಫ್. ಒಂದು ಲೆಟರ್ ಬರೆಯುತ್ತಾರೆ. ಆ ಪಿ.ಸಿ.ಸಿ.ಎಫ್. ರವರು ಲೆಟರ್‌ನಲ್ಲಿ ಏನು ಬರೆಯುತ್ತಾರೆಂದರೆ Misuse of Form 29 by D.C.C.F.(Forest) Mobile squad, Bellary and his staff complained by public, requests for detailed investigation ಎಂದು ಬರೆದು, ಇವನು ಪುಸ್ತಕವನ್ನೆಲ್ಲಾ ಪ್ರಿಂಟ್ ಮಾಡಿಬಿಟ್ಟಿದ್ದಾನೆ, ಇವನಿಂದ ಇಷ್ಟಿಷ್ಟು ನಷ್ಟ ಆಗಿದೆ, ಇವನಿಗೆ ಪರ್ಮಿಟ್ ಕೊಡುವ ಪ್ರಾವಿಶನ್ ಇಲ್ಲ, ಫೈನ್ ಹಾಕುವುದಕ್ಕೆ ಪ್ರಾವಿಶನ್ ಇಲ್ಲ, ಫಾರೆಸ್ಟ್‌ನಲ್ಲಿ ಕದ್ದಂಥದ್ದಕ್ಕೆ ಫೈನ್ ಹಾಕಿ ರೆಗ್ಯೂಲರೈಸ್ ಮಾಡಿ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಪರ್ಮಿಶನ್ ಇಲ್ಲವೆಂದು ಹೇಳಿ, ಒಂದು ದೊಡ್ಡ ಚಾರ್ಜ ಮಾಡಿ ಇವನಿಂದ ಸಾವಿರಾರು ಕೋಟಿ ರೂಪಾಯಿ ಲಾಸ್ ಆಗುತ್ತಿದೆ ಎಂದು ಹೇಳಿ ಎಸ್.ಎನ್.ರೈ ಎನ್ನುವವರು ತಮ್ಮ ಫಾರೆಸ್ಟ್ ಸೆಕ್ರೆಟರಿಯವರಿಗೆ ಬರೆಯುತ್ತಾರೆ. ಒಂದು ವರ್ಷದಿಂದ ಚೆನ್ನಿಗಪ್ಪನವರು ತಮ್ಮ ಹತ್ತಿರ ಫೈಲನ್ನು ಇಟ್ಟುಕೊಂಡು ಕುಳಿತಿದ್ದಾರೆ. ಸಸ್ಪೆಂಡ್ ಮಾಡಬೇಕೆಂದು ಬರೆಯುತ್ತಾರೆ. ಸಿ.ಓ.ಡಿ.ಗೆ ಹಾಕಬೇಕು ಎಂದು ಬರೆಯುತ್ತಾರೆ. ಲೋಕಾಯುಕ್ತಕ್ಕೆ ಹಾಕಬೇಕೆಂದು ಬರೆಯುತ್ತಾರೆ, ಫೈಲ್ ಅವರ ಹತ್ತಿರ ಇದೆ, ಅಣ್ಣಯ್ಯನ ಮೇಲೆ ಫೈಲ್ ಇದೆ, ಅವನಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕೆಂದು ರೆಕಮೆಂಡೇಶನ್ ಮಾಡುತ್ತಾರೆ. ರಾಷ್ಟ್ರಪ್ರಶಸ್ತಿ ಕೊಡಬೇಕು, ದೊಡ್ಡ ಗೌರವ ಕೊಡಬೇಕೆಂದು ರೆಕಮೆಂಡ್ ಮಾಡುತ್ತಾರೆ. ಅವನನ್ನು ಇವೊತ್ತಿನವರೆಗೂ ಸಸ್ಪೆಂಡ್ ಮಾಡುವುದಕ್ಕಾಗಲಿಲ್ಲ. ಈ ಕೇಸ್‌ನ್ನು ಯಾರು ಮಂತ್ರಿಗಳಿಗೆ ಕೊಟ್ಟಿರುತ್ತಾರೋ ಅವನ ಮೇಲೆಯೇ ಒಂದು ಎನ್‌ಕ್ವೈರಿಯನ್ನು ಹಾಕಬೇಕು ಎಂದು ಬರೆದಿದ್ದಾರೆ, ಸಿ.ಓ.ಡಿ ಗೆ ಹಾಕಬೇಕೆಂದು ಬರೆದಿದ್ದಾರೆ. ಇವೊತ್ತು ಸಸ್ಪೆಂಡ್ ಮಾಡಬೇಕೆಂದು ಎಲ್ಲ ಆಫೀಸರ್‌ಗಳೂ ಮೇಲಿನಿಂದ ಕೆಳಗಿನವರೆಗಿನವರೆಗೂ ಬರೆದಾಗ ಅವನಿಗೊಂದು ಸ್ಪೆಷಲ್ ಕೇಸ್ ಅಂತೆ, ಸ್ಪೆಷಲೆಂದು ನಾನ್ ಐ.ಎಫ್.ಎಸ್.ನವನನ್ನು ಡಿ.ಎಫ್.ಓ. ಮಾಡುವುದಕ್ಕೆ ರೆಕಮೆಂಡೇಶನ್ ಮಾಡುತ್ತಾರೆ. ಒಂದು ಸ್ಪೇಶಲ್ ಕನ್ಸಿಡರೇಶನ್, ಏಕೆ ಅವನನ್ನು ಇನ್ನೂ ಇಲ್ಲಿಯೇ ಇಟ್ಟುಕೊಂಡಿದ್ದೀರಿ? ಅವನ ಸಸ್ಪೆನ್‌ಶನ್ ಫೈಲ್ ಇಟ್ಟುಕೊಂಡು " ಎಲ್ಲರ ಮೇಲೂ

ಒಂದು ಕೇಸ್ ಹಾಕು, ಒಂದು ಕೇಸ್ ಹಾಕು, ಶಿವಕುಮಾರ್‌ರವರ ಮೇಲೆ ಕೇಸ್ ಹಾಕು, ರಮೇಶ್‌ಕುಮಾರ್ ಮೇಲೆ ಕೇಸ್ ಹಾಕು, ಅವರ ಮೇಲೆ ಕೇಸ್ ಹಾಕು" ಎಂದು ಹೇಳಿ ಈ ರೀತಿ ಪ್ರಯೋಗ ಈ ರಾಜ್ಯದಲ್ಲಿ ನಡೆಯುತ್ತಿದೆ. ಇಂಥ ಅಧಿಕಾರಿಗಳನ್ನು ಏನೋ ಒಂದೋ ಎರಡೋ ಇಟ್ಟುಕೊಂಡು ಅವರ ಮೂಲಕ ಇವೊತ್ತು ದ್ವೇಷ ನಡೆಸುವಂಥದ್ದು ನಡೆಯುತ್ತಿದೆ. ಇಂಥ ಐ.ಎಫ್. ಎಸ್. ಅಧಿಕಾರಿಗಳಿರಬಹುದು, ಕೆ.ಎಫ್.ಎಸ್. ಅಧಿಕಾರಿಗಳಿರಬಹುದು, ಫಾರೆಸ್ಟ್ ಸರ್ವೀಸ್ ಅಧಿಕಾರಿಗಳಿರಬಹುದು, ಯಾರೇ ಇರಲಿ ಇಂಥವರದ್ದೆಲ್ಲವನ್ನೂ ಕೂಡ ಬೇರೆಯವರ ಕೈಯಲ್ಲಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಸಿ.ಬಿ.ಐ. ನಿಂದಲೇ ತನಿಖೆಯಾಗಬೇಕು ಎನ್ನುವುದು ನಮ್ಮ ವಾದ. ಯಾವಾಗಲೂ ಹೃದಯದಲ್ಲಿ ಶ್ರೀಮಂತಿಕೆ ಇರಬೇಕು. ಬಹುಶಃ ಅಧಿಕಾರಕ್ಕೆ ಬಂದ ಮೇಲೆ ಅಧ್ಯಕ್ಷರೆ ನನಗೆ ಎಸ್.ಎಂ.ಕೃಷ್ಣ ಸಾಹೇಬರು ಒಂದನ್ನು ಕಲಿಸಿದರು. ಏನು ಕಲಿಸಿದರೆಂದರೆ, ಅಧಿಕಾರ ಬರುವುದು ಎರಡು ವಿಚಾರಕ್ಕಂತೆ, You can make more friends or you can make more enemies. ಅಧಿಕಾರ ಬಂದಾಗ, ಅಧಿಕಾರ ಇದ್ದಾಗ ಯಾರಿಗೆ ತೊಂದರೆ ಕೊಟ್ಟರೂ ಏನೂ ಪ್ರಯೋಜನ ವಾಗುವುದಿಲ್ಲವಂತೆ, ಅಧಿಕಾರವಿದ್ದಾಗ ಫ್ರೆಂಡ್ಸ್‌ಗಳನ್ನು ಸಂಪಾದನೆ ಮಾಡಬೇಕು. ಎಂದು ಎಸ್.ಎಂ. ಕೃಷ್ಣರವರು ಹೇಳಿಕೊಟ್ಟರು. ನಾನು ಅದನ್ನು ಕಲಿತುಕೊಂಡಿದ್ದೇನೆ. ಆದರೆ ಇಲ್ಲಿ ಅಧಿಕಾರ ಬಂದ ದಿನದಿಂದಲೂ ಕೂಡ ಬೇರೆಯವರಿಗೆ ತೊಂದರೆ ಕೊಡುವುದು ಪ್ರಾರಂಭವಾಯಿತು. ಬರೇ ದ್ವೇಷವೇ ಪ್ರಾರಂಭವಾಯಿತು. ಸಿ.ಬಿ.ಐ ತನಿಖೆಯಾಗಲೇಬೇಕೆಂದು ನಾವು ಇಷ್ಟೆಲ್ಲಾ ಆರೋಪ ಮಾಡಿದ್ದೇವೆ. ಆದರೆ ಕಳೆದ ಹತ್ತು ಹನ್ನೊಂದು ತಿಂಗಳಿನಿಂದ ನಡೆದಿರುವುದು ಕೇವಲ ಕನಕಪುರ, ಇನ್ಯಾವುದಾದರೂ ಎಂದರೆ ಕಾಂಗ್ರೆಸ್. ಅದು ಬಿಟ್ಟರೆ ಇನ್ನು ಯಾವ ಇನ್‌ವೆಸ್ಟಿಗೇಶನ್ ನಡೆದಿಲ್ಲ. ಏಕೆ ಆಗುವುದಿಲ್ಲ. ನಿಮ್ಮ ಲೋಕಾಯುಕ್ತವನ್ನೇ ತೆಗೆದುಕೊಳ್ಳಿ, ನಿಮಗೆ ample of powers ಇದೆಯಲ್ಲಾ, ಅದನ್ನು ಕೇವಲ ಶಿವಕುಮಾರ್ ಮೇಲೆ ಮತ್ತು ಕಾಂಗ್ರೆಸ್‌ನವರ ಮೇಲೆ ಮಾತ್ರ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ಮಾತ್ರ ಇವೆಲ್ಲಾ ಕಾನೂನುಗಳಿವೆ? ಮಿಕ್ಕಿದಕ್ಕೆ ಏಕೆ ಬೇಕು ನಿಮಗೆ ಲೋಕಾಯುಕ್ತ? ಏಕೆ ಬೇಕು. ಭಟ್ ಕಮಿಶನ್? ನೀವೇ ಮಾಡಿಕೊಳ್ಳಿ. ಇಷ್ಟೆಲ್ಲಾ

ಬೇರೆಯವರ ಮೇಲೆ ಕೇಸ್ ಮಾಡಿದ್ದೀರಲ್ಲ. ಆದುದರಿಂದ ಈ ಬಗ್ಗೆ ನ್ಯಾಯವನ್ನು ಒದಗಿಸಬೇಕಾದರೆ ಇದನ್ನು ಸಿ.ಬಿ.ಐಗೆ ವಹಿಸಿದರೆ ಉತ್ತಮವೆಂದು ನಾನು ಭಾವಿಸಿಕೊಂಡಿದ್ದೇನೆ. ಸ್ಪೆಶಲ್ ಕೇಸ್ ಏನು, ಫಾರೆಸ್ಟ್‌ನಲ್ಲಿ, ನಮ್ಮ ಚೆನ್ನಿಗಪ್ಪ ಸಾಹೇಬರು ಹೇಳಿದ್ದಾರೆ. 100 ಮೀಟರ್‌ನೊಳಗೆ ಯಾರೂ ಗಣಿಗಾರಿಕೆ ಮಾಡಬಾರದಂತೆ, ರಾಜ್ಯದಲ್ಲಿ ಎಲ್ಲಾ ಕಡೆ ನಡೆಯಬಹುದಂತೆ, ಚಿಕ್ಕಮಗಳೂರಿನಲ್ಲಿ ನಡೆಯಬಹುದು, ಇನ್ನೊಂದು ಕಡೆ ನಡೆಯಬಹುದು, ಚಿಕ್ಕಬಳ್ಳಾಪುರದಲ್ಲಿ ನಡೆಯಬಹುದು, ಕೊಳ್ಳೇಗಾಲದಲ್ಲಿ ನಡೆಯಬಹುದು, ಚಾಮರಾಜನಗರದಲ್ಲಿ ನಡೆಯಬಹುದು, ಇಳಕಲ್‌ನಲ್ಲಿ ನಡೆಯಬಹುದು, ಬೇರೆ ಎಲ್ಲಾ ಕಡೆ ನಡೆಯಬಹುದಂತೆ. ಕನಕಪುರಲ್ಲಿ ಮಾತ್ರ ಫಾರೆಸ್ಟ್‌ನಿಂದ 100 ಮೀಟರ್ ಒಳಗೆ ಮಾಡಬಾರದಂತೆ. ಏನೂ ವ್ಯವಹಾರ ಮಾಡಬಾರದು. ಕನಕಪುರಕ್ಕೇ ಒಂದು ಕಾನೂನು, ರಾಜ್ಯಕ್ಕೇ ಒಂದು ಕಾನೂನು. ಈ ರೀತಿಯಲ್ಲಿ ಈ ರಾಜ್ಯದಲ್ಲಿ ನಡೆಯುತ್ತಿದೆ. ಇದಕ್ಕೆ ಉತ್ತರವನ್ನು ಕೊಡಬೇಕು. ಅರಣ್ಯ ಮಂತ್ರಿಗಳಾದರೂ ಕೊಡಲಿ, ನಮ್ಮ ಮುಖ್ಯಮಂತ್ರಿಗಳಾದರೂ ಕೊಡಲಿ, ಇಲ್ಲದಿದ್ದರೆ ಯಾರು ಬೇಕಾದರೂ ಸರ್ಕಾರದ ಪರವಾಗಿ ಉತ್ತರ ಕೊಡಲಿ. ಏಕೆ ಈ ರೀತಿ ಭೇದಭಾವ ಇದೆ, ಒಬ್ಬರಿಗೊಂದು ಇನ್ನೊಬ್ಬರಿಗೊಂದು ಆಗುತ್ತಿದೆ ಎಂಬ ಬಗ್ಗೆ ರಾಜ್ಯದ ಜನತೆಗೆ ತಿಳಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇನ್ನು ಆಸ್ತಿಗಳು ಆಗಿರುವಂಥದ್ದರ ಬಗ್ಗೆ ಹೇಳುವುದೇನೆಂದರೆ, ಒಂದೇ ವರ್ಷದಲ್ಲಿ 506 ಕೋಟಿ ರೂಪಾಯಿಗಳ ಆಸ್ತಿ ಆಗಿರುವಂಥಾದ್ದು. ಎಲ್ಲೆಲ್ಲೋ ಖರೀದಿ ಆಗಿರುವಂಥದ್ದು, ಏನೇನೋ ವಿಚಾರ, ಅನೇಕ ವಿಚಾರಗಳಿವೆ, ಅದನ್ನೆಲ್ಲಾ ನಾವು ರಾಜ್ಯಪಾಲರಿಗೆ ಕೊಟ್ಟಿದ್ದೇವೆ. ರಾಷ್ಟ್ರಪತಿಗಳಿಗೆ ಕೊಟ್ಟಿದ್ದೇವೆ, ಪ್ರಧಾನ ಮಂತ್ರಿಗಳಿಗೆ ಕೊಟ್ಟಿದ್ದೇವೆ. ಇಲ್ಲಿ ನಮಗೆ ಲೋಕಾಯುಕ್ತದಲ್ಲಿ ನಮಗೆ ನ್ಯಾಯ ಸಿಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರ ಇವೊತ್ತು ಕೂಡ ನಾವು ಸಿ.ಬಿ.ಐ ತನಿಖೆಗೆ ನಾವು ಒತ್ತಾಯ ಮಾಡುತ್ತಿದ್ದೇವೆ. ಇದರಲ್ಲಿ ಏನು ತಾರತಮ್ಯ ಮಾಡಿದ್ದೀರಿ, ಇದನ್ನು ಸರಿಪಡಿಸುವಂಥ ಕೆಲಸ ಆಗಬೇಕು. ಇಂಥ ಅಧಿಕಾರಿಗಳನ್ನು ಯಾರನ್ನು ತಾವು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಾನೂನು ರೀತಿಯಲ್ಲಿ ಕ್ರಮವನ್ನು ಕೈಗೊಂಡು ಅವರನ್ನು ಅಮಾನತ್ತಿನಲ್ಲಿ ಇಡುವಂಥ

ಕೆಲಸವನ್ನು ಮಾಡಬೇಕು. ಬಂಧಿಸುವಂಥ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ :– ಮಾನ್ಯ ಉಪಾಧ್ಯಕ್ಷರೆ, ನಾನೂ ಕೂಡ ಈ ರೂಲ್ 69 ರ ಮೇಲೆ ಮಾತನಾಡುವುದಕ್ಕೆ ಬಯಸುತ್ತೇನೆ. ನನಗೂ ಮಾತನಾಡುವುದಕ್ಕೆ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು :– ಮಾತನಾಡಿ. ಹತ್ತು ನಿಮಿಷ ಮಾತನಾಡಿ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು) :– ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಗಣಿಗಾರಿಕೆಯಲ್ಲಿ ಏನು ಅವ್ಯವಹಾರವಾಗಿದೆ ಮತ್ತು ಲಂಚದ ಆರೋಪಗಳ ಬಗ್ಗೆ ತನಿಖೆ ಆಯೋಗವನ್ನು ರಚನೆ ಮಾಡಿರುವುದು ಮತ್ತು ಆ ಆಯೋಗವನ್ನು ರದ್ದು ಮಾಡಿದ್ದು, ನಂತರ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಿರುವುದರ ಬಗ್ಗೆ ನಿಯಮ 69 ರ ಮೇರೆಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಕಳೆದ ವಾರ ಇದು ಚರ್ಚೆಗೆ ಬಂದಾಗ ನಿಲುವಳಿ ಸೂಚನೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಬಂದಾಗ ನಾನೂ ಕೂಡ ಪೂರ್ವಭಾವಿಯಾಗಿ ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಿದ್ದೆ. ಅದರ ಜೊತೆಗೆ ಮತ್ತೆ ಕೆಲವು ವಿಷಯಗಳನ್ನು ನಾನು ಚರ್ಚೆ ಮಾಡುತ್ತಾ ಮಾನ್ಯ ವಿರೋಧ ಪಕ್ಷದ ಎಲ್ಲ ಗೌರವಾನ್ವಿತ ನಾಯಕರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದೊಂದು ಅತ್ಯಂತ ಪ್ರಾಮಾಣಿಕವಾದ ಸರ್ಕಾರ, ಲಂಚ ಈ ಸರ್ಕಾರದಲ್ಲಿ ಇಲ್ಲವೆಂದು ನಾನು ಹೇಳುವುದಿಲ್ಲ. ನೀವು ಹೇಳಿಕೊಳ್ಳುತ್ತೀರಷ್ಟೆ, ನಮ್ಮ ಸರ್ಕಾರದಲ್ಲಿ ಇರಲಿಲ್ಲವೆಂದು. ನನಗೆ ದಯಮಾಡಿ ಕ್ಷಮಿಸಿ, ನಾವೆಲ್ಲಾ ಅಸಹಾಯಕ ಪರಿಸ್ಥಿತಿಯಲ್ಲಿ ಇದ್ದೇವೆ. ಸುಮ್ಮನೇ ಕೆಸರು ಎರಚಾಡುತ್ತಿದ್ದೇವೆ. ನಮ್ಮ ಕಾಲದಲ್ಲಿ ಇಷ್ಟು ಇರಲಿಲ್ಲ ಎಂದು ನೀವೆಲ್ಲಾ ಕುಳಿತುಕೊಂಡು ಹೇಳುತ್ತೀರಿ. ನಾವು ಹೇಳಿಕೊಳ್ಳುತ್ತೇವೆ, ನಮ್ಮ ಕಾಲದಲ್ಲಿ ಅಷ್ಟು ಇರಲಿಲ್ಲವೆಂದು. ನಾವು ನಾಚಿಕೆ ಪಟ್ಟುಕೊಳ್ಳಬೇಕು, ನನಗಂತೂ ನಿಂತುಕೊಂಡು ಮಾತನಾಡುವುದಕ್ಕೆ ನಾಚಿಕೆಯಾಗಿದೆ. ಬೇಸರ ಮಾಡಿಕೊಳ್ಳಬೇಡಿ ಈ ರೀತಿ ಹೇಳುತ್ತಿದ್ದೇನೆಂದು. ಅಲ್ಲಿ ಕುಳಿತುಕೊಂಡಾಗ ಲಂಚ ಪಡೆದವರು ಇವರು ಎಂದು

ಅಲ್ಲಿ ಕುಳಿತುಕೊಂಡು ಆರೋಪ ಮಾಡುವುದು, ಇಲ್ಲಿ ಕುಳಿತುಕೊಂಡು ನಾವು ಲಂಚ ಪಡೆದೇ ಇಲ್ಲ ಎಂದು ಹೇಳತಕ್ಕಂಥದ್ದು, ಇದೆಲ್ಲಾ ಏಕಪಾತ್ರಾಭಿನಯ ಏನು ನಡೆಯುತ್ತಿದೆ, ಅದನ್ನು ಈ ರಾಜ್ಯದ ಜನರು ನೋಡುತ್ತಿದ್ದಾರೆ. ಈ ಕಡೆಯವರನ್ನು ಆ ಕಡೆಗೆ, ಆ ಕಡೆಯವರನ್ನು ಈ ಕಡೆಗೆ, ಇದು ಚಕ್ರ, ಈ ಮ್ಯೂಸಿಕಲ್ ಚೇರ್ ತಿರುಗುತ್ತಿದೆ. ನಮ್ಮ ಶಿವಕುಮಾರ್‌ರವರು ಮಾತನಾಡುತ್ತಾ ಹೇಳುತ್ತಾರೆ. ಲೋಕಾಯುಕ್ತದ ಬಗ್ಗೆ ನಮಗೆ ವಿಶ್ವಾಸವಿಲ್ಲ, ಆದುದರಿಂದ ಸಿ.ಬಿ.ಐ.ಗೆ ಹಾಕಬೇಕು, ಸಿ.ಬಿ.ಐ ತನಿಖೆಗೆ ವಹಿಸಬೇಕು. ಇದು ಮ್ಯೂಸಿಕಲ್ ಚೇರ್ ತಿರುಗುತ್ತಿರುತ್ತದೆ. ನೋಡೋಣ, ಇವೊತ್ತು ಅವರು ಯಾರ ಯಾರ ಕೈಯಲ್ಲಿ ಮಾಡಿಸುತ್ತಿದ್ದಾರೆ ಮುಂದೆ ನಾವು ಬಂದಾಗ ಅವರ ಕೈಯಲ್ಲಿಯೇ ಮತ್ತೆ ತಿರುಗುಬಾಣ ಬಿಡಿಸುತ್ತೇವೆ ಎನ್ನುವ ಮಟ್ಟಕ್ಕೆ ನಾವು ಇಲ್ಲಿ ಚರ್ಚೆ ಮಾಡುತ್ತೇವೆ ಎಂದರೆ, ರಮೇಶ್‌ಕುಮಾರ್ ಸಾಹೇಬರೇ ಯಾವ ಸಂದೇಶವನ್ನು ನಾವು ಈ ರಾಜ್ಯದ ಜನರಿಗೆ ಕೊಡುತ್ತಿದ್ದೇವೆ? ಯಾವ ದಿಕ್ಕಿನಲ್ಲಿ ಇದು ಹೋಗುತ್ತಿದೆ? ನಾವು ಮ್ಯೂಸಿಕಲ್ ಚೇರ್ ಆಗಿಬಿಟ್ಟಿದ್ದೇವೆ. ಇಲ್ಲಿ ಗಹನವಾದ ಚರ್ಚೆಯಾಗುತ್ತಿಲ್ಲ. ರಾಜಕೀಯದ ಲಾಭವನ್ನು ಮಾಡಿಕೊಳ್ಳುವುದಕ್ಕೋಸ್ಕರ ಈ ಚರ್ಚೆಯನ್ನು ಮಾಡುತ್ತಿದ್ದೇವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಲಂಚದ ಹಿಂದೆ ಇರಲಿಲ್ಲ, ಇವತ್ತು ಇದೆ ಅಥವಾ ಇವತ್ತು ಇಲ್ಲ, ಹಿಂದೆ ಇತ್ತು ಎಂದು ಹೇಳುವುದು ಸರಿಯಲ್ಲ. ಅದನ್ನು ನಾನು ನೇರವಾಗಿ ಹೇಳಿಬಿಟ್ಟೆ. ನಾವೆಲ್ಲಾ ಅನೇಕರು ಅಸಹಾಯಕರಾಗಿ ಮೂಕಸಾಕ್ಷಿಗಳಾಗಿ ನೋಡುತ್ತಿದ್ದೇವೆ. ಕಣ್ಣಿದ್ದರೂ ಕುರುಡರಾಗಿದ್ದೇವೆ. ಕಿವಿಯಿದ್ದರೂ ಕಿವುಡರಾಗಿದ್ದೇವೆ. ಇದು ಗೊತ್ತಿರತಕ್ಕಂಥ ವಿಷಯ. ನಾನು ಸರ್ಕಾರಕ್ಕೆ ಅವತ್ತೇ ಹೇಳಿ ನೀವು ಚರ್ಚೆಗೆ ಒಪ್ಪಿಕೊಳ್ಳಬೇಕು ಎಂದು ಒತ್ತಾಯ ಕೂಡ ಮಾಡಿದೆ. ಅದು ಏನಾಗಿದೆ ಎನ್ನುವ ಸತ್ಯಾಂಶ ನಮಗೂ ಗೊತ್ತಾಗಬೇಕು. ಈ ನಾಡಿನ ಜನರಿಗೂ ಗೊತ್ತಾಗಬೇಕು ಎನ್ನುವಂಥಾದ್ದು ನನ್ನ ಅಭಿಪ್ರಾಯವಾಗಿತ್ತೇ, ಹೊರತು ಇದರಲ್ಲಿ ರಾಜಕೀಯ ಲಾಭವನ್ನು ಮಾಡಿಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿರಲಿಲ್ಲ ಎನ್ನುವ ವಿಚಾರವನ್ನು ನಾನು ತಮ್ಮ ಮೂಲಕ ತಿಳಿಸುವುದಕ್ಕೆ ಇಚ್ಛೇಪಡುತ್ತೇನೆ. ನಾನು ಅವತ್ತು ಪೂರ್ವಭಾವಿಯಾಗಿ ಪ್ರಸ್ತಾಪ ಮಾಡುತ್ತಾ ಒಂದು ಮಾತು ಹೇಳಿದ್ದೆ. ಈಗ ಗಣಿ ಲಾಬಿ ಏನಿದೆ, ಹಿಂದೆ

ಮದ್ಯದ ಲಾಬಿ ಇತ್ತು. ಬಹುತೇಕ ಇವತ್ತು ಏನಾಗುತ್ತದೆ ಗೊತ್ತಿಲ್ಲ. ಸಾರಾಯಿ ನಿಷೇಧವಾದ ಮೇಲೆ ಮದ್ಯದ ಲಾಬಿ ಕಡಿಮೆಯಾಗಿ ಇವತ್ತು ಗಣಿ ಲಾಬಿ, ಭೂ ಮಾಫಿಯಾ ಲಾಬಿಗಳು ಇವತ್ತು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ? ಎಷ್ಟು ಕೊಲೆಗಳು ಆ ಒಂದು ಹಿನ್ನೆಲೆಯಲ್ಲಿ ಆಗುತ್ತಿದೆ ಎನ್ನುವುದು ನಾವು ಅನೇಕ ಸಂದರ್ಭದಲ್ಲಿ ಕೇಳಿದ್ದೇವೆ, ನೋಡಿದ್ದೇವೆ ಮತ್ತು ತಿಳಿದುಕೊಂಡಿದ್ದೇವೆ. ಇವತ್ತು ಗಣಿ ಲಾಬಿಯಲ್ಲಿ ಎಷ್ಟರಮಟ್ಟಿಗೆ ಶಕ್ತಿ ರಾಜಕಾರಣ ಅಥವಾ ಹಣದ ರಾಜಕಾರಣ, ಅದರ ಹಿಂದೆ ಕೆಲಸ ಮಾಡುತ್ತಿದೆ ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ. ಇವತ್ತು ಮೇಲ್ಮನೆಯಲ್ಲಿ ಒಬ್ಬ ಜವಾಬ್ದಾರಿಯುತ ಸದಸ್ಯರು 150 ಕೋಟಿ ರೂಪಾಯಿ ಲಂಚವನ್ನು ಕೊಟ್ಟಿದ್ದೇನೆ ಎನ್ನುವ ಮಾತನ್ನು ಹೇಳಿದರು. ನಾನು ಅದನ್ನು ಸಾರಾಸಗಟವಾಗಿ ಇಲ್ಲವೆಂದು ಹೇಳುತ್ತಿಲ್ಲ, ಲಂಚ ಈಗ ನಡೆದುಕೊಂಡು ಬಂದಿದೆ. ನಾನು ಅವತ್ತು ಕೇಳಿದ ಪ್ರಶ್ನೆ, ಆ ಲಂಚ ಕೊಡುವುದಕ್ಕೆ ಅವರಿಗೆ ಹಣ ಎಲ್ಲಿಂದ ಬಂತು? ಎಷ್ಟು ದಿವಸದಿಂದ ಕೊಟ್ಟುಕೊಂಡು ಬಂದಿದ್ದರು? ಯಾರ್ಯಾರು ಹಣ ಸಂಗ್ರಹಣೆ ಮಾಡಿ ಕೊಟ್ಟರು? ಅದಕ್ಕೆ ಅವರು ಏನಾದರೂ ತೆರಿಗೆ ಕೊಟ್ಟಿದ್ದರಾ? **Income Tax** ಕಟ್ಟಿದ್ದರಾ? **Sales Tax** ಕಟ್ಟಿದ್ದರಾ? ಅವನು ಅಷ್ಟು ಹಣವನ್ನು ಲಂಚ ಕೊಡಬೇಕಾಗಿದ್ದರೆ ಅವರೆಂತಹ ದಗಾಕೋರರು ಇರಬಹುದು. 150 ಕೋಟಿ ಲಂಚ ಕೊಡಬೇಕಾದರೆ ಅವರು ಎಷ್ಟು ದಗಾಕೋರರಿರಬಹುದು? ಈ ರಾಜ್ಯದ ಬೊಕ್ಕಸಕ್ಕೆ ಎಷ್ಟು ವಂಚನೆಯನ್ನು ಮಾಡುತ್ತಿರಬಹುದು? ಇದೆಲ್ಲವನ್ನು ಸೇರಿಸಿ ತನಿಖೆ ಮಾಡಿಸಿ, ಎನ್ನುವ ದೃಷ್ಟಿಯಿಂದ ನಾನು ಅವತ್ತು ಒತ್ತಾಯ ಮಾಡಿದ್ದು. ಇಂತಹ ಒಂದು ಚಂಡಮಾರುತ ಶುರುವಾಗಿದೆಯಲ್ಲ, ಈ ಚಂಡಮಾರುತ ಎಲ್ಲಿಂದ ಪ್ರಾರಂಭವಾಯಿತು? ಅದು 1989 ರಿಂದ ಆಯಿತೋ, 1983 ರಿಂದ ಆಯಿತೋ, 1994 ರಿಂದ ಆಯಿತೋ, 1999 ರಿಂದ ಆಯಿತೋ, 2004 ರಿಂದ ಆಯಿತೋ, ನಾನು ಅವಧಿ ಕೇಳುತ್ತಿಲ್ಲ. ಅದು ಎಲ್ಲಿಂದ ಆಯಿತು? ಅದೆಲ್ಲಾ ಹೊರಗೆ ಬರಲಿ. ನಮಗೂ ಗೊತ್ತಾಗಲಿ ಹಾಗೂ ನಾಡಿನ ಜನತೆಗೂ ಗೊತ್ತಾಗಿ ತಪ್ಪು ಮಾಡಿದವರಿಗೆ ಅವರು ಕೊಡುವ ಶಿಕ್ಷೆ ಯಾವತ್ತು ಕೊಡುತ್ತಾರೋ ಅವತ್ತಾದರೂ ಕೊಡಲಿ. ಎಂತಹ ನ್ಯಾಯಾಂಗ ತನಿಖೆಯನ್ನೂ ನೋಡಿಯಾಗಿದೆ. ಲೋಕಾಯುಕ್ತದ ತನಿಖೆಗಳನ್ನು

ನೋಡಿಯಾಗಿದೆ. ಸಿ.ಬಿ.ಐ ತನಿಖೆಗಳನ್ನು ನೀವೂ ನೋಡಿದ್ದೀರಿ. 1999 ರಿಂದ 2004 ರವರೆಗೆ ಎಷ್ಟು ಸಿ.ಬಿ.ಐ ತನಿಖೆಗೆ ನೀವೇ ಒಪ್ಪಿಸಿದ್ದೀರಿ ಸ್ವಾಮಿ? ಅದರ ಬಗ್ಗೆ ಆತ್ಮಸಾಕ್ಷಿಯಾಗಿ ಹೇಳಿ. ಎಷ್ಟು ಸಿ.ಬಿ.ಐ ತನಿಖೆಗಳನ್ನು ಮಾಡಬೇಕೆಂದು ಆ ಕಡೆಯಿಂದ ಒತ್ತಾಯ ಬಂದಿತ್ತು ಹೇಳಿ. 278 ಕೋಟಿ ರೂಪಾಯಿ ಸಿ.ಎಂ.ಸಿ ಗಳಲ್ಲಿ ಮತ್ತು ಟಿ.ಎಂ.ಸಿ. ಗಳಲ್ಲಿ ದುರುಪಯೋಗವಾಗಿದೆ ಎಂದು ಹೇಳಿ ಒತ್ತಾಯ ಮಾಡಿ ಸಿ.ಬಿ.ಐಗೆ ಕೊಡಿ ಎಂದು ಹೇಳಿದಾಗ ಒಪ್ಪಿಕೊಂಡಿರಾ? ಏಕೆ ಒಪ್ಪಿಕೊಳ್ಳಲಿಲ್ಲ? ಸಿ.ಬಿ.ಐ ಬಗ್ಗೆ ಕೂಡ ಹೇಳಬೇಕಾದರೆ ಇವತ್ತು ಅದರ ಪ್ರಾಮುಖ್ಯತೆ, ಅದರ ಪಾವಿತ್ರ್ಯತೆ ಉಳಿದಿಲ್ಲ. ನೀವು ಇಲ್ಲಿ ಕುಳಿತುಕೊಂಡಾಗ ಸಿ.ಬಿ.ಐ ಗೆ ಕೊಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ಅಲ್ಲಿ ಕುಳಿತುಕೊಂಡಾಗ ಸಿ.ಬಿ.ಐಗೆ ಕೊಡುವುದಕ್ಕೆ ಒತ್ತಾಯ ಮಾಡುತ್ತಾರೆ. ಇದು ನಡೆದುಕೊಂಡು ಬಂದಿರುವುದು. ನಮಗೆ ಬೇಕಾದ ಪಕ್ಷ ಅಲ್ಲಿದ್ದಾಗ ಸಿ.ಬಿ.ಐಗೆ ಕೊಡಿ. ನಮಗೆ ವಿಭಿನ್ನವಾದ ಪಕ್ಷ ವಿರೋಧ ಪಕ್ಷ ಅಲ್ಲಿದ್ದಾಗ ಸಿ.ಬಿ.ಐಗೆ ಬೇಡ. ದಾಖಲೆಗಳನ್ನು ತೆಗೆದುನೋಡಿ. ಆತ್ಮವಂಚನೆ ಮಾಡಿಕೊಂಡು ಮಾತನಾಡುವುದು ಬೇಡ. 278 ಕೋಟಿ ರೂಪಾಯಿ ಸಿ.ಎಂ.ಸಿ ಮತ್ತು ಟಿ.ಎಂ.ಸಿ ದು ಬಂತಲ್ಲ, ಆಗ ಅಲ್ಲಿ ಕುಳಿತುಕೊಂಡು ಲೋಕಾಯುಕ್ತಕ್ಕೆ ಬೇಡ, ಸಿ.ಬಿ.ಐಗೆ ವಹಿಸಿ ಎಂದು ಒತ್ತಾಯ ಮಾಡಿದೆವಲ್ಲ. ಆಗ ತಾವು ಏಕೆ ಒಪ್ಪಿಸಲಿಲ್ಲ? ವಿಭಿನ್ನವಾದ ಪಕ್ಷ ಕೇಂದ್ರದಲ್ಲಿ ಆಡಳಿತ ನಡೆಸುತ್ತಿತ್ತು. ಅದಕ್ಕೆ ಈ ನಾಟಕವನ್ನು ಜನ ಪರದೆ ಮೇಲೆ ನೋಡುತ್ತಿದ್ದಾರೆ. ಜನ ನಿಮ್ಮನ್ನು ಕ್ಷಮಿಸುವುದಿಲ್ಲ, ನಮ್ಮನ್ನೂ ಕ್ಷಮಿಸುವುದಿಲ್ಲ. ಈ ರಾಜ್ಯದ ಆಡಳಿತದ ಸುಧಾರಣೆ ಬಗ್ಗೆ ಎಲ್ಲಿ ಚರ್ಚೆಯಾಗುತ್ತಿದೆ. ಹೇಳಿ. ರಾಜಕೀಯ ಲಾಭ ಪಡೆದುಕೊಳ್ಳುವಂತಹ ಚರ್ಚೆಗಳು, ಆರೋಪಗಳು, ಪ್ರತ್ಯಾರೋಪಗಳು ಆಗುತ್ತಿರತಕ್ಕಂಥಾದ್ದು ನಿಜಕ್ಕೂ ಕೂಡ ಒಳ್ಳೆಯದಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಈ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತಿದ್ದೇನೆ. ಅದನ್ನು ಅವತ್ತು ಕೂಡ ನಾನು ಪ್ರಸ್ತಾಪ ಮಾಡುವಾಗ ಹೇಳುತ್ತಿದ್ದೆ, ಈಗ ಸಾರ್ವಜನಿಕ ವಲಯಕ್ಕೆಂದು ರಾಜ್ಯದಲ್ಲಿ ಮೀಸಲಿಟ್ಟಂತಹ ಕೆಲವು ಪ್ರದೇಶವನ್ನು ಖಾಸಗಿಯವರಿಗೆ ಕೊಡುವುದಕ್ಕೆ ಏಕೆ de-notify ಮಾಡಿದರು? ಯಾರು ಮಾಡಿದರು? ಯಾರ ಕಾಲದಲ್ಲೂ ಎಷ್ಟು ಮಾಡಿದರು? ಎಲ್ಲವನ್ನೂ ಹೇಳಲಿ. ಪಟ್ಟಾ ಜಮೀನು ಗಣಿಗಾರಿಕೆಗೆ

ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇತ್ತೇ, ಇಲ್ಲವೇ? ಯಾರು ಕೊಟ್ಟರು? ಎಷ್ಟು ಕೊಟ್ಟರು? ಯಾವ ಕಾಲದಲ್ಲಿ ಕೊಟ್ಟರು? ಅದನ್ನೂ ಹೇಳಲಿ. ಯಾವ ಕಾಲದಲ್ಲಿ feke permit ಗಳನ್ನು issue ಮಾಡಿ ಯಥೇಚ್ಛವಾಗಿ ಕಬ್ಬಿಣದ ಅದಿರು ಸಾಗಾಣಿಕೆಯಾಯಿತು? ಅದನ್ನು ಯಾರು ನಿಯಂತ್ರಣ ಮಾಡುವುದಕ್ಕೆ ಪ್ರಯತ್ನ ಮಾಡಿದರು? ಈ ಪಟ್ಟಭದ್ರ ಹಿತಾಸಕ್ತಿಗಳು ಏನಿದ್ದವು, ಯಾವಾಗ ಈ ಆರೋಪಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು? feke permit ಗಳನ್ನು ನಿಲ್ಲಿಸುವುದಕ್ಕೆ ಪ್ರಾರಂಭ ಮಾಡಿದಾಗ ಆದೇಶ ಆದಮೇಲೆ ಕೇಂದ್ರ ಸರ್ಕಾರಕ್ಕೆ ಈ ಗಣಿ ಲಾಬಿಯಿಂದ. . . .

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ನಿಮಿಷ yield ಆಗಿ. ನಿಮ್ಮ ಮಾತು ಬಹಳ ಚೆನ್ನಾಗಿ ಪ್ರಾರಂಭವಾಯಿತು. ಆ ರೀತಿ ನಾವು ಪಕ್ಷದ ಹಂಗನ್ನು ಮರೆತು ಮಾತನಾಡುವುದು ಬಹಳ ಒಳ್ಳೆಯದು. ನೀವು ಚೆನ್ನಾಗಿ ಪ್ರಾರಂಭ ಮಾಡಿದಿರಿ. ಅಲ್ಲಿಯವರೆಗೆ ಬಂದು ನಿಂತಿದ್ದೀರಿ. ಸಿ.ಎಂ.ಸಿಗಳ ವಿಚಾರ ನಡೆದಾಗ ನೀವು ಈ ಕಡೆ ಇದ್ದಿರಿ ಏಕೆ ಹೇಳಲಿಲ್ಲ? ನಾನು ಹೇಳುವುದೇನೆಂದರೆ ಇಂತಹ ಸಂದಿಗ್ಧತೆಯಲ್ಲಿ ಇಲ್ಲಿ ಕುಳಿತಾಗ ಒಂದು ನೀವು, ಅಲ್ಲಿ ಕುಳಿತಾಗ ಒಂದು ನಿಲುವು ಮಾಡುವುದರಿಂದ, ಕೆಲವೇ ಜನ ಆ ಕಡೆ, ಈ ಕಡೆ ಕುಳಿತುಕೊಂಡು ಈ ರೀತಿಯ ದಂಧೆಯಲ್ಲಿ ತೊಡಗಿರುವುದರಿಂದ ನಾವು ಅಸಹಾಯಕರಾಗಿದ್ದೇವೆ, ನಾವೂ ಭಾಗಿಗಳು ಎನ್ನುವ ಅಪಾದನೆಗೆ ಒಳಗಾಗಿದ್ದೇವೆ. ಇದರಿಂದ ನಾವು ವಿಮುಕ್ತರಾಗುವುದಕ್ಕೆ ಆ ಕಡೆ, ಈ ಕಡೆ ಇರುವವರನ್ನೆಲ್ಲಾ ಒಟ್ಟಿಗೆ ಹಿಡಿದುಕೊಡುವುದಕ್ಕೆ ಏನು ಮಾಡಬೇಕು ಎಂದು ಹೇಳಿ. ಹೋದರೂ ಹೋಗುತ್ತಾರೆ, ಆ ಕಡೆ, ಈ ಕಡೆಯವರನ್ನೆಲ್ಲಾ ಹಿಡಿದುಕೊಂಡು ಬಿಡೋಣ. ನಾವು ನೆಮ್ಮದಿಯಿಂದ ಇರಬಹುದು, ಗೌರವದಿಂದ ಇರಬಹುದು. ನಮ್ಮ ತಟ್ಟೆ, ಲೋಟ ಕೂಡ ನಾವು ಲೆಕ್ಕ ಕೊಡುತ್ತೇವೆ. ನಾನು ಅಲ್ಲಿ ಕುಳಿತಿದ್ದೆ. ರೇವಜಿತು ಪ್ರಕರಣ ಚರ್ಚೆಗೆ ಬಂತು. ಮಾನ್ಯ ಲಕ್ಷ್ಮಿಸಾಗರ್‌ರವರು ಸಂಸದೀಯ ವ್ಯವಹಾರ ಸಚಿವರಾಗಿದ್ದರು. ಅವರು ಬಂದು ನೀನು ಸರ್ಕಾರವನ್ನು defend ಮಾಡಬೇಕು ಎಂದು ಹೇಳಿದರು. ನಾನು ಅವರಿಗೆ, ನೀವು file ಕೊಟ್ಟು

explain ಮಾಡಿದರೆ ನಾನು ಆಮೇಲೆ ಅಲೋಚನೆ ಮಾಡುತ್ತೇನೆ ಎಂದು ಹೇಳಿದೆ. ನನ್ನ ಮನಸ್ಸಿಗೆ ಸರಿ ಅನಿಸಲಿಲ್ಲ. ನಾನು refuse ಮಾಡುತ್ತೇನೆ, ಇದನ್ನು defend ಮಾಡುವುದಿಲ್ಲವೆಂದು ಹೇಳಿದೆ. ರಾಮ ಪೋತದಾರ್ ಎಂದು ಒಬ್ಬ ಮಂತ್ರಿ ಇದ್ದರು. ಮಾನ್ಯ ಜಿ.ಎಸ್.ಆಚಾರ್, ಬೈಂದೂರು, ಅವರ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಚುಂಚನಕಟ್ಟೆಯಲ್ಲಿ ಇದ್ದಂತಹ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಖೋಡೆಯವರಿಗೆ 5 ಲಕ್ಷ ರೂಪಾಯಿಗೆ ಮಾರಿಬಿಟ್ಟಿದ್ದೇವೆ. ಅದಕ್ಕೆ ಸ್ವಲ್ಪ ದುಡ್ಡು ಕಟ್ಟಿದ್ದಾರೆ, ಇನ್ನು ಸ್ವಲ್ಪ ದುಡ್ಡು ಕಂತಿನಲ್ಲಿ ಕಟ್ಟುತ್ತಿದ್ದಾರೆ ಎಂದು ಹೇಳಿದರು. 5 ಲಕ್ಷ ರೂಪಾಯಿಗೆ ಸಹಕಾರಿ ಸಕ್ಕರೆ ಕಾರ್ಖಾನೆ ಅವರಿಗೆ ಕೊಡುವುದಾದರೆ, ನನಗೆ ಕೊಡಿ ಎಂದು ಹೇಳಿದೆ. ಆಗ ನಾನು ಆಡಳಿತ ಪಕ್ಷದ ಸದಸ್ಯನಾಗಿದ್ದೆ. ಧೈರ್ಯ ಎಂದರೆ ಹೇಗಿರಬೇಕು ಎಂದರೆ ಚೆನ್ನಾಗಿ ಸ್ಟಾರ್ಟ್ ಮಾಡಿದಿರಿ ನೀವು. ನೀವು ಅದೇ direction ನಲ್ಲಿ ಹೋಗಬೇಕು, ಆದರೆ ಮತ್ತೆ ನೀವು ಈ ಕಡೆ ತಿರುಗಿಕೊಂಡಿರಿ. ನಾನು ಹೇಳುವುದು, 81 ರದು ಬೇಡ, ಎಲ್ಲಾ ಯಾವ್ಯಾವುದು ಇದೆ, ಯಾವ್ಯಾವನು ತಿಂದಿದ್ದಾನೆ, ಅದನ್ನೆಲ್ಲಾ ವಾಂತಿ ಮಾಡಲೇಬೇಕು. ಯಾವನ್ಯಾವನು ಕೊಳೆ ತಿಂಧಿದ್ದಾನೆ, ಹೊಟ್ಟೆ ಕೊಳೆಗಾಗಿದೆ ಅವನಿಗೆ ಭೇದಿಗೆ ಕೊಡಲೇಬೇಕು. ಇಲ್ಲದೆ ಹೋದರೆಜನರಿಗೆ ಯಾರ ಹೊಟ್ಟೆ ಕೆಟ್ಟಿದೆ ಎಂದು ಹೇಗೆ ಗೊತ್ತಾಗಬೇಕು? ಸೀಟ್‌ಗಳಲ್ಲಿ ವ್ಯತ್ಯಾಸ ಇಲ್ಲ. ಪಕ್ಷ, ಪಂಗಡ ಎಂದು ಹೇಳುತ್ತೇವೆ. ಆದ್ದರಿಂದ ಯಾರು ಅಸಲಿ? ಯಾರು ನಕಲಿ? ಅವರನ್ನು ಹೇಗೆ ಹಿಡಿದುಕೊಳ್ಳುವುದು ಎಂದು ಸ್ವಲ್ಪ ಧೈರ್ಯ ಮಾಡಿ ಹೇಳಿ? ಹೇಗೊ ನೀವು Ruling party ಯಲ್ಲಿದ್ದೀರಿ, You are a senior member. ಗೌರವ, ವಿಶ್ವಾಸ, ನಂಬಿಕೆ ನಿಮ್ಮ ಮೇಲೆ ಇದ್ದರೆ ಭೂಮಿ ಹಗರಣದಂತಹ ದೊಡ್ಡ ಜವಾಬ್ದಾರಿಯನ್ನು ನಿಮ್ಮ ಹೆಗಲಿಗೆ ಹಾಕುತ್ತಾರೆ. You should dictate. You should take this situation to your advantage and direct the Government. ನೀವು ಹೇಗೆ ಮಾಡಿ ಎಂದು ಹೇಳಬೇಕು.

ಶ್ರೀ **ಹೆಚ್. ಆಂಜನೇಯ** :- ಈಗ ಜನಾರ್ಧನ ರೆಡ್ಡಿಯವರನ್ನು ಹಿಡಿದುಕೊಂಡಿದ್ದೀರಲ್ಲ, ಅವರಿಂದಲೇ ಎಲ್ಲಾ ಮಾಡಿಸಿ.

ಶ್ರೀ ಎ.ಟಿ. ರಾಮಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ಎಲ್ಲವನ್ನು ಅವರಿಗೆ ಹಿತವಾಗೇ ಮಾತನಾಡಬೇಕೆಂದರೆ, ಹಾಗೆ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಕಹಿ ಬಂದರೂ ನುಂಗಬೇಕು, ಸಿಹಿ ಬಂದರೂ ನುಂಗಬೇಕು. ನೀವು ಸಿಹಿ ಮಾತ್ರ ನುಂಗುತ್ತೇವೆ, ಕಹಿ ಆದರೆ ನುಂಗುವುದಿಲ್ಲವೆನ್ನುವುದು ಇದೆಯಲ್ಲಾ, ಒಂದು ಸಾರಿ ಚಪ್ಪಾಳೆ ತಟ್ಟುತ್ತೇವೆಂದು ಹೇಳಿದರೆ, ಇನ್ನೊಂದು ಸಾರಿ ಅದು ಆಗುವುದಿಲ್ಲವೆಂದರೆ, ನೀವು ಎರಡನ್ನೂ ಸ್ವೀಕಾರ ಮಾಡುವುದಕ್ಕೆ ಸಿದ್ಧರಿರಬೇಕು. ಅದನ್ನು ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಈಗಾಗಲೇ ಮಾನ್ಯ ಉಪಾಧ್ಯಕ್ಷರು ಭಾಷಣವನ್ನು ಬೇಗ ಮುಗಿಸಿಯೆಂದು ಹೇಳಿದ್ದಾರೆ.

ಶ್ರೀ ಅಂಜನಮೂರ್ತಿ :- ತಾವು ಭಾಷಣ ಪ್ರಾರಂಭ ಮಾಡಿದ್ದು ಅಮೋಘವಾಗಿತ್ತು.

ಶ್ರೀ ಎ.ಟಿ. ರಾಮಸ್ವಾಮಿ:- ಇಲ್ಲಿ ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು. . . .

ಶ್ರೀ ಕೆ.ಆರ್.ರಮೇಶ್‌ಕುಮಾರ್ :- ನಾವು ಊಟದ ತಟ್ಟೆ, ಲೋಟ, ಎಲ್ಲಾ ಲೆಕ್ಕ ಕೊಡುವುದಕ್ಕೆ ತಯಾರಿದ್ದೇವೆ.

ಶ್ರೀ ಎ.ಟಿ.ರಾಮಸ್ವಾಮಿ :- ನಿಮಗಲ್ಲ, ನೀವು ಏಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ? ಹೆಗಲು ಮುಟ್ಟಿ ನೋಡಿಕೊಳ್ಳುವ ಜನ, ಬಹಳ ಜನರು ಇದ್ದಾರೆ. ನಾವೆಲ್ಲಾ ಇಲ್ಲಿ ಅಸಹಾಯಕರಾಗಿದ್ದೇವೆ, ಮೂಕಸಾಕ್ಷಿಗಳಾಗಿ ಇದ್ದೇವೆ. ನಿಮಗೆ ಏಕೆ ಅದು? ಈಗ ಯಾರು ಯಾವ ಕಾಲದಲ್ಲಿ ಗಣಿಯಲ್ಲಿ ಇಷ್ಟು ಸೋರಿಕೆ ಆಗುತ್ತಾ ಇದೆಯೆಂದು ಯಾವ ಮುಖ್ಯಮಂತ್ರಿ first ಬರೆದರು ಹೇಳಿ. ಇಲ್ಲ ಯಾವ ಸರ್ಕಾರ ಮೊದಲು ಬರೆಯಿತು ಹೇಳಿ. ಅವರು at least ಬರೆಯುವಂಥ ಧೈರ್ಯವನ್ನು ತೋರಿಸಿದ್ದಾರಲ್ಲಾ, ಬರೆಯುವ ತನಕ ಲಂಚದ ಆರೋಪವನ್ನು ಮಾಡಿರಲಿಲ್ಲ, ಮುಂಚೆ ಲಂಚ ಇರಲಿಲ್ಲವೇ? ನಾನು ಈಗ ಲಂಚವಿಲ್ಲವೆಂದು ಹೇಳಲಿಲ್ಲವಲ್ಲಾ, ಇವತ್ತು ಆರೋಪ ಮಾಡಬೇಕಾದರೆ, ಕಾರಣ ಏನು? ಯಾವಾಗ

ಬಿಗಿ ಮಾಡುವುದಕ್ಕೆ ಹಿಡಿದರೋ, ಆಗ ಈ ಪಟ್ಟಭದ್ರ ಹಿತಾಸಕ್ತಿಗಳು ಆರೋಪ ಮಾಡುವುದಕ್ಕೆ ಪ್ರಾರಂಭ ಮಾಡಿದವು. ಆ ದಿಕ್ಕಿನಲ್ಲಿ ಮೊದಲಿನಿಂದಲೂ ಏನೇನು ನಡೆಯಿತು? ಏನೇನು ಆಯಿತೆನ್ನುವುದನ್ನು ಸರ್ಕಾರ ಅದರ ಬಗೆಗ ಕೂಲಂಕೂಷವಾಗಿ ಉತ್ತರ ಕೊಡುವಾಗ ಹೇಳಬೇಕೆನ್ನುವ ಮಾತನ್ನು ಹೇಳುತ್ತೇನೆ. ನೀವು ಒಂದು ಕಡೆ ಹೇಳುತ್ತೀರಿ, ನಮಗೆ ನ್ಯಾಯಾಂಗ ಆಯೋಗದ ಬಗ್ಗೆ ವಿಶ್ವಾಸವಿಲ್ಲ, ಲೋಕಾಯುಕ್ತದ ಬಗ್ಗೆ ಕೂಡ ವಿಶ್ವಾಸವಿಲ್ಲ, ನೀವೇ ರಾಷ್ಟ್ರಪತಿಯವರಿಗೆ, ಮಾನ್ಯ ಕೆ.ಆರ್. ರಮೇಶ್‌ಕುಮಾರ್‌ರವರೆ, ನಿಮ್ಮ ಪಕ್ಷದ ವತಿಯಿಂದ ಅರ್ಜಿಯನ್ನು ಕೊಟ್ಟಾಗ, ಲೋಕಾಯುಕ್ತಕ್ಕೆ ಕೂಡ ಇವರು ಕೊಡುವುದಿಲ್ಲ, ಲೋಕಾಯುಕ್ತಕ್ಕೆ ಕೊಡುತ್ತಾರೆಂಬ ವಿಶ್ವಾಸ ನಮಗಿಲ್ಲವೆಂಬ ಮಾತನ್ನು ಹೇಳಿದ್ದೀರಿ. ಅಂದರೆ ಅವತ್ತು ಲೋಕಾಯುಕ್ತಕ್ಕೆ ಕೊಡಬೇಕೆಂಬ ಮಾತನ್ನು ಅವತ್ತು ಹೇಳುತ್ತೀರಿ. ನಿಮ್ಮಲ್ಲೇ ದ್ವಂದ್ವ ನಿಲುವು. ಲೋಕಾಯುಕ್ತದ ಬಗ್ಗೆ ವಿಶ್ವಾಸವಿಲ್ಲ, ನ್ಯಾಯಾಂಗ ತನಿಖೆ ಬಗ್ಗೆ ವಿಶ್ವಾಸವಿಲ್ಲ. ನಿಮಗೆ ಇವತ್ತು ಏಕಾಏಕಿ ಸಿ.ಬಿ.ಐ ಮೇಲೆ ವಿಶ್ವಾಸ ಏತಕ್ಕೆ ಬಂದಿದೆಯೆಂದರೆ, ನಿಮ್ಮದೇ ಆದಂತಹ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದೆಯೆಂಬ ಒಂದೇ ಒಂದು ಕಾರಣಕ್ಕಾಗಿ, ಆ ವಿಶ್ವಾಸ ಬಂದಿದೆ. ಅದರ ಪ್ರಾಮುಖ್ಯತೆ, ಪ್ರಾಮಾಣಿಕತೆಯ ಬಗ್ಗೆಯೂ ಕೂಡ ಸಂಶಯ ಹತ್ತು ಹಲವಾರು ಬಾರಿ, ನೀವು ಈ ಕಡೆ ಕುಳಿತುಕೊಂಡಾಗ ನೀವು ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವಂಥಾದ್ದು ದಾಖಲೆಗಳಲ್ಲಿ ಇದೆ.

ಶ್ರೀ ಕೆ.ಶ್ರೀನಿವಾಸ ಗೌಡ (ಕೋಲಾರ) :– ಮಾನ್ಯ ಎ.ಟಿ. ರಾಮಸ್ವಾಮಿಯವರೆ, ತಾವು ಒಂದು ನಿಮಿಷ yield ಆಗಿ. ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಮಾತನಾಡುವಾಗ, ನಾವು ಸಿ.ಬಿ.ಐ ತನಿಖೆಗೆ ವಿರೋಧವಿಲ್ಲವೆನ್ನುವ ರೀತಿಯಲ್ಲಿ ಹೇಳಿದರೂ ಕೂಡ, ನಾನು ಒಂದು ವಿಚಾರವನ್ನು ಜ್ಞಾಪಕ ಮಾಡಿಕೊಳ್ಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಬಿ.ಬಿ.ಶಿವಪ್ಪನವರು, ಆಗಿನ ಲೋಕೋಪಯೋಗಿ ಮಂತ್ರಿಗಳಾಗಿದ್ದಂತಹ ಮಾನ್ಯ ದೇವೇಗೌಡರ ಮೇಲೆ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಒಂದು ಕಂಪ್ಲೇಂಟ್ ಕೊಡುತ್ತಾರೆ. ಅದನ್ನು ಆಗಿನ ಮುಖ್ಯಮಂತ್ರಿಯಾಗಿದ್ದಂತಹ ಮಾನ್ಯ ರಾಮಕೃಷ್ಣ

ಹೆಗಡೆಯವರು COD ಗೆ refer ಮಾಡುತ್ತಾರೆ. ಆಗ ಮಾನ್ಯ ದೇವೇಗೌಡರು ಊರು ಊರು ಓಡಾಡಿ, ಒಬ್ಬ Circle Inspector, Sub Inspector ನನ್ನನ್ನು question ಮಾಡುತ್ತಾರೆಂಬ ಮಾತನ್ನು ಆಡುತ್ತಾರೆ. ಇವತ್ತು ಈ ಲೋಕಾಯುಕ್ತರು, appointed by the Government, that too Chief Minister. ಅವರ ಮೇಲೆ ಆದಂತಹ ಆರೋಪವನ್ನು, ಅವರ ಮೇಲೆಯೇ ಇವರು ಹೇಗೆ ಎನ್‌ಕ್ವೈರಿ ಮಾಡಲು ಸಾಧ್ಯವಿದೆ? ಇದೊಂದಕ್ಕೆ ಕ್ಲ್ಯಾರಿಫೈ ಮಾಡಿ.

ಶ್ರೀ ಎನ್. ಚೆಲುವರಾಯಸ್ವಾಮಿ :- ತಾವು ಅಲ್ಲೆ ಇದ್ದೀರಿ, 250 ಕೋಟಿ ರೂಪಾಯಿಗಳ ಹಗರಣದಲ್ಲಿ, ಆಗ ಆರೋಪ ಮಾಡಿದರಲ್ಲಾ, ಅವತ್ತು ತಾವು ಎಲ್ಲಿ ಹೋಗಿದ್ದೀರಿ?

ಶ್ರೀ ಕೆ. ಶ್ರೀನಿವಾಸ ಗೌಡ :- ಮಾನ್ಯ ಚೆಲುವರಾಯಸ್ವಾಮಿಯವರೆ, ನಾನು ಮಾತನಾಡಿದ ಮೇಲೆ ತಾವು ಮಾತನಾಡಿ. ಅವತ್ತು ಮಾನ್ಯ ದೇವೇಗೌಡರು ಊರು, ಟೌನ್, ಪಟ್ಟಣ, ಹಳ್ಳಿ, ಎಲ್ಲಾ ಓಡಾಡಿ ಹೇಳಿದರು. ಒಬ್ಬ Circle Inspector ಕೈಯಲ್ಲಿ ನನ್ನನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು enquiry ಮಾಡಿಸಿದರು. ಇವತ್ತು ನೀವು ಲೋಕಾಯುಕ್ತದಿಂದ enquiry ಮಾಡುತ್ತಿದ್ದೀರಿ. ಲೋಕಾಯುಕ್ತ appointed by the Government, that too Chief Minister. ಅವರ ಮೇಲೆ ಬಂದಂತಹ ಆರೋಪವನ್ನು ಇವರು ಎಷ್ಟರ ಮಟ್ಟಿಗೆ ಅದನ್ನು enquiry ಮಾಡಿ, ಇದನ್ನು ಸರ್ಕಾರಕ್ಕೆ, ಜನರಿಗೆ ಒಪ್ಪಿಸಬಹುದು? ಇದು ಇವತ್ತಿನ ವ್ಯವಸ್ಥೆ ಇದಕ್ಕೆ ನೀವು ಉತ್ತರವನ್ನು ಕೊಡಿ. ಲೋಕಾಯುಕ್ತಕ್ಕೆ ಕೊಡುವಾಗ ಗಣಿ ಲಂಚದ ವಿಷಯದ reference ಇಲ್ಲ, ಇಂಥಾದ್ದರಲ್ಲಿ, terms of reference ನಿಂದ ನೀವು ಇಂಥ ಎನ್‌ಕ್ವೈರಿ ಗೆ ಅವರು ಬೇಡ. ಸಿ.ಬಿ.ಐ ಆಫೀಸರ್ಸ್ ಅನ್ನು ಕರೆದು ಎನ್‌ಕ್ವೈರಿ ಮಾಡಿಸಬೇಕೆಂದು ಬರೆದದ್ದು ಒಂದೇ ಒಂದು ತಪ್ಪಿಗೆ ನೀವು ಅವರನ್ನು ಕಿತ್ತು ಹಾಕಿದ್ದೀರಿ. ಅವರನ್ನು ಕಿತ್ತು ಹಾಕುವಾಗಲೇ ಸ್ಟೇಜ್ ಅನ್ನು ready ಮಾಡಿಸಿದ್ದೀರಿ. ಇದು ಇವತ್ತು ಆಗಿರುವಂತಹ ವ್ಯವಸ್ಥೆ. ಇದಕ್ಕೆ ಉತ್ತರವನ್ನು ಹೇಳಿ. ನಾವು ಇವತ್ತು ಸಿ.ಬಿ.ಐ. ಗೆ ಏಕೆ ಕೇಳುತ್ತಿದ್ದೇವೆಂದರೆ, ಇವೆಲ್ಲಾ ತನಿಖೆ ಆಗಬೇಕು ಈ

ಬಗ್ಗೆ ಸಿ.ಬಿ.ಐ. enquiry ಆದರೆ, ಸ್ವಲ್ಪ ನಿಜಾಂಶ ಹೊರಗೆ ಬರುತ್ತದೆ. ಇದನ್ನು ಕೇಳುತ್ತಿದ್ದೇವೆ, ಇಲ್ಲವೆಂದು ಅಲ್ಲ. ಇದನ್ನು ಬಿಟ್ಟು ಅವತ್ತಿಗೆ ಒಂದು ನ್ಯಾಯ, ಇವತ್ತಿಗೆ ಒಂದು ನ್ಯಾಯಾನಾ? ಇದನ್ನು ಅರ್ಥ ಮಾಡಿಕೊಂಡು ಮಾತನಾಡಿ.

ಶ್ರೀ ಎಸ್. ಚೆಲುವರಾಯಸ್ವಾಮಿ :- ಮಾನ್ಯ ಕೆ.ಶ್ರೀನಿವಾಸ ಗೌಡರೆ, ಅವತ್ತು ತಾವು ಇಲ್ಲಿ ಕುಳಿತುಕೊಂಡಿದ್ದೀರಿ, ಆಗ ಜನತಾದಳದಲ್ಲಿ ಗೆದ್ದಿದ್ದಿರಿ. 250 ಕೋಟಿ ರೂಪಾಯಿಗಳ ನಗರ ಸಭೆಯ ಹಗರಣ ಬಂದಾಗ, ಬಿ.ಜೆ.ಪಿ ವಿರೋಧಪಕ್ಷದಲ್ಲಿದ್ದವರು, ಸಿ.ಬಿ.ಐ. ತನಿಖೆಗೆ ಕೇಳಿದಾಗ, ತಾವು ಇಲ್ಲೆ ಕುಳಿತಿದ್ದಿರಲ್ಲಾ, ಟೇಬಲ್ ಅನ್ನು ಕುಟ್ಟಿದ್ದಿರಲ್ಲಾ, ಈಗ ಇರುವಂಥ ನಿಮ್ಮ ಪಾರ್ಟ್‌ನರ್ ಆಗ ಏನು ಮಾಡಿದರು?

ಶ್ರೀ ಕೆ.ಶ್ರೀನಿವಾಸ ಗೌಡ :- ಅವತ್ತು ಕೂಡ ನಾನು ಸಿಬಿಐ ತನಿಖೆ ಮಾಡಿಯೆಂದು ಹೇಳಿದ್ದೆ. ಅವತ್ತು ಹೇಳಿದ್ದೇನೆ, ಇವತ್ತು ಹೇಳುತ್ತಾ ಇದ್ದೇನೆ, ಇಲ್ಲವೆಂದು ಹೇಳಿಲ್ಲ. ಅವತ್ತು ನಾನು ಇಲ್ಲೆ ಕುಳಿತಿದ್ದೆ, ನೀವೂ ಇಲ್ಲೇ ಕುಳಿತಿದ್ದೀರಿ.

(ಗೊಂದಲ)

ಶ್ರೀ ಎಸ್. ಚೆಲುವರಾಯಸ್ವಾಮಿ :- ನಿಮ್ಮ ಬಣ್ಣ ಚೆನ್ನಾಗಿ ಬಯಲಾಗಿದೆ, ಕುಳಿತುಕೊಳ್ಳಿ.

ಶ್ರೀ ಕೆ.ಶ್ರೀನಿವಾಸ ಗೌಡ :- ನಾನು ಸಿಬಿಐ ತನಿಖೆ ಆಗಬಾರದೆಂದು ಹೇಳಲಿಲ್ಲ, ಆಗಬೇಕು ಅವತ್ತು ಸಿಬಿಐ ತನಿಖೆಯಾಗಬೇಕೆಂದು ನಾನು ಹೇಳಿದ್ದೇನೆ. ಆಗ ನಾನು ವಿರೋಧಪಕ್ಷದಲ್ಲಿ ಇದ್ದಾಗಲೂ ಹೇಳಿದ್ದೇನೆ. ಇವತ್ತೂ ಹೇಳುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ :- ಮಾನ್ಯ ಉಪಾಧ್ಯಕ್ಷರೆ, ನಾನು ಮೊದಲೇ ಹೇಳಿದೆ. ನಿಮಗೆ ವಿಭಿನ್ನ ಪಕ್ಷ ಅಲ್ಲಿ ಅಧಿಕಾರದಲ್ಲಿದ್ದಾಗ ಇವರಿಗೆ ಸಿ.ಬಿ.ಐ ತನಿಖೆ ಬೇಡ, ಅವರದೇ ಪಕ್ಷ ಅಲ್ಲಿ ಅಧಿಕಾರದಲ್ಲಿ ಇದ್ದಾಗ, ಅವರಿಗೆ ಸಿಬಿಐ ತನಿಖೆ ಬೇಕು. ಅದಕ್ಕೇ ನಾನು ಪ್ರಸ್ತಾವಿಕವಾಗಿ ಮೊದಲೇ ಮಾತನಾಡುವಾಗ ಹೇಳಿದೆ. 278 ಕೋಟಿ ರೂಪಾಯಿಗಳ ಹಗರಣ, TMC ದು, CMC. ಬಗ್ಗೆ ಚರ್ಚೆ ಆದಾಗ CBI ತನಿಖೆಗೆ ಒತ್ತಾಯ ಮಾಡಿದಾಗ, ನಿಮಗೆ ಏಕೆ ಸಿಬಿಐ ಮೇಲೆ ಆ

ಒಂದು ವಿಶ್ವಾಸ ಕಡಿಮೆ ಆಗಿತ್ತು. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತಿದ್ದೇನೆ. ಒಟ್ಟಿನಲ್ಲಿ ಈ ಗಣಿ ಲಂಚ ಹಗರಣದಲ್ಲಿ ಭ್ರಷ್ಟರು ಇದ್ದಾರೆ, ಮೋಸಗಾರರು ಇದ್ದಾರೆ, ವಂಚಕರು ಕೂಡ ಇದ್ದಾರೆ, ಇದರ ಮೇಲೆ ಕಠಿಣವಾಗಿ ಕ್ರಮ ತೆಗೆದುಕೊಳ್ಳಲು ಹೊರಟಾಗ ಪಟ್ಟಭದ್ರ ಹಿತಾಸಕ್ತಿಗಳು ಇಲ್ಲ ಸಲ್ಲದ ಆರೋಪಗಳನ್ನು ಹೆಚ್ಚಾಗಿ ಮಾಡುವುದಕ್ಕೆ ಪ್ರಯತ್ನವನ್ನು ಪಟ್ಟಿದ್ದಾರೆ. ಇಲ್ಲಿ ಶಕ್ತಿ ರಾಜಕಾರಣ, ಹಣದ ರಾಜಕಾರಣ, ಬಹು ಮುಖ್ಯವಾಗಿ ಕೆಲಸವನ್ನು ಮಾಡುತ್ತಿದೆ. ಇದರಲ್ಲಿ ತನಿಖೆಯಾಗಲೇಬೇಕೆಂದು ನನ್ನ ಒತ್ತಾಯವಿದೆಯೆನ್ನುವಂಥ ಮಾತನ್ನು ಹೇಳುತ್ತಾ, ತಮಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ಸರ್ಕಾರದಿಂದ ಉತ್ತರ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬಹಳ ವಿಸ್ತ್ರತವಾದಂಥ ಚರ್ಚೆ ಶ್ರೀ ಯು.ಎಲ್.ಭಟ್‌ರವರ ಆಯೋಗದ ವಿಚಾರದಲ್ಲಿ ಸಮಾಪ್ತಿಗೊಳಿಸಿದ ಬಗ್ಗೆ ಪ್ರಸ್ತಾಪ ಬಂದಿದೆ. ದಿನಾಂಕ : 21-03-2007 ರಂದು ವಿರೋಧಪಕ್ಷದ ನಾಯಕರು, ನಿಯಮ 60 ರಡಿಯಲ್ಲಿ ರಾಜ್ಯದಲ್ಲಿ ಗಣಿ ಕೈಗಾರಿಕೆಯಲ್ಲಿ ನಡೆದಿರಬಹುದಾದ ಅವ್ಯವಹಾರ ಮತ್ತು ವಿಧಾನ ಪರಿಷತ್ತಿನ ಸದಸ್ಯ ಶ್ರೀ ಜನಾರ್ಧನ ರೆಡ್ಡಿಯವರು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಅವರ ಸಂಪುಟ ಸಹೋದ್ಯೋಗಿ ಶ್ರೀ ಸಿ. ಚೆನ್ನಿಗಪ್ಪನವರ ವಿರುದ್ಧ ಮಾಡಿದ ಲಂಚದ ಆರೋಪಗಳನ್ನು ತನಿಖೆ ನಡೆಸಲು ಸರ್ಕಾರ ದಿನಾಂಕ : 24-07-2006 ರಂದು ನ್ಯಾಯಮೂರ್ತಿ ಶ್ರೀ ಯು.ಎಲ್.ಭಟ್‌ರವರನ್ನು ವಿಚಾರಣಾ ಆಯೋಗವನ್ನಾಗಿ ನೇಮಿಸಿತು. ದಿನಾಂಕ: 21-11-2006 ರಂದು ಯು.ಎಲ್.ಭಟ್‌ರವರು ಸತ್ಯಾನ್ವೇಷಣೆಗೆ ಸಿಬಿಐ ತನಿಖೆ ಸೂಕ್ತವೆಂದು, ಅವರ ನೆರವನ್ನು ಕೋರಿದರು. ದಿನಾಂಕ :7-03-2007 ರಂದು ನ್ಯಾಯಮೂರ್ತಿ ಯು.ಎಲ್.ಭಟ್‌ರವರು ತಮ್ಮ ಅಧಿಕಾರಕ್ಕೆ ರಾಜೀನಾಮೆಯನ್ನು ನೀಡಿದರು. ರಾಜ್ಯಪಾಲರೊಂದಿಗೆ ಚರ್ಚೆಯನ್ನು ನಡೆಸಿದ್ದಾರೆ. ಮಾನ್ಯ ರಾಜ್ಯಪಾಲರು ಕೇಂದ್ರಕ್ಕೆ ಈ ಬಗ್ಗೆ ವರದಿ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ದಿನಾಂಕ:08-03-2007 ರಂದು ನಡೆದ ಸಚಿವ ಸಂಪುಟ ನ್ಯಾಯಮೂರ್ತಿ ಯು.ಎಲ್.ಭಟ್‌ರವರ

ರಾಜೀನಾಮೆಯನ್ನು ಅಂಗೀಕರಿಸಿ, ವಿಚಾರಣೆಯನ್ನು ಲೋಕಾಯುಕ್ತದವರಿಗೆ ವಹಿಸಿ, ದಿನಾಂಕ: 12-03-2007 ರಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಮಿತ್ರ ಪಕ್ಷದ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಿಂದಲೇ ಲಂಚದ ಆರೋಪ ನೇರವಾಗಿ ಮುಖ್ಯಮಂತ್ರಿ ಹಾಗೂ ಇತರೇ ಇಬ್ಬರು ಸಚಿವರ ವಿರುದ್ಧವಿರುವುದರಿಂದ ಸತ್ಯ ಹೊರಗೆಡವಲು ಸಿಬಿಐ ತನಿಖೆಯಾಗಲೇಬೇಕೆಂಬುದು ನಮ್ಮ ಪಕ್ಷದ ನಿಲುವು; ಸರ್ಕಾರ ತಾನೇ ನೇಮಿಸಿದ ವಿಚಾರಣಾ ಆಯೋಗವನ್ನು ತಾನೇ ರದ್ದುಗೊಳಿಸಿ, ನ್ಯಾಯಾಂಗ ವ್ಯವಸ್ಥೆಗೆ ಅಪಮಾನ ಮಾಡಿರುವುದು, ಗಂಭೀರದ ವಿಷಯ, ಇದೊಂದು ಅತ್ಯಂತ ಸಾರ್ವಜನಿಕ ಮಹತ್ವದ ವಿಷಯ. ವಿಷಯ ನಿರ್ದಿಷ್ಟತೆಗಾಗಿ ಸರ್ಕಾರ ಇಂತಹ ತೀರ್ಮಾನದ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸಭೆಯಲ್ಲಿ ಚರ್ಚಿತವಾಗಬೇಕಾದದ್ದು, ಈ ನಿಲುವಳಿ ಸೂಚನೆಯೆಂದು ಹೇಳಿ, ವಿರೋಧ ಪಕ್ಷದ ನಾಯಕರು ಹಾಗೂ ಇತರ ಸದಸ್ಯರು ಸಹಿ ಮಾಡಿ, ಆ ದಿವಸ ಕೊಟ್ಟ ನಂತರ, ಮಾನ್ಯ ಅಧ್ಯಕ್ಷರು ಇದನ್ನು ನಿಯಮ 69 ರ ಅಡಿಗೆ ಪರಿವರ್ತನೆಗೊಳಿಸಿ, ಇದರ ಚರ್ಚೆಯಾಗಬೇಕೆಂದು ಆಯಿತು. ಇಲ್ಲಿ ತಾವು ಗಮನಿಸಬೇಕಾಗಿರತಕ್ಕಂಥ ಮುಖ್ಯ ಅಂಶವೇನೆಂದರೆ, ಅವರು ಯಾವ ಆಯೋಗದ ವಿರುದ್ಧವಾಗಿ ನಮಗೆ ವಿಶ್ವಾಸ ಇಲ್ಲವೆಂದು ಪ್ರಕಟಣೆ ಮಾಡಿದರೋ, ಅವರು ವಿಷಯವನ್ನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಅನೇಕ ತಪ್ಪು ಮಾಹಿತಿಗಳ ಆಧಾರದ ಮೇಲೆ ನೋಟೀಸ್ ಅನ್ನು ಕೊಟ್ಟಿದ್ದಾರೆ. ಇಲ್ಲಿ ಅನುಷಂಗಿಕವಾಗಿ ಜನಾರ್ಧನ ರೆಡ್ಡಿ ಪ್ರಸ್ತಾಪ ಮಾಡಿದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರಷ್ಟೆ. ಆದರೆ ಇಲ್ಲಿ ಅವರ ಮುಖ್ಯವಾಗಿರತಕ್ಕಂಥ ಬೇಡಿಕೆ ಏನೆಂದರೆ, ನ್ಯಾಯಮೂರ್ತಿ ಯು.ಎಲ್.ಭಟ್‌ರವರ ಆಯೋಗವನ್ನು ರಚನೆ ಮಾಡಿದ್ದು ಏಕೆ? ಹಾಗೆ ರಚನೆ ಮಾಡಿರತಕ್ಕಂಥ ಆಯೋಗವನ್ನು ತತಕ್ಷಣದಲ್ಲಿ ರದ್ದು ಮಾಡಿಸಿರತಕ್ಕಂಥ ಕಾರಣವೇನು? ಇದರ ಹಿಂದೆ ನಿಮ್ಮದೇನಾದರೂ ಕಪಟ ನಾಟಕ ಇದೆಯೇ? ಅಥವಾ ಅವರು ಸತ್ಯಾನ್ವೇಷಣೆ ಮಾಡುತ್ತಾರೆನ್ನುವ ಗಾಬರಿಯಿಂದ ನೀವು ಈ ತರಹ ಮಾಡಿದ್ದೀರೋ ಎನ್ನುವುದು ಅವರ ಮುಖ್ಯವಾಗಿರತಕ್ಕಂಥ ಆಶಯಗಳು. ಆದರೆ, ಸನ್ಮಾನ್ಯ ಉಪಾಧ್ಯಕ್ಷರು ಇಲ್ಲಿ ಗಮನಿಸಬೇಕು. 21-11-2006 ರಂದು ಸತ್ಯಾನ್ವೇಷಣೆಗೆ ಸಿಬಿಐ ಯಿಂದಲೇ ತನಿಖೆ ಮಾಡಿಸುವುದು ಸೂಕ್ತ ಎಂದು ಯು.ಎಲ್.ಭಟ್‌ರವರು ನೆರವು ಕೋರಿದರು ಎಂದು

ವಿರೋಧ ಪಕ್ಷದ ನಾಯಕರು ಹೇಳಿದರು. ಆದರೆ ಸಿ.ಬಿ.ಐ ಯಿಂದಲೇ ಆಗಬೇಕೆಂದು ಅವರು ನೆರವು ಕೋರಿರತಕ್ಕಂಥದ್ದೇನೂ ಇಲ್ಲ. ಆ ವಿಚಾರಕ್ಕೆ ನಾನು ಮತ್ತೆ ಬರುತ್ತೇನೆ. ನಿಮಗೆ ಈಗಾಗಲೇ ಗೊತ್ತಿದ್ದಂತಹ ಈ ಆಯೋಗವನ್ನು ರಚನೆ ಮಾಡಲು ಕಾರಣವೇನು? ಅವರೆಲ್ಲರೂ ಪ್ರಸ್ತಾಪ ಮಾಡಿದಂತೆ ಜನಾರ್ಧನ ರೆಡ್ಡಿಯವರು ಒಂದು ಪತ್ರಿಕಾ ಹೇಳಿಕೆಯ ಮೂಲಕ ಹೇಳಿದಂಥ ವಿಷಯ, ನಂತರದಲ್ಲಿ ಅದರ ನಡುವೆ ಆ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲಿ ಬೇರೆಯವರು ಹಣ ಸಂಗ್ರಹ ಮಾಡುತ್ತಿದ್ದಾರೆಂದು ಲಿಖಿತ ಮೂಲಕ ಹೇಳಿದಂಥ ಹೇಳಿಕೆ, ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಂಡಿರತಕ್ಕಂಥದ್ದು, ನಂತರ ಮತ್ತೆ 150 ಕೋಟಿ ರೂಪಾಯಿಗಳನ್ನು ಗೃಹಮಂತ್ರಿಗಳಾದ ನಾನು, ಅರಣ್ಯ ಸಚಿವರಾದ ಚನ್ನಿಗಪ್ಪನವರು ಇಬ್ಬರೂ ಕಲೆತು ಮುಖ್ಯಮಂತ್ರಿಗಳಿಗಾಗಿ ಈ ಹಣವನ್ನು ಕಲೆಕ್ಟ್ ಮಾಡಿದ್ದಾರೆನ್ನುವ ಹೇಳಿಕೆ ಅದಾದನಂತರ ಆಗಿರುವಂಥ ಅನೇಕ ಪ್ರಹಸನಗಳು ಇದು ಇತ್ತೀಚಿನ ಇತಿಹಾಸವಾಗಿರುವುದರಿಂದ ಎಲ್ಲರಿಗೂ ಗೊತ್ತಿರತಕ್ಕಂಥ ವಿಷಯವಾಗಿದೆ. ಆ ವಿಷಯ ಅನುಷಂಗಿಕವಾಗಿ ಚರ್ಚೆ ಆಗಬೇಕೇ ವಿನಃ ಇಲ್ಲಿ ಮುಖ್ಯವಾಗಿರತಕ್ಕಂಥ ಚರ್ಚೆ ಆಗಬೇಕಾದ ಅಗತ್ಯವಿಲ್ಲ. ಏಕೆಂದರೆ ಅವರು ಕೇಳಿರತಕ್ಕಂಥ ವಿಷಯವೇ ಬೇರೆ, ಇಲ್ಲಿ ಪ್ರಸ್ತಾಪಿಸಿರತಕ್ಕಂಥ ವಿಷಯವೇ ಬೇರೆಯಾಗಿದೆ. ಇಂಥ ಎಲ್ಲ ಸಂಶಯಗಳು ಏಳಬಾರದೆನ್ನುವ ಕಾರಣಕ್ಕಾಗಿಯೇ ನಾವು ಒಂದು ಆಯೋಗವನ್ನು ರಚನೆ ಮಾಡಿ ಆ ಆಯೋಗದ ಮೂಲಕವಾಗಿ ಸತ್ಯಾನ್ವೇಷಣೆ ಆಗಲಿ, ಯಾರು ತಪ್ಪಿತಸ್ಥರಾಗಿದ್ದಾರೆ, ಬರೀ ಈ 150 ಕೋಟಿಗೆ ಸಂಬಂಧಪಟ್ಟದಲ್ಲ, ಇಂಥ ಒಂದು ಗಣಿಗಾರಿಕೆಗೆ ಪರವಾನಿಗೆ ಕೊಟ್ಟಿರತಕ್ಕಂಥ ಎಲ್ಲ ಸಂದರ್ಭಗಳಲ್ಲಿ 2000 ಇಸವಿಯಿಂದ ಇಲ್ಲಿಯವರೆಗೆ ಆಗಿರತಕ್ಕಂಥವರು ಅಂದರೆ, ಆಯೋಗದ ರಚನೆಯ ಅಧಿಸೂಚನೆ ಹೊರಡುವವರೆಗೆ ಆಗಿರುವ ಎಲ್ಲಾ ಅಪಾದನೆಗಳಿಗೆ, ಅವ್ಯವಹಾರಗಳಿಗೆ, ಲೋಪದೋಷಗಳಿಗೆ ಅಧಿಕಾರದ ದುರುಪಯೋಗಗಳಿಗೆ ಸಂಬಂಧಿಸಿರತಕ್ಕಂಥ ವಿಷಯಗಳನ್ನು ಅವರು ತನಿಖೆ ಮಾಡಬೇಕೆಂದು terms of reference ನಲ್ಲಿ ಕಳುಹಿಸಿಕೊಟ್ಟಿರತಕ್ಕಂಥಾದ್ದು. ಇಲ್ಲಿ ಮಾತನಾಡುವಂಥಾದ್ದರಲ್ಲಿ ಇದಕ್ಕೊಂದು ಒಳ್ಳೆಯ ಗಂಭೀರವಾದಂಥ ಚರ್ಚೆ ಕೂಡ ಆಯಿತು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಾ, ಪಕ್ಷಗಳಲ್ಲಿ ಚುನಾವಣಾ ಪೂರ್ವದಲ್ಲಿ ಆದಂಥ ಒಪ್ಪಂದಗಳ ಸ್ವರೂಪಗಳೂ ಬೇರೆ ಇರುತ್ತದೆ,

ಚುನಾವಣೆ ಆದನಂತರ ಆಗುವ ಒಪ್ಪಂದ ನೈತಿಕತೆಗೆ ವಿರುದ್ಧವಾಗಿರುತ್ತದೆ. ಆಗ ಈ ರೀತಿ ರೂಪಾಂತರಗೊಳ್ಳತಕ್ಕಂಥಾದ್ದು ವಿರೂಪಕ್ಕೆ ಎಡೆಕೊಡುತ್ತದೆ ಎನ್ನುವ ರೀತಿಯಲ್ಲಿ ಕೂಡ ಮಾತನಾಡಿದರು. ಇದೊಂದು ದುರ್ದೈವದ ಸಂಗತಿ. ಪ್ರಜಾಪ್ರಭುತ್ವದ ಈ ಸಂದರ್ಭಗಳಲ್ಲಿ ಮಿತ್ರಪಕ್ಷಗಳನ್ನೆಲ್ಲಾ ಎಳೆಯತಕ್ಕಂಥ ಪ್ರಶ್ನೆ ಕೂಡ ಏಳುತ್ತದೆ. ಯಾವುದು ಮಿತ್ರ ಪಕ್ಷ? ಯಾವುದು ಪ್ರತಿಪಕ್ಷ? ಯಾವ್ಯಾವ ಸಂದರ್ಭಗಳಲ್ಲಿ ಯಾವ್ಯಾವ ಪಕ್ಷಗಳು ಯಾವ್ಯಾವ ನಿಲುವುಗಳನ್ನು ತೆಗೆದುಕೊಂಡರು? ಆ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದರೆ ಅದೇ ಒಂದು ದೊಡ್ಡ ಕಥೆಯಾಗುತ್ತದೆ, ಅದರ ಮೂಲಕವಾಗಿ ನಾವು ಏನನ್ನೂ ಸಾಧಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಯಾರ್ಯಾರಿಗೆ ನೆನಪು ಇರುತ್ತದೆ, ನೆನಪು ಇದ್ದವರಿಗೆಲ್ಲರಿಗೂ ಕೂಡ ಇದು ಗೊತ್ತಾಗುತ್ತದೆ. ಆದರೆ, ಇಲ್ಲಿ ನೀವು ಚುನಾವಣೆಗಳ ನಂತರದಲ್ಲಿ ಆದಂಥ ಮೊದಲಿನ ಒಪ್ಪಂದ, ನಂತರದಲ್ಲಿ ನೀವು ಬಂದಿರುವುದರಿಂದ ನಿಮ್ಮ ಮಿತ್ರ ಪಕ್ಷದ ಸದಸ್ಯರೇ ಒಂದು ಆಪಾದನೆಯನ್ನು ಮಾಡಿದ್ದರಿಂದ, ಇಂಥ ಒಂದು ದುಸ್ಥಿತಿಗೆ ನೀವೇ ತಂದುಕೊಂಡಿರತಕ್ಕಂಥಾದ್ದು ಎನ್ನುವ ಮಾತು ಹೇಳಿದರು. ಇದು ಪ್ರಾಯಶಃ ಕರ್ನಾಟಕದ ಈ ಒಂದು ವಿಚಾರಕ್ಕೆ ಸಂಬಂಧಿಸಿರತಕ್ಕಂಥಾದ್ದು ಅಲ್ಲ. ಈಗ ಯುಪಿಎ ಸರ್ಕಾರದ ವಿಚಾರದಲ್ಲಿ ಹೇಳುವುದಾದರೆ, ಕೇಂದ್ರದಲ್ಲಿ ಯುಪಿಎ ಸರ್ಕಾರ ಆಗಿರತಕ್ಕಂಥಾದ್ದು ಅದು ಚುನಾವಣಾ ಒಪ್ಪಂದದ ಪೂರ್ವದಲ್ಲಿಯೇ ಆದಂಥದ್ದೇನೂ ಅಲ್ಲ. ಕೆಲವರು ಪೂರ್ವದಲ್ಲಿ ಆಗಿದ್ದಾರೆ, ಕೆಲವರು ಆಗಿಲ್ಲ. Naiveli Lignite ಅನ್ನು ಸಾರ್ವಜನಿಕವಾಗಿ disinvestment ಮಾಡುತ್ತೇವೆ, ಅದನ್ನು ಮಾರಾಟ ಮಾಡುತ್ತೇನೆಂದು ನಿರ್ಧಾರ ಮಾಡಿ ಪ್ರಕಟಣೆಯನ್ನು ಪ್ರಧಾನ ಮಂತ್ರಿಗಳು ಮಾಡಿದ ತಕ್ಷಣವೇ ಆ ಸಂದರ್ಭದಲ್ಲಿ ಕರುಣಾನಿಧಿಯವರು ಒಂದು ಮಾತನ್ನು ಹೇಳಿದ ತಕ್ಷಣವೇ, 24 ತಾಸಿನೊಳಗಾಗಿ ಅದನ್ನು ವಾಪಸ್ಸು ತೆಗೆಸಿಕೊಡುತ್ತೇವೆನ್ನುವಂಥ ಹೆದರಿಕೆಯನ್ನು ಹುಟ್ಟಿಸಿದ ಮೇಲೆ ಅವರ ಒತ್ತಡಕ್ಕೆ ಮಣಿದು 24 ತಾಸಿನಲ್ಲಿಯೇ ಅದು ಬದಲಾವಣೆಗಳಾದವು. ಆ ಬದಲಾವಣೆ ಆದದ್ದನ್ನು ನೋಡಿದ ತಕ್ಷಣ ಅದೊಂದು ವಿಕೃತ ರೂಪ ಎಂದು ಅನ್ನಲಿಕ್ಕೆ ಆಗುವುದಿಲ್ಲ. ಏಕೆಂದರೆ ಹತ್ತಾರು ಸಂಸ್ಥೆಗಳು ಅಥವಾ ಪಕ್ಷಗಳು ಕಲೆತು ಮಾಡಿದಂಥ ಸಂದರ್ಭದಲ್ಲಿ ಕೆಲವು ಸೀಮಿತ ಉದ್ದೇಶಕ್ಕಾಗಿ ನಾವು ಮಾಡಿರುತ್ತೇವೆ. ಒಂದು ದುಬಾರಿಯಾದ ಚುನಾವಣೆ ಪದೇ

ಪದೇ ಬರಬಾರದೆನ್ನುವ ಕಾರಣಕ್ಕಾಗಿಯೇ ಅಲ್ಲಿ ಕಲೆತಿರತಕ್ಕಂಥದ್ದು. ಇವತ್ತಿನವರೆಗೂ ನಡೆದಿರತಕ್ಕಂಥ ಅಂತರಿಕ ಭಿನ್ನಾಭಿಪ್ರಾಯಗಳು ಅಥವಾ ವೈರುದ್ಯಗಳು internal contradictions ಎಂದು ನಾವೇನು ಕರೆಯುತ್ತೇವೆ, ಅಂಥಾದ್ದು ಇದ್ದಾಗಲೂ ಕೂಡ ಮನಮೋಹನ್‌ಸಿಂಗ್‌ರವರು ಸರ್ಕಾರವನ್ನು ನಿಭಾಯಿಸಿಕೊಂಡು ಚೆನ್ನಾಗಿ ನಡೆಸುತ್ತಲೇ ಇದ್ದಾರೆ. ಹಾಗೆಯೇ ಮಹಾರಾಷ್ಟ್ರದಲ್ಲಿ ಕಳೆದ ಬಾರಿ ಮತ್ತು ಈ ಬಾರಿಯೂ ಕೂಡ ಮಧ್ಯದಲ್ಲಿ ಅವರಲ್ಲಿ ಏನೇ ಭಿನ್ನಾಭಿಪ್ರಾಯವಿದ್ದರೂ ಕೂಡ ಎನ್‌ಸಿಪಿ ಮತ್ತು ಕಾಂಗ್ರೇಸ್‌ನವರ ಆ ಒಂದು ಪ್ರಯೋಗ ಇವತ್ತಿಗೂ ಕೂಡ ಯಶಸ್ವಿಯಾಗಿ ನಡೆದಿರತಕ್ಕಂಥಾದ್ದನ್ನು ನಾವು ಕಾಣುತ್ತೇವೆ. ಈಗಲೂ ಕೂಡ ಇದು ಯಶಸ್ವಿಯಾಗಿರತಕ್ಕಂಥ ಸಮ್ಮಿಶ್ರ ಸರ್ಕಾರ ಆಗುತ್ತದೆ ಎನ್ನುವ ಅಭಿಪ್ರಾಯದಲ್ಲಿ ಯಾವುದೇ ಸಂಶಯವಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ :- ಒಂದು ಸರ್ಕಾರ election ಆದಮೇಲೆ ಅಷ್ಟು ದಿವಸ Party ಜೊತೆ, ಆಮೇಲೆ ಇನ್ನೊಂದು Party ಜೊತೆ ಸೇರಿಕೊಂಡು ಸರ್ಕಾರ ಮಾಡಿಸಿರುವ ಉದಾಹರಣೆ ಎಲ್ಲಿಯಾದರೂ ಇದೆಯೇ?

ಶ್ರೀ ಎಂ.ಪಿ.ಪ್ರಕಾಶ್:- ಹೌದು ಇದೆ; ಹೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ :- ಅಲ್ಲ. ಈ ತರಹ ಒಂದು term ಗೆ ಒಬ್ಬರನ್ನು ಬೈಯ್ಯುವುದು, ಅದೇ term ನಲ್ಲಿ ಇನ್ನೊಂದು ಕಡೆ ಕುಳಿತುಕೊಂಡು ಜೊತೆಗಿದ್ದವರನ್ನೇ ಬೈಯ್ದುಕೊಂಡು ನಮ್ಮಂಥವರನ್ನು ಅಬ್ಬೆಪ್ಯಾರಿ ಮಾಡತಕ್ಕಂಥ ಸರ್ಕಾರಗಳು ಎಲ್ಲಿಯಾದರೂ ಇದ್ದರೆ ಹೇಳಿಬಿಡಿ ಸರ್.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಹಿರಿಯ ಸದಸ್ಯರುಗಳು ನಾನು ಹೇಳಿದ ಮಾತು ಗ್ರಾಹ್ಯ ಆಗಲಿಲ್ಲವೆಂದು ಹೇಳಿ ಅದರ ಬಗ್ಗೆ ಚರ್ಚೆ ಮಾಡುವುದಿಲ್ಲವೆಂದು ಹೇಳಿದರೆ, ಅದರ ಬಗ್ಗೆ ಒಂದು ಉದಾಹರಣೆಯನ್ನೇ ಕೊಡುತ್ತೇನೆ. ರಾಜೀವ್‌ಗಾಂಧಿಯವರ ಹತ್ಯೆಯಲ್ಲಿ ಡಿ.ಎಂ.ಕೆ.ಯವರು ಎಲ್.ಟಿ.ಟಿ.ಇ ಜೊತೆಗೆ ಸೇರಿಕೊಂಡು ಅದಕ್ಕೆ ಕಾರಣೀಭೂತರಾಗಿರುವುದರಿಂದ, ಅವರನ್ನು ನೀವು ಮಂತ್ರಿಮಂಡಲದಲ್ಲಿಟ್ಟಿರತಕ್ಕಂಥ ಕಾರಣಕ್ಕಾಗಿ ಅವರನ್ನು ನೀವು ಮಂತ್ರಿಮಂಡಲದಿಂದ

ಹೊರಕ್ಕೆ ಹಾಕದಿದ್ದರೆ ನಮ್ಮ ಬೆಂಬಲ ಬೇಷರತ್ ಆಗಿ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಆ ಸಂದರ್ಭದಲ್ಲಿ ಅನಿವಾರ್ಯವಾಗಿ ಅವರನ್ನು ಕೈಬಿಡಬೇಕಾದ ಸಂದರ್ಭ ಬಂತು. ಯಾರ ವಿರುದ್ಧ ಈ ವಿಚಾರದ ಬಗ್ಗೆ ಸರ್ಕಾರವನ್ನೇ ಅಸ್ಥಿರತೆಗೊಳಿಸಲಾಯಿತೋ ಅವರೊಂದಿಗೆ ಇವತ್ತು ನಾವು 14 ಜನರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡು ಇವತ್ತು ಕೆಲಸ ಮಾಡುತ್ತಿದ್ದೇವೆ. ಆವತ್ತಿನ ಸತ್ಯ ಇವತ್ತಿನ ಅಸತ್ಯವಾಗುತ್ತದೆ. ಆವತ್ತಿನ ನಿಲುವೇ ಬೇರೆ ಆಗಿರಬಹುದು, ಇವತ್ತಿನ ನಿಲುವೇ ಬೇರೆ ಆಗಿರಬಹುದು. ಆದ್ದರಿಂದ ಇಲ್ಲಿ ಯಾರೂ ತಪ್ಪಾಗಿ ಭಾವಿಸಬಾರದು. ಇದೊಂದು academic ರೀತಿಯ ಚರ್ಚೆಯಾಗಲಿ.

ಶ್ರೀ ಕೆ. ಆರ್. ರಮೇಶ್‌ಕುಮಾರ್ :– ತಾವು ದೇಶದ ಪ್ರಚಲಿತ ರಾಜಕಾರಣ ಬಗ್ಗೆ ಏನೆಲ್ಲ ಹೇಳಿದಿರಿ ಅದೆಲ್ಲ ಸತ್ಯ. ಇವೆಲ್ಲ ವಿಪರ್ಯಾಸಗಳ ಮಧ್ಯೆಯೇ ನಾವು ಬದುಕಿದ್ದೇವೆ. ನಾನು ಪ್ರಸ್ತಾಪ ಮಾಡಿದ್ದೇನೆಂದರೆ, ನೀವು ಎರಡೂ ಪಕ್ಷಗಳವರು ಮಿತ್ರ ಪಕ್ಷಗಳು. ನೀವು ಬಿಜೆಪಿ ಇಬ್ಬರೂ ಕೂಡಿ ಸರ್ಕಾರ ರಚನೆ ಮಾಡಿದ್ದೀರಿ. ಒಂದು ಜಿಲ್ಲಾ ಘಾಟಕದ ಅಧ್ಯಕ್ಷ ನಿಮ್ಮ ಮಿತ್ರ ಪಕ್ಷದಿಂದ ಮೇಲ್ಮನೆಗೆ ಆಯ್ಕೆಯಾಗಿ ಬಂದಿರತಕ್ಕಂಥವರು, ಈ ಮಾತುಗಳನ್ನು ಹೇಳಿದ್ದಾರೆ. ಅವರು ಹೇಳಿದ ಮೇಲೆ ತಕ್ಷಣ ನೀವು ಕ್ರಮ ಜರುಗಿಸಲಿಲ್ಲ. ಸ್ವಲ್ಪ ದಿವಸ ಮೀನಮೇಷ ಎಲ್ಲ ಎಣಿಸಿದ ಮೇಲೆ ಅವರನ್ನು suspension ಎಂದು ಮಾಡಿದಿರಿ. political party ಯೊಳಗೆ ತೀರಾ ಪಕ್ಷದ ಶಿಸ್ತಿಗೆ ಅಥವಾ ಅದರ ಆಲೋಚನೆಗೆ ವಿರುದ್ಧವಾಗಿ ನಡೆದುಕೊಂಡಂಥವರಿಗೆ ಉಗ್ರವಾಗಿ ಶಿಕ್ಷೆ ಏನೆಂದರೆ ಅವರನ್ನು ಶಾಶ್ವತವಾಗಿ ಪಕ್ಷದಿಂದ ಹೊರಗೆ ಹಾಕತಕ್ಕಂಥಾದ್ದು. ನೀವು ಮಿತ್ರ ಪಕ್ಷವೆಂದು ಹೇಳಿ ಅಧಿಕಾರ ಹಂಚಿಕೊಂಡು ಆಡಳಿತ ನಡೆಸತಕ್ಕಂಥವರು, mere suspension ನಲ್ಲಿಯೇ ನಿಲ್ಲಿಸಿದ್ದೀರಲ್ಲಾ! ಎಂಥ ಮೈತ್ರಿ ನಿಮ್ಮದು. ಎಂದು ನಾನು ಕೇಳಿದ್ದೆ. I did not talk about all this.

ಶ್ರೀ ಜೆ.ಸಿ. ಮಾಧುಸ್ವಾಮಿ :– ನಮಗೆ ಇನ್ನೊಂದು ಬಾಧೆ ಇದೆ. ಈಗ ಇವರ ಜೊತೆ ಯಾವಾಗ ಸೇರಿಕೊಳ್ಳುತ್ತೀರೋ ಅದು ಗೊತ್ತಿಲ್ಲವಲ್ಲ! ಆವತ್ತು ಏನು

ನೀವು defend ಮಾಡುತ್ತೀರಿ? ಆವತ್ತು ಏನು ವಾದ ಮಾಡುತ್ತೀರಿ? ಏನೇನು ವ್ಯವಹಾರಗಳು ನಡೆಯುತ್ತವೆ ಅದನ್ನೂ ಸಹ ಹೇಳಿ ಬಿಡಿ.

ಶ್ರೀ ಎಂ. ಪಿ.ಪ್ರಕಾಶ್:- ಆ ವ್ಯವಸ್ಥೆಯಲ್ಲಿ ತಾವೂ ಕೂಡ ಪಾಲುದಾರರಾಗುತ್ತೀರಿ ಇನ್ನು ಮುಂದೆ ಎಂದು ನಾನು ಭಾವಿಸುತ್ತೇನೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :- ಸನ್ಮಾನ್ಯ ಉಪಾಧ್ಯಕ್ಷರೆ, ಕೇಂದ್ರದಲ್ಲಿ communist ನವರು ಯುಪಿಎ ಸರ್ಕಾರದಲ್ಲಿದ್ದಾರೆ. ಅವರು ಸರ್ಕಾರದ ಜೊತೆಯಲ್ಲಿ ಅಲ್ಲಿ support ಮಾಡುತ್ತಾರೆ. ಹೊರಗೆ ಬಂದು ಧರಣಿ ಮಾಡುತ್ತಾರೆ. ಹಾಗಿದ್ದರೆ, ಅಲ್ಲಿ ಯಾವ ರೀತಿ ಆಗಿದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸರ್ಕಾರದ ಒಳಗಡೆ ಪರ ಮಾತನಾಡುತ್ತಾರೆ, ಹೊರಗಡೆ ವಿರೋಧ ಮಾಡುತ್ತಾರೆಂದು ನೀವು ಹೇಳಿದಿರಿ. ಪಾಪ, ಇವರಿಗೆ ಗೊತ್ತಿಲ್ಲ. ಯುಪಿಎ ಸರ್ಕಾರಕ್ಕೆ ಹೊರಗಡೆಯಿಂದ ಬೆಂಬಲ ಕೊಡುತ್ತಿರತಕ್ಕಂಥದ್ದು ಯಾರ್ಯಾರು? ಸರ್ಕಾರದ ಒಳಗಡೆ ಸೇರಿ ಸರ್ಕಾರ ರಚನೆ ಮಾಡಿರತಕ್ಕಂಥವರು ಯಾರ್ಯಾರು? ಯುಪಿಎ ಎಂದು ಇದೆಯಲ್ಲ, United Progressive Alliance ಎಂದು ಆ alliance ನ partners ಯಾರು ? ಅದರಲ್ಲಿ Left Parties ಇದೆಯೋ? ಇಲ್ಲವೋ ಅನ್ನತಕ್ಕಂಥದ್ದೇ ಪಾಪ ಅವರಿಗೆ ಗೊತ್ತಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :- ಪುಣ್ಯವೂ ಬೇಡ, ಪಾಪವೂ ಬೇಡ. ಸ್ಪೀಕರ್ ಯಾರೆಂದು ನಮಗೆ ಗೊತ್ತಿದೆ. ಆ ಸ್ಪೀಕರ್ ತೀರ್ಮಾನಗಳೇನೆಂಬುದು ನಮಗೆ ಗೊತ್ತಿದೆ. ತಮ್ಮ ಪಾರ್ಟಿ ನಿಲುವೇನೆಂಬುದು ಗೊತ್ತಿದೆ. ತಾವು ಯಾವ ರೀತಿಯಿಂದ ಬೆಂಬಲವನ್ನು ಕೊಡುತ್ತಿದ್ದೀರೆಂತಲೂ ಗೊತ್ತಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾಯ್ಡುರವರೆ, ನಿಮ್ಮ ಪಾರ್ಟಿ ಜೊತೆಯಲ್ಲಿ alliance ಆಗಿರುವವರು ಮತ್ತೆ ಅವರನ್ನಿಟ್ಟುಕೊಂಡೇ alliance ಮಾಡುವುದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು :- ನಿಮ್ಮ ಬಾಳೂ ಕೂಡ ಅದೇ. ಯುಪಿಎ ಬಾಳೂ ಕೂಡ ಅಷ್ಟೇನೆ.

ಶ್ರೀ ಎಂ. ಪಿ. ಪ್ರಕಾಶ್ :- ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪ ಮಾಡುತ್ತಾ ಹೇಳಿದರು. ಪ್ರತಿಯೊಂದು ಪಕ್ಷಕ್ಕೂ ಕೂಡ ತನ್ನದೇ ಆದಂಥ ಸಂಘಟನೆ, ಸಂವಿಧಾನವಿರುತ್ತದೆ. ಆ ಸಂವಿಧಾನದ ಪ್ರಕಾರ ಅದು ಭಾರತೀಯ ಜನತಾ ಪಕ್ಷದ ಆಂತರಿಕವಾದ ವಿಷಯ. ಅವರೇನು ಕ್ರಮ ಕೈಗೊಳ್ಳಬೇಕು? ತಡವಾಗಿ ಕೈಗೊಂಡರೋ, ನಂತರದ ವಿಚಾರವೆಲ್ಲ ಅವರಿಗೆ ಬಿಟ್ಟಿರತಕ್ಕಂಥಾದ್ದು ಇದೆ. ತಾವು ಏನು ಅಂದುಕೊಳ್ಳದಿದ್ದರೆ ನಾನು ಕೇಳುತ್ತೇನೆ, ನಟವರ್‌ಸಿಂಗ್‌ರವರು ಹೇಳಿಕೆ ಕೊಟ್ಟಮೇಲೆ ಅವರನ್ನು ತತ್‌ಕ್ಷಣದಲ್ಲಿ ಅಮಾನತ್ತಿನಲ್ಲೇನೂ ಇಡಲಿಲ್ಲ. ಅಲ್ಲಿಯೂ ಕೂಡ ಅದನ್ನು ಶಿಸ್ತು ಸಮಿತಿಗೆ ಕಳುಹಿಸಿಕೊಟ್ಟರು. ಅಲ್ಲಿಯೂ ಕೂಡ ಅವರ ಹೇಳಿಕೆಗಳನ್ನೆಲ್ಲ ದಾಖಲಿಸಿಕೊಂಡರು. ಅದೆಲ್ಲಕ್ಕಿಂತಲೂ ಹೆಚ್ಚಾಗಿ ಅವರ ಮೇಲೆ ಆಪಾದನೆ ಬಂದಾಗ Minister without portfolio ಅಂತಲೂ ಕೂಡ ಮಾಡಿ ಇಟ್ಟುಕೊಂಡರು. ಈ ತರಹದಲ್ಲಿ ಎಲ್ಲ ಒಂದೊಂದು ಸಂದರ್ಭಗಳಲ್ಲಿ ಸಂದಿಗ್ಧತೆಗಳಿರುತ್ತವೆ. ಆದ್ದರಿಂದ, ಇಲ್ಲಿರತಕ್ಕಂಥ ಪ್ರಶ್ನೆ "ಇಲ್ಲ ನಾವು ಬಹಳ ಮುಖ್ಯ, ಅವರು ಬಹಳ ಮುಖ್ಯ" ಅನ್ನುವುದಕ್ಕಿಂತಲೂ ಹೆಚ್ಚಾಗಿ . . . .

ಶ್ರೀ ವಾಟಾಳ್ ನಾಗರಾಜ್ :- ಮಾಧುಸ್ವಾಮಿಯವರು ಹೇಳಿದ್ದು ಯಡಿಯೂರಪ್ಪನವರಿಗೆ ಅರ್ಥವಾಯಿತೆಂದು ಕಾಣುತ್ತದೆ. ಮುಂದೆ ಇವರ ಜೊತೆಯಲ್ಲಿ ಬಂದಾಗ ಮಾಧುಸ್ವಾಮಿಯವರು ಬಹಳ ನೇರವಾಗಿ ಯಾವ ಜ್ಯೋತಿಷಿಯೂ ಹೇಳಿದಂಥ ಭವಿಷ್ಯವನ್ನು ನುಡಿದಿದ್ದಾರೆ. ಅದು ಯಡಿಯೂರಪ್ಪನವರಿಗೆ ನೂರಕ್ಕೆ ನೂರು ಅರ್ಥವಾಗಿದೆ. ಸುಬ್ರಹ್ಮಣ್ಯ ನಾಯ್ಡುರವರಿಗೇನು ಗೊತ್ತಾಗುತ್ತದೆ? ಪಂಚತಂತ್ರದ ಕಥೆಗಳೆಲ್ಲವೂ ಯಡಿಯೂರಪ್ಪನವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಅದನ್ನೇ ಮಾಧುಸ್ವಾಮಿಯವರು ಹೇಳಿದ್ದು. ನೀವು ಅಲ್ಲಿ ಉತ್ತರ ಕೊಡುತ್ತಿದ್ದೀರಿ, ನಾಳೆ ಈ ಕಡೆ ಜೊತೆಯಲ್ಲಿ ಸೇರಬೇಕಾದಂಥ ವ್ಯವಸ್ಥೆ ಈಗಾಗಲೇ ಆರಂಭವಾಗಿದೆ. ದೆಹಲಿಯಿಂದ ಅಗೋಚರವಾಗಿ ಅಶರೀರವಾಣಿ ಶುರುವಾಗಿದೆ. ಕರ್ಣನಿಗೂ ಕುಂತಿ ಯಾರೆಂದು ಗೊತ್ತಾಗುವುದಿಲ್ಲ. ಅಶರೀರವಾಣಿ, ಕರ್ಣ, ಕುಂತಿ ನಿನ್ನ ತಾಯಿಯೆಂದು

ಹೇಳುತ್ತದೆ. ಅಲ್ಲೆಲ್ಲೋ ಒಂದು ಕಡೆ ನಿಮ್ಮ ವ್ಯವಸ್ಥೆ, ಮುಂದೇನಾಗುತ್ತದೆ, ಏನು ಅಲ್ಲಿ ನಡೆಯುತ್ತದೆ? ಆದ್ದರಿಂದ, ನಿಮ್ಮ ಪರಿಸ್ಥಿತಿ ಏನು? ಉತ್ತರವನ್ನು ಕೊಡುತ್ತಿದ್ದೀರಿ. ಮುಂದೆ ಮತ್ತೆ ಉತ್ತರಗಳು ಬದಲಾವಣೆಯಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ :– ಯಾರು ಎಷ್ಟೇ ವ್ಯತ್ಯಾಸವಾದರೂ ವಾಟಾಳ್‌ರ ಜಾಗವೊಂದು ವ್ಯತ್ಯಾಸವಾಗುವುದಿಲ್ಲ. ಅದು ಅಲ್ಲೇನೆ.

ಶ್ರೀ ಎಂ.ಪಿ.ಪ್ರಕಾಶ್:– "ಕರ್ಣ ನಿನ್ನ ಮಗ" ಎಂದು ಕುಂತಿಗೆ ಅಶರೀರವಾಣಿ ಹೇಳಲಿಲ್ಲ. ಶ್ರೀಕೃಷ್ಣ ಪರಮಾತ್ಮ ಹಿಂದೆ ಹೋಗಿ ಪಿತೂರಿ ಮಾಡಿ ಹೇಳಿ ಬಂದಿದ್ದ. ಆ ಕಾರಣಕ್ಕಾಗಿ ಅಶರೀರವಾಣಿಯೇನೂ ಬರಲಿಲ್ಲ. ಅದರ ಜೊತೆಗೆ, ಅವರು ಮುಂದೊಂದು ದಿವಸ ಬರುತ್ತದೆಂದು ಹೇಳಿದರು. ಈಗಾಗಲೇ ಅನೇಕ ಪತ್ರಿಕೆಗಳಲ್ಲಿ ಅನೇಕ ಲೇಖನಗಳು ಬಂದಿವೆ. ಯಾವುದು ನೈತಿಕತೆ, ಯಾವುದು ಅನೈತಿಕತೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ನೈಜ ಸ್ಥಿತಿಯ ಪರಿಸ್ಥಿತಿಗಳನ್ನು ತ್ಯಾಗರಾಜರೂ ಕೂಡ ಇದರ ಬಗ್ಗೆ ವಿಜಯ ಕರ್ನಾಟಕದಲ್ಲಿ ಬರೆದಿದ್ದಾರೆ. ಅದನ್ನು ತಾವು ನೋಡಿದ್ದೀರಿ. ಅದರಲ್ಲಿಯೂ ಕೂಡ ಹೇಳುತ್ತಾರೆ, ಇವತ್ತಿನ ಪರಿಸ್ಥಿತಿಯಲ್ಲಿ ಹೊಂದಾಣಿಕೆ ಮಾಡಿಕೊಂಡು ಆ ಒಂದು ಸಮ್ಮಿಶ್ರ ಸರ್ಕಾರ ನಡೆಸಿಕೊಂಡು ಹೋಗುವಂಥ ಚಾಕಚಕ್ಯತೆ ಇರಬೇಕು. ಜಾಣ್ಮೆ ಇರುವಂಥಾದ್ದು ಅನಿವಾರ್ಯದ ಸ್ಥಿತಿ ಇವತ್ತು. ಕೇವಲ ಇಲ್ಲಿಯೇ ಆಗಿರತಕ್ಕಂಥಾದ್ದಲ್ಲ. ಇಡೀ ಪ್ರಪಂಚದ ಅನೇಕ ಕಡೆಗಳಲ್ಲಿ ಇಂಥ ಸ್ಥಿತಿ ಉದ್ಭವವಾಗಿವೆ. ಆದ್ದರಿಂದ ನಾವು ನೀವು ಕಲೆಯುವುದು, ಒಳಗೇ ಕಲೆಯುವುದು, ಹೊರಗಡೆ ಹೋಗುವುದು, ಇವು ಎಲ್ಲಾ ಕಾಲದಲ್ಲಿಯೂ ನಡೆದಿರತಕ್ಕಂಥ ವಿಷಯಗಳೇ. ಭಾರತೀಯ ಜನತಾ ಪಕ್ಷದವರ ಜೊತೆಗೆ, ಬೇರೆ ಬೇರೆ ಪಕ್ಷಗಳು Communist ರ ವಿರುದ್ಧ ಸೇರಿರತಕ್ಕಂಥಾದ್ದು, Communist ರು ಭಾರತೀಯ ಜನತಾ ಪಕ್ಷದ ಸಹಾಯವನ್ನು ತೆಗೆದುಕೊಂಡು ಸ್ಥಳೀಯ ಸಂಸ್ಥೆಗಳ ಚುಣಾವಣೆಗಳಲ್ಲಿ ಕಾಂಗ್ರೆಸ್ ಅನ್ನು ಸೋಲಿಸಿದ್ದು, Communist ರು ಕರುಣಾಕರನ್‌ರವರನ್ನು ಸೇರಿಸಿಕೊಂಡು ಉಪಯೋಗಿಸಿ ಕಾಂಗ್ರೆಸ್ ಅನ್ನು ಸೋಲಿಸಿದ್ದು, ಈ ಚುಣಾವಣೆ ಬಂದಾಗ ಕರುಣಾಕರನ್‌ರವರನ್ನು ಅಲ್ಲೇ ಕೈಬಿಟ್ಟು ಬೇರೆಯವರನ್ನು ಸೇರಿಸಿದ್ದು ಇವೆಲ್ಲವೂ ನಿಭಾಯಿಸಬೇಕಾದಂಥ ಚಾತುರ್ಯತೆಗಳು. ಆದ್ದರಿಂದ ರಾಜನೀತಿ

ಮಾಡುವಂಥ ಸಂದರ್ಭಗಳಲ್ಲಿ ನೈತಿಕತೆ, ಅನೈತಿಕತೆ ಅನ್ನುವುದಕ್ಕಿಂತಲೂ ಹೆಚ್ಚಾಗಿ ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಜನರ ಒಳತಿಗಾಗಿ ಮಾಡಬೇಕಾದಂಥ ಕಾರ್ಯ ವಿಧಾನಗಳು, ಕಾರ್ಯಕ್ರಮಗಳು ಅನುಷ್ಠಾನಗೊಳ್ಳುವುದು ಮುಖ್ಯವಾಗುತ್ತವೆ.

ಶ್ರೀ ವಾಟಾಳ್ ನಾಗರಾಜ್ :– ನಮಗೆ ಈ ಉತ್ತರವೇ ಬೇಕಾಗಿತ್ತು. ಅದು ಯಡಿಯೂರಪ್ಪನವರಿಗೂ ಗೊತ್ತಿದೆ.

ಉಪಾಧ್ಯಕ್ಷರು :– ವಾಟಾಳ್ ನಾಗರಾಜ್‌ರವರೆ, ಈಗ ನಿಮಗೆ ಸಂತೋಷವಾಯಿತಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಸ್ಥಳೀಯ ಚುನಾವಣೆಗಳಲ್ಲಿ ನೀವು ಯಾರ ಜೊತೆಯಲ್ಲಿ ಹೋಗುತ್ತೀರಿ? ಅವರ ಜೊತೆಯಲ್ಲೋ, ನಮ್ಮ ಜೊತೆಯಲ್ಲೋ Independent ?

ಶ್ರೀ ಹೆಚ್.ಸಿ. ಬಾಲಕೃಷ್ಣ :– ನಿಮ್ಮ ಜೊತೆ ಆಗಲೇ ನಾವು ಅನುಭವಿಸಿದ್ದೇವೆ. ಪುನಃ ನಿಮ್ಮ ಜೊತೆ ನಾವು ಬರುವುದೇ?

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆಯವರ ಪ್ರಶ್ನೆಗೆ ಅವರಿಗೇ ಉತ್ತರ ಗೊತ್ತಿದೆ. ಸ್ಥಳೀಯ ಚುನಾವಣೆಗಳ ಸಂದರ್ಭದಲ್ಲಿ ಅಲ್ಲಿಯ ಸ್ಥಳೀಯ ಮುಖಂಡರಿಗೆ ನೀವೇ ಯಾವುದಾದರೂ ಒಪ್ಪಂದಕ್ಕೆ ಬರಬಹುದೆಂದು ಹೇಳಿದ್ದೇವೆ. ಮೊನ್ನೆ ನಾವು ಶಿವಮೊಗ್ಗ ಜಿಲ್ಲಾ ಪಂಚಾಯತಿಯಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದವರಿಗೆ ಬೆಂಬಲವನ್ನು ಕೊಟ್ಟು ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಿ, ನಾವು ಅಧ್ಯಕ್ಷರಾಗಿದ್ದೇವೆ. ಅದಕ್ಕೇನೂ ಯಡಿಯೂರಪ್ಪನವರು ಆಕ್ಷೇಪಣೆ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಬೀಗತನ ಶುರುವಾಯಿತೆಂದು ಈಗ ತಮಗೆ ಗೊತ್ತಾಯಿತಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಬಹಳ ಒಳ್ಳೆಯ ದಾಂಪತ್ಯ, ಸಂಸಾರ ನಡೆಯುತ್ತಿದೆ. ಇದೊಂದು most liberal, modern society ತರಹ.

ಶ್ರೀ ವಾಟಾಳ್ ನಾಗರಾಜ್ :- ಇದು ಶುರುವಾಗಿ ಆಗಲೇ ಮೂರುವರೆ ತಿಂಗಳಾಯಿತು. ದೆಹಲಿಯಿಂದ ಶುರುವಾಗಿದೆ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಮಾಧುಸ್ವಾಮಿಯವರ ಪಾರ್ಟಿ ಯ ಮುಖಂಡರಗಳಿಂದಲೇ ಪ್ರಾರಂಭವಾಯಿತು. ಜಾರ್ಜ್ ಫರ್ನಾಂಡಿಸ್‌ರವರು ಬಂದು ಇಲ್ಲಿ ನಮ್ಮ ರಾಮಕೃಷ್ಣ ಹೆಗಡೆಯವರನ್ನು ಕಂಡು, ಜೆ.ಹೆಚ್. ಪಟೇಲ್‌ರವರನ್ನು ಒಪ್ಪಿಸಿ, ನಿನ್ನೆಯಷ್ಟೇ ಮಾಡಿದಂಥ ಒಂದು ಗೊತ್ತುವಳಿಯನ್ನು ಮರು ದಿವಸ ಬೆಳಿಗ್ಗೆಯೇ ಬದಲಿ ಮಾಡಿಸಿದರಲ್ಲ ಅವತ್ತಿನಿಂದ ಶುರುವಾಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ :- ನಾವು ಆ ಮಾತಿಗೆ ಅವತ್ತಿನಿಂದ ಇವತ್ತಿನವರೆಗೂ ಬಾಯಿ ಮುಚ್ಚಿಕೊಂಡಿದ್ದೇವೆ. ಆವತ್ತಿನಿಂದ ಇವತ್ತಿನವರೆಗೂ ಅವರಿಗೆ ಕೈ ಎತ್ತಿದ್ದೇವೆ. ನಾವು ಕಾಲ ಬಂದಾಗ ಸೀರೆ ಬದಲಾಯಿಸಿದ ಹಾಗೆ ಬದಲಾಯಿಸುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್:- ಅಲ್ಲಿ ಬದಲಾಯಿಸಿದಿರಿ.

ಶ್ರೀ ಜೆ.ಸಿ.ಮಾಧುಸ್ವಾಮಿ :- ಬಿಜೆಪಿಯವರು ಹೇಳಲಿ. ಎನ್‌ಡಿಎ ನಲ್ಲೇನಾದರೂ ಜನತಾದಳ(ಯು) ನವರೇನಾದರೂ ದ್ರೋಹ ಮಾಡಿ ಇನ್ನೊಂದು ಕಡೆಗೆ ಬದಲಾಗಿದ್ದರೆ ಎಂದು.

ಶ್ರೀ ಎಂ.ಪಿ.ಪ್ರಕಾಶ್:- ಅದು ಪ್ರಶ್ನೆಯಲ್ಲ. ನಾವೆಲ್ಲರೂ ಕೂಡ ಇದರಿಂದ ವಿಮುಕ್ತರಾಗಿದ್ದೇವೆ ಎನ್ನುವಂಥ ಮಾತಿಲ್ಲವೆಂದು ಹೇಳಿದೆ. ನಮ್ಮನ್ನು ಇಲ್ಲಿ ಒಪ್ಪಿಸಿ, National College ground ನಲ್ಲಿ ದೊಡ್ಡ ಐಕ್ಯತೆಯ ಸಮಾವೇಶ ಮಾಡಿ ಅದೇ 15 ದಿವಸದೊಳಗಾಗಿ Constituent Club ನೊಳಗೆ ಪ್ರತ್ಯೇಕ ಗುಂಪುಗಳನ್ನಾಗಿ ಮಾಡಿಕೊಂಡು ನಮ್ಮ ಪಕ್ಷದವರು ಬೇರೆಯವರ ಕಡೆಯಿಂದ ದೆಹಲಿಯಲ್ಲಿ ಒದೆ ತಿಂದು ಸಮ್ಮೇಳನ ಮಾಡಿಕೊಂಡು ಬಂದಿರುವುದು ಕೂಡ ತಮಗೆ ಗೊತ್ತಿದೆ. ಆದ್ದರಿಂದ ಈ ವಿಚಾರದಲ್ಲಿ ನಾವ್ಯಾರೂ ಎಷ್ಟೇ ನೈತಿಕವಾಗಿ ಸರಿ ಇದ್ದೇವೆ ಎಂದು ಹೇಳಿದರೂ . . . . .

ಶ್ರೀ ಜೆ.ಸಿ. ಮಾಧುಸ್ವಾಮಿ :- ಅದಾಗಿದ್ದಕ್ಕೂ ಕೂಡ ನೀವೇ ಕಾರಣರು ಅವತ್ತಿಗೆ ನಾವಲ್ಲ.

ಶ್ರೀ ಎಂ.ಪಿ.ಪ್ರಕಾಶ್:- ತಮಗೆ ಹೊಡೆತ ಬೀಳಲಿಲ್ಲ ಅಷ್ಟೇ. ಮಾನ್ಯ Sanjay Kumar V.s. State of Haryana ದ ವಿಚಾರದಲ್ಲಿ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ, ನಮ್ಮ ಬಗ್ಗೆ ಬಹಳ ಅನುಕಂಪವನ್ನು ತೋರಿಸಿ ಇಂಥಾ ಒಬ್ಬ ಮುಖ್ಯಮಂತ್ರಿಗಳ ಪರವಾಗಿ ನೀವ್ಯಾರೂ ಬರಲಿಲ್ಲ. ನಾನಾದರೂ ನೀವು ಒಪ್ಪಿಗೆ ಕೊಡುವುದಾಗಿದ್ದರೆ ಮಾನನಷ್ಟದ ಮೊಕದ್ದಮೆಯನ್ನು ಹಾಕುತ್ತಿದ್ದೆ ಎಂದು ಹೇಳಿ ನಮ್ಮ ಬಗ್ಗೆ ಗೌರವ ಮತ್ತು ಪ್ರೀತಿಯನ್ನು ವ್ಯಕ್ತ ಮಾಡಿದ್ದಕ್ಕೆ ನಾವು ಆಭಾರಿಯಾಗಿದ್ದೇವೆ. ಆದರೆ, ಅನೇಕ ಸಂದರ್ಭಗಳಲ್ಲಿ ಒಮ್ಮೊಮ್ಮೆ ಇಂಥ ನಾಯಕರುಗಳ ಬಗ್ಗೆ ಬಂದಾಗ discretion is better than the valour ಎನ್ನತಕ್ಕಂಥ ಒಂದು ಮಾತಿದೆ. ತಲೆ ಗಟ್ಟಿಯಾಗಿದೆ ಎಂದು ನಾವು ಗೋಡೆಗೆ ಹೊಡೆದುಕೊಳ್ಳಬೇಕಾದುದಿಲ್ಲ. ಡಾಕ್ಟರ್ ಜಿ. ಮಥಾಯಿಸ್‌ರವರು ಬರೆದಿರುವ "My reminiscences with Nehru" ಪುಸ್ತಕ ತಮಗೆ ಗೊತ್ತಿದೆ. ಅದರಲ್ಲಿ ಎಂಥ ಒಂದು chapter ಬರೆದು ಕೈಬಿಟ್ಟಿದ್ದಾರೆಂದು ನಿಮಗೆ ಗೊತ್ತಿದೆ. ಏನೂ chapter ಬರೆದಿಲ್ಲ. 'She' ಎಂದು ಹೇಳಿ ಒಂದು wording ಹಾಕಿ ಖಾಲಿ ಹಾಳೆಯನ್ನು ಬಿಟ್ಟಿದ್ದಾರೆ. ಅದು ಎಷ್ಟೆಷ್ಟು ಮಾತುಗಳಿಗೆ, ವ್ಯಾಖ್ಯಾನಗಳಿಗೆ ಗೊತ್ತಾಯಿತೆಂಬುದು ತಮಗೆ ಗೊತ್ತಿದೆ. ಆ ಸಂದರ್ಭದಲ್ಲಿ ನಾವು ಅವರ ಪರವಾಗಿಯಾಗಲಿ, ಇನ್ನೊಬ್ಬರ ಪರವಾಗಿಯಾಗಲಿ ಮಾನನಷ್ಟ ಮೊಕದ್ದಮೆಯನ್ನು ಹಾಕಲಿಲ್ಲ. ಎಲ್ಲ ವಿಚಾರಗಳಿಗೂ ಕೂಡ ಅಪಾದನೆಗಳು ಬಂದೇ ಬರುತ್ತವೆ. ಅವು ಬಂದಂಥ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವದ ಮೂಲ ಧರ್ಮ ಏನಿರುತ್ತದೆ, ಪತ್ರಿಕೆಗಳಲ್ಲಿ ಬರೆದಿದೆ ಎಂದರೂ ಕೂಡ. "An ubiquitous and cantankerous Press has to be tolerated by men in authority in order to uphold the freedom of expression and uphold greater values of democracy" ಎನ್ನತಕ್ಕಂಥ ಮಾತಿದೆ. ನಮ್ಮ ವಿರುದ್ಧವಾಗಿ ಟೀಕೆಗಳು ಬರುತ್ತವೆ. ನಾವ್ಯಾರು ಕೂಡ ಟೀಕಾತೀತಾರಲ್ಲ. ಒಂದು ಪತ್ರಿಕೆಯಲ್ಲಿ ಬಂತು ಎನ್ನುವ ಕಾರಣಕ್ಕೆ ಪ್ರತಿಸಾರಿ ಮಾಡತಕ್ಕಂಥಾದ್ದು ಏನು ಇದೆ

ಅದು ಸರಿಯಾದುದಲ್ಲ. ವಿವರಗಳನ್ನು ವಿವರಿಸಿ ಹೇಳಬೇಕಾಗಿರುವುದು ಬಹಳ ಮುಖ್ಯ ಎನ್ನುವಂಥ ನಂಬಿಕೆ ನಮಗೆ ಇರುವುದರಿಂದ, ಮಾನ್ಯ ಮುಖ್ಯಮಂತ್ರಿಗಳು ಸಮರ್ಥರಿದ್ದಾರೆ. ಆ ಸತ್ಯಸಂಗತಿಗಳು ಗೊತ್ತಾದಾಗ ಕನ್ನಡ ನಾಡಿನ ಜನ ಮೆಚ್ಚುತ್ತಾರೆನ್ನುವ ಕಾರಣಕ್ಕಾಗಿ ಮಾನ ನಷ್ಟ ಮೊಕದ್ದಮೆ ಎನ್ನತಕ್ಕಂಥ ವಿಚಾರಗಳಿಗೆ ನಾವು ಹೋಗಲಿಲ್ಲ. We wanted to uphold higher values of democracy because we believe in that ideology.

ಶ್ರೀ ಜೆ. ಸಿ. ಮಾಧುಸ್ವಾಮಿ :– ನಮ್ಮ ಹತ್ತಿರ ಏನೂ ಇರಲಾರದೇ ನಷ್ಟ ಹೇಗೆ ಆಗುತ್ತದೆ? ಭಗವದ್ಗೀತೆಯಲ್ಲಿ ಕೂಡ ನೀನು ಏನಾದರೂ ತಂದಿದ್ದೀಯಾ ಕಳೆದುಕೊಳ್ಳುವುದಕ್ಕೆ ಎಂದು ಅಂದುಕೊಳ್ಳಬೇಡ, ಯಾರೋ ಕೊಟ್ಟಿದ್ದಾರೆ ಹೋಗಿದೆ ಎಂದು ಗೀತೋಪದೇಶ ಇರುವಾಗ ರಮೇಶ್ ಕುಮಾರ್‌ರವರು ಏಕೆ ಆ ರೀತಿ ಹೇಳಿದರೋ ನನಗೆ ಅರ್ಥವಾಗಲಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ :– ಒಳ್ಳೆಯ ಯುದ್ಧ ನಡೆಯುತ್ತಿರುವಂಥ ಸಂದರ್ಭದಲ್ಲಿ ಕೂಡ ಗೀತೋಪದೇಶವನ್ನು ಮಾಡಿ, ಕೃಷ್ಣ ಸಂಧಾನಕ್ಕೆ ಹೋಗುತ್ತಾನೆ. ಏಕೆಂದರೆ, ಪ್ರಪಂಚಕ್ಕೆ ಗೊತ್ತಾಗಬೇಕಾಗುತ್ತದೆ. ಏಕೆಂದರೆ, ಯುದ್ಧಕ್ಕೆ ನೀವು ಕಾತುರರಾಗಿದ್ದೀರೆಂದು ಪ್ರಪಂಚಕ್ಕೆ ಗೊತ್ತಾಗಬಾರದು, ಈ ನಿಮಿಷಕ್ಕೂ ದುರ್ಯೋಧನ ಹಠವಾದಿಯಾಗಿದ್ದ. ಅದರಿಂದ ಅನಿವಾರ್ಯವಾಗಿ ಯುದ್ಧ ಮಾಡಿದೆವು ಎನ್ನುವ ರೀತಿಯಲ್ಲಿ ಆಗಬಹುದು ಎನ್ನುವ ರೀತಿಯಲ್ಲಿ ಅವರು ಹೇಳಿದ್ದಾರೆ ವಿನಾಃ ಬೇರೆ ಏನೂ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಗೀತೆಯಲ್ಲಿ ಒಂದು ಮಾತು ಬರುತ್ತದೆ. ನೀನೇದರೂ ಕಳೆದುಕೊಂಡೆ ಎಂದು ಯೋಚಿಸಬೇಡ, ಏಕೆಂದರೆ ನೀನೇನೂ ತರಲಿಲ್ಲ. ನೀನು ಸುಖವಾಗಿದ್ದೇನೆಂದು ಯೋಚಿಸಿ ದುಃಖಕ್ಕೆ ಹೋಗಬೇಡ. ಅದನ್ನು ನೀನು ಪಡೆದಿದ್ದು ಅಲ್ಲ ಎಲ್ಲಾ ಭಗವಂತ ಕೊಟ್ಟಿದ್ದು ಎನ್ನುವ ಮಾತಿದೆ. ಏನೂ ನಮ್ಮದಲ್ಲವೆಂದರೆ ಮಾನ ನಷ್ಟ ಮೊಕದ್ದಮೆ ಏಕೆ ಹಾಕಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ ಮರ್ಯಾದೆ ಇದ್ದವರು ಏನು ಮಾಡಬೇಕೆಂದು ನೇರವಾಗಿ ಹೇಳಿ.

ಶ್ರೀ ಎಂ.ಪಿ.ಪ್ರಕಾಶ್ :– ಮಾನ್ ಮರ್ಯಾದೆ ಎನ್ನತಕ್ಕಂಥಾದ್ದು ಅನೇಕ ಸಂದರ್ಭದಲ್ಲಿ ಸಾಪೇಕ್ಷೆಯಾಗಿರುತ್ತದೆ. ಅನೇಕ ಸಂದರ್ಭದಲ್ಲಿ ಶ್ರೀ ಕೃಷ್ಣನಿಗೆ ಶಮಂತಕ ಮಣಿಯನ್ನು ಕದ್ದು ಹೋದ ಎಂದು ಅಪವಾದ ಬಂತಲ್ಲ, ಹಾಗೆಂದ ಕೂಡಲೇ ಅವನು ತನ್ನ ಕರ್ತವ್ಯವನ್ನು ಬಿಟ್ಟುಬಿಟ್ಟನೆ? ಧರ್ಮರಾಯನ ಮೇಲೆ ದೊಡ್ಡ ಅಪಾದನೆಗಳು ಬಂದವು. ಹಾಗೆಂದ ತಕ್ಷಣ ಆತ ಯುದ್ಧವನ್ನು ಕೈ ಬಿಟ್ಟನೆ?

ಶ್ರೀ ಕೆ. ಆರ್. ರಮೇಶ್‌ಕುಮಾರ್ :– You have said about tolerance towards Press, a cantankerous Press. ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ನಾನು ರೆಫರ್ ಮಾಡಿದಾಗ ಡಿಟೇಲ್ಸ್‌ಗೆ ಹೋಗಲಿಲ್ಲ. ಲೇಖನದಲ್ಲಿ ಏನು ಬರೆಯುತ್ತಾರೆ, ಕೇಂದ್ರ ಸರ್ಕಾರದ ಅಧಿಕಾರಿಗಳು ಯಾವುದೋ ಒಂದು ಜಾಗಕ್ಕೆ ತಮ್ಮ ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಹೋಗಬೇಕಾಗಿತ್ತು. ಆ ಜಾಗದಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ. ಇವರು ತಮ್ಮ ಕರ್ತವ್ಯ ನಿರ್ವಹಣೆಗೆ ಅವರು ಅಲ್ಲಿ ಹಾಜರಿರುವುದು ಅಡ್ಡವಾಗುತ್ತದೆ. ಕಡೆಗೆ ಅಸಹಾಯಕರಾಗಿ ಆ ವರ್ತಮಾನವನ್ನು ರಾಜ್ಯ ಗುಪ್ತದಳದ ಮುಖ್ಯಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮುಟ್ಟಿಸಿ, ಅವರನ್ನು ಅಲ್ಲಿಂದ ರವಾನಿಸಿ ಆದಮೇಲೆ ಹೋಗಿ ತಮ್ಮ ಕೆಲಸ ಮಾಡಿದರು ಎಂದೆಲ್ಲಾ ಹೇಳುತ್ತಾರೆ. They have brought in all responsible and important people in to the gamut of the allegation. ಇದು ಹಾಗೆ ಬಿಡತಕ್ಕಂಥಾ ವಿಚಾರ ಎಂದು ನೀವು ತಿಳಿದು ಕೊಳ್ಳುವುದಾದರೆ ನಮಗೇನು ಅಕ್ಷೇಪಣೆ ಇಲ್ಲ. ನನಗೆ ಅನ್ನಿಸುತ್ತದೆ. Intelligence Chief ಹೋಗಿದ್ದರು ಎಂದು ಹೇಳುತ್ತಾರೆ, ಇವರು ಯಾವುದೋ ಒಂದು ಅನಪೇಕ್ಷಿತ ಜಾಗದಲ್ಲಿ ಇದ್ದರು ಎಂದು ಹೇಳುತ್ತಾರೆ. ಹೀಗೆಲ್ಲಾ ಮಾಡಿದರೆ, character assassination ಆಗುತ್ತದೆ. ಹೀಗಾಗಿ ನಾನು ಅವರ ಮೇಲಿರುವ ಕರುಣೆಗೆ ಹೇಳಿದೆ. ಅವೆಲ್ಲವೂ ರೆಕಾರ್ಡ್‌ನಲ್ಲಿ ಇರಲಿ ಎಂದು ತಮ್ಮ ಅಭಿಪ್ರಾಯ ಆದರೆ ನನಗೇನೂ ಅಕ್ಷೇಪಣೆಯಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ :– ಈ ವಿಷಯವನ್ನು ಹೇಳುವಾಗ ಇಂಥ ಅನೇಕ ಉದಾಹರಣೆಗಳು ನಿಮ್ಮ ಪಕ್ಷ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಆಗಿದೆ. ಆ

ವಿವರಗಳನ್ನು ನಾನು ಹೆಚ್ಚು ಹೇಳುವುದಕ್ಕೆ ಹೋದರೆ ವಿವಾದಗಳು ಜಾಸ್ತಿಯಾಗುತ್ತವೆ. ಆದುದರಿಂದ ಅದು ಬೇಡ. ಅದು ಟರ್ಕಿಯಿಂದ ತರಿಸಿರುವಂಥ ಯೂರಿಯಾದ ಕೇಸ್ 134 ಕೋಟಿ ರೂಪಾಯಿಯದು ಇರಬಹುದು. ಹಿಂದಿನ ಪ್ರಧಾನ ಮಂತ್ರಿಗಳ ಕಾಲದಲ್ಲಿ. ಅದಾದ ನಂತರ ಜೆಎಮ್‌ಎಮ್ ಕೇಸ್ ನಲ್ಲಿ ಕೊಟ್ಟಿರತಕ್ಕಂಥ ಹಣದ ವ್ಯವಹಾರದಲ್ಲಿ, Claret Hotel, ನಲ್ಲಿ ಏನೆಲ್ಲಾ ಆಯಿತು ಎನ್ನತಕ್ಕಂಥ ವಿಚಾರಗಳು ಇರಬಹುದು. ಅದನ್ನೆಲ್ಲಾ ಪತ್ರಿಕೆಗಳು ಬರೆದವು ಎಂದು ಯಾರೂ ಮಾನನಷ್ಟ ಮೊಕದ್ದಮೆಯನ್ನು ಹಾಕಿದ್ದಂತೂ ನಾನು ಕಾಣಲಿಲ್ಲ. ಯಾರೂ ಅತೀತರಾಗಿದ್ದಾರೆಂದು ನಾನು ಭಾವಿಸಿಕೊಂಡಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ :- ಅವರು ಮಾನಗೆಟ್ಟವರು ಅವರಿಗೆ ಅಗತ್ಯವಿರಲಿಲ್ಲ. ಹಾಗಾದರೆ ಇದೂ ಇಷ್ಟೇನೆ?

ಶ್ರೀ ಎಂ.ಪಿ. ಪ್ರಕಾಶ್ :- ನೀವು ನಿಮ್ಮ ಪಕ್ಷದ ಮುಖಂಡರನ್ನು ಮಾನಗೆಟ್ಟವರು ಎನ್ನುವುದಾಗಿದ್ದರೆ ಅದು ರೆಕಾರ್ಡ್‌ಗೆ ಹೋಗಲಿ. ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- Let it go on record.

Sri. M.P. Prakash :- I don't have your courage if you accept that this people . . . .

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ನಾನು ಏನು ಹೇಳುತ್ತೇನೆಂದರೆ, don't try to twist.

ಶ್ರೀ ಎಂ.ಪಿ. ಪ್ರಕಾಶ್ :- ಟ್ವಿಸ್ಟ್ ನಾನು ಮಾಡಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- ನಾವು ಮಾನಗೆಟ್ಟವರು, ನಾವು ಹೀಗೆ ಇರುತ್ತೇವೆ ಎನ್ನುವುದಾದರೆ okay. ನಮ್ಮದೇನೂ ಅಕ್ಷೇಪಣೆಯಿಲ್ಲ. Intelligence ಬಂದಿದ್ದು ನಿಜ, ಅವರು ಹೇಳಿದ್ದು ನಿಜ. ಆಮೇಲೆ ಅಲ್ಲಿಂದ ನಾವು ಕಾಲು ತೆಗೆದಿದ್ದು ನಿಜ ಎಂದರೆ, ಆಗಲಿ, ಅದಕ್ಕೆ ನಮ್ಮದೇನೂ ಅಕ್ಷೇಪಣೆಯಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಆ ವಿಷಯವನ್ನೂ ಅಲ್ಲಿಗೆ ಕೈ ಬಿಡೋಣ. ಏಕೆಂದರೆ ಮುಖ್ಯವಾದ ವಿಷಯಕ್ಕೆ ಬರೋಣ. ಕಥೆಗಳನ್ನು ನೀವು ನಮ್ಮ ಮೇಲೆ

ಹೇಳುವುದಕ್ಕೆ ನಾವು ನಿಮ್ಮ ಹೇಳುವುದಕ್ಕೆ ಹೋದರೆ ಇದು ಮುಗಿಯುವುದಿಲ್ಲ. ನಮ್ಮ ಸ್ಥಾನಗಳು ಬದಲಾವಣೆಯಾದಾಗ ಮತ್ತೊಂದು ಆಗುವುದಕ್ಕೆ ಇವೆಲ್ಲಾ ಇದ್ದೇ ಇರುತ್ತವೆ. ಅವೆಲ್ಲಾ ಬೇಡ. ಈಗ ಅವರು ಹೇಳತಕ್ಕಂಥ ಆಯೋಗವನ್ನು ನೀವು ತತ್‌ಕ್ಷಣದಲ್ಲಿ ರದ್ದು ಮಾಡಿದಿರಿ? ರದ್ದು ಮಾಡುವುದರ ಮುಖಾಂತರ ನೀವು ಮುಚ್ಚಿಕೊಳ್ಳುವಂಥ ಪ್ರಯತ್ನ ಮಾಡುತ್ತಿದ್ದೀರಿ ಎಂದು ಹೇಳಿದಿರಿ. ಆವೊತ್ತಿನ ಕಾಲಕ್ಕೆ ಸರಕಾರ ಅತ್ಯಂತ ದಿಟ್ಟ ನಿಲುವನ್ನು ತೆಗೆದುಕೊಳ್ಳುವುದರ ಮೂಲಕವಾಗಿ ಅಲ್ಲಿ terms and reference ನಲ್ಲಿ ಕೂಡ ಏನೇನು ಇದೆ ಅವೆಲ್ಲಕ್ಕೂ ಸಂಬಂಧಪಟ್ಟಂತೆ ಗಣಿಗಾರಿಕೆಯ ಸಂದರ್ಭದಲ್ಲಿ 2000 ದಿಂದ ಇಲ್ಲಿಯವರೆಗೆ ಆಗಿರತಕ್ಕಂಥ ಎಲ್ಲಾ ಅವ್ಯವಹಾರಗಳ ಬಗ್ಗೆ ಅಧಿಸೂಚನೆ ಹೊರಡುವವರೆಗೂ ಆ 150 ಕೋಟಿಯನ್ನು ಸೇರಿಸಿಕೊಂಡು ಅದರ ಬಗ್ಗೆ ಆಯೋಗಕ್ಕೆ ಚರ್ಚೆ ಮಾಡಬೇಕೆಂದು ಆ ದಿವಸದಲ್ಲಿ ಸರ್ಕಾರ ವಿಚಾರಣಾ ಆಯೋಗದ ಅಧಿನಿಯಮ 52 ರ 60 ರ ಕಲಂ ಮೇರೆಗೆ ಇದನ್ನು ನಾವು ಮಾಡಿರತಕ್ಕಂಥದ್ದು ತಮಗೆ ಗೊತ್ತಿದೆ. ಸನ್ಮಾನ್ಯ ಜಸ್ಟೀಸ್‌ರವರು ದಿನಾಂಕ : 24-07-2006 ರಂದು ಅಧಿಕಾರವನ್ನು ವಹಿಸಿಕೊಂಡರು. ಅದಾದ ಮೇಲೆ ಅವರಿಗೆ ವಿಚಾರಣಾ ಆಯೋಗಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟೆವು. ಯಾವುದೇ ಅನುಕೂಲ ಮಾಡಲಿಲ್ಲ, ಯಾವುದೇ ಸಹಕಾರ ಕೊಡಲಿಲ್ಲ, ಎಂದು ಆಗಲೇ ಅವರು ಮಾತನಾಡುವಾಗ ಹೇಳಿದರು. ನಾನು ಆ ವಿವರಗಳನ್ನು ಹೇಳದಿದ್ದರೂ ತಮ್ಮ ಗಮನಕ್ಕೆ ತರುವುದೇನೆಂದರೆ, ಆಯೋಗವು ಅಪೇಕ್ಷಿಸಿದಂತೆ ಸರ್ಕಾರದ ವಿವಿಧ ಅಧಿಕಾರಿಗಳನ್ನು ಕೊಡುವುದರ ಜೊತೆಗೆ 17 ಜನ ಸಿಬ್ಬಂದಿಗಳನ್ನು ಕೊಟ್ಟೆವು. 1200 ಚದರ್ ಅಡಿ ಇರತಕ್ಕಂಥ ಕಛೇರಿ ಕಟ್ಟಡವನ್ನು ಅವರಿಗೆ ಕೊಟ್ಟೆವು. ವಾಹನದ ಸೌಕರ್ಯ, ದೂರವಾಣಿ ಸೌಕರ್ಯ, ಬೆರಳಚ್ಚುಗಾರರ ಸೌಕರ್ಯ, ಕಂಪ್ಯೂಟರ್ ಸೌಕರ್ಯ, ಅದರ ಜೊತೆಗೆ ನಾಲ್ಕು ಜನ ಐಜಿಪಿ ಶ್ರೇಣಿಯ ಪೊಲೀಸ್ ಅಧಿಕಾರಿಗಳನ್ನು ಈ ಆಯೋಗಕ್ಕೆ ಕೊಟ್ಟೆವು. ಇಷ್ಟೆಲ್ಲಾ ಕೊಟ್ಟನಂತರ ಮೊದಲನೇ ಸಂದರ್ಭದಲ್ಲಿ ನಾವು ಹೇಳಿದೆವು, ನಮ್ಮ ಮೇಲೆ ಅಪಾದನೆ ಬಂದಿರುವ ಹಿನ್ನಲೆಯಲ್ಲಿ ಬಹಳ ದಿವಸಗಳವರೆಗೆ ಈ ಆಯೋಗಗಳು ಏನು ಕೆಲಸ ಮಾಡುವುದಿಲ್ಲವೆಂದರೆ ಜನಗಳು ನಮ್ಮ ಬಗ್ಗೆ ವಿಶ್ವಾಸವನ್ನು

ಕಳೆದುಕೊಳ್ಳುತ್ತವೆ. "Public memory is short and it is notoriously short" ಎಂಬ ಮಾತಿದೆ. ಆ ಕಾರಣಕ್ಕಾಗಿ ತಾವು ಎರಡು ತಿಂಗಳೊಳಗಾಗಿ ಒಂದು ಮಧ್ಯಂತರ ವರದಿಯನ್ನು ಕೊಡಿ, ಅದಾದ ನಾಲ್ಕು ತಿಂಗಳ ನಂತರ ನೀವು ಪೂರ್ಣವಾದ ವರದಿಯನ್ನು ಕೊಡಿ ಎಂದು ಹೇಳಿ ಆ ದಿವಸವೇ ಕಳುಹಿಸಿ ಕೊಟ್ಟೆವು. ಅದಾದ ಏಳೂವರೆ ತಿಂಗಳಾದರೂ ಅವರು ಮಧ್ಯಂತರ ವರದಿಯನ್ನು ಕೊಡಲಿಕ್ಕೆ ಆಗಲಿಲ್ಲ. ಈ ವಿಚಾರದಲ್ಲಿ ಸನ್ಮಾನ್ಯ ನ್ಯಾಯಮೂರ್ತಿಗಳಾದ ಭಟ್ ರವರ ಬಗ್ಗೆ ನಮಗೆ ಈ ನಿಮಿಷದವರೆಗೂ ಕೂಡ ಅಪಾರವಾದ ಗೌರವವಿದೆ. ಅವರು ಹಿಂದೆ ಸೇವೆ ಮಾಡಿತಕ್ಕಂಥವರು. ಕನ್ನಡ ನಾಡಿನ ಜನ. ಈ ವಿಚಾರದಲ್ಲಿ ಕನ್ನಡದಲ್ಲಿರುವಂಥ ದಾಖಲೆಗಳನ್ನು ಅವರು ನೋಡಿ ಮಾಡುತ್ತಾರೆ ಎನ್ನುವ ಕಾರಣಕ್ಕಾಗಿಯೇ ಅವರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಅವರು ಮಧ್ಯದಲ್ಲಿ ಈ ಕೆಲಸವನ್ನು ನಿರ್ವಹಿಸಬೇಕಾಗಿರತಕ್ಕಂಥ ಸಂದರ್ಭಕ್ಕೆ ನನಗೆ ಕಾಲಾವಕಾಶ ಕೊಡಬೇಕೆಂದು ನಮಗೆ ಒಂದು ಪತ್ರವನ್ನು ಬರೆದರು. ನಾಲ್ಕು ತಿಂಗಳ ಕಾಲಕ್ಕೆ ಮಧ್ಯಂತರ ವರದಿಯನ್ನು ಕೊಡುವುದಕ್ಕಾಗುವುದಿಲ್ಲ ಅದಾದ ನಂತರ ಮತ್ತೆ ಆರು ತಿಂಗಳು ಅಂದರೆ ಒಟ್ಟಾರೆಯಾಗಿ ಹತ್ತು ತಿಂಗಳು ಅವಧಿಯನ್ನು ಅವರು ಕೇಳಿದರು. ಆ ಎರಡು ಪತ್ರಗಳಿಗೆ ಸಂಬಂಧಪಟ್ಟಂತೆ ಸರ್ಕಾರ ಅವರಿಗೆ ನಿಮ್ಮ ಮನವಿಯನ್ನು ತಿರಸ್ಕರಿಸಿದ್ದೇವೆಂದು ಹೇಳಿಲ್ಲ. ಗಂಭೀರವಾದ ಚಿಂತನೆಯಲ್ಲಿದ್ದೇವೆ ಎನ್ನತಕ್ಕಂಥ ಮಾತು ಅವರಿಗೆ ಗೊತ್ತಿರತಕ್ಕಂಥದ್ದು. ಇದರ ಜೊತೆಗೆ ನಾನೊಂದು ಪ್ರಶ್ನೆಯನ್ನು ಸನ್ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ಮತ್ತು ಹಿರಿಯರಿಗೆ ಕೇಳುತ್ತಿದ್ದೇನೆ. ನೀವು ಅವರಿಗೆ ನಾವೇನೂ ಸಹಕಾರ ಕೊಡಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ನಿಮ್ಮದೇ ಆದಂಥ ಸರ್ಕಾರ ಕೇಂದ್ರದಲ್ಲಿದೆ. ಕೇಂದ್ರದಲ್ಲಿದ್ದಾಗ ಆ ಸಂದರ್ಭದಲ್ಲಿ ಯಾರ್‍ಯಾರು ಇದ್ದರು ಎಂಬ ಮಾತು ಕೂಡ ತಾವು ಹೇಳುತ್ತೀರಿ. ಆದರೆ ಮಾನ್ಯ ಯು.ಎಲ್.ಭಟ್‌ರವರು ಹೇಳುತ್ತಾರೆ.

" Since there was no response over a month, the Commission finally contacted the Hon.Minister over telephone on

30.12.06 and then the Minister stated that he had not seen the earlier letter. The commission dispatched three copies of the ealier letter to the office mentioned in the letter, one to the Hon.Minister's residence and by fax separately. On 03.01.2007 the Minister acknowledged the receipt of the letter dated 30.12.06 which enclosed the earlier letters. Since then the commission has not received any further communication from Government of India. The Commission is of the opinion, the request made in the earlier letter dated 22.11.06 is absolutely legitimate and justified. It has, therefore, become necessary to remind Government of India in this behalf. The Government of India is not inclined to agree to the request made by the Commission. When the Government of India is not inclined to agree to the request made by the commission other available avenues will have to be found".

This is the letter he has written. ಕನ್ನಡ ನಾಡಿನ ಈ ಸರ್ಕಾರ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ಅವರಿಗೆ ಅಸಹಕಾರ ಕೊಟ್ಟಿದ್ದೀರೆಂದು ನೀವು ಹೇಳುವುದಾದರೆ, ಭಾರತ ಸರ್ಕಾರವಾದರೂ ಕೂಡ ಅವರಿಗೆ ಪ್ರತಿ ಸ್ಪಂದನ ಮಾಡಲಿಲ್ಲ?

ಶ್ರೀ ಕೆ.ಆರ್. ರಮೇಶ್ ಕುಮಾರ್ :– Delhi Special Police Establishment Act, Section 5 and 6, ರಾಜ್ಯ ಸರ್ಕಾರ ಅದಕ್ಕೆ ಒಪ್ಪಿಗೆ ಕೊಡದ ಹೊರತು CBI suo moto cannot take up an enquiry in a matter that falls within the domain of the State Government. Justice U.L.Bhat was heading a Judicial Enquiry that was appointed by the State Government. With due respect to the person who holds that office, he enjoyed absoluteyly no locus standi to

address letters to Government of India directly. Even presuming that he had written letter, Government of India cannot act on that letter. The Consent of the State Government is an absolute necessity. The Government of India has done the right thing in ignoring the letter written by Justice Bhat.

ಶ್ರೀ ಎಂ.ಪಿ. ಪ್ರಕಾಶ್ :- ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಅವರಿಗೆ ಕೆಲವು ವಿಷಯಗಳನ್ನು....

ಶ್ರೀ ಡಿ.ಕೆ. ಶಿವಕುಮಾರ್ :- ಸಿಬಿಐ ಅಸಿಸ್ಟೆನ್ಸ್ ಬೇಕೆಂದು ತಾವು ಪತ್ರ ಬರೆಯಿರಿ.

ಶ್ರೀ ಎಂ.ಪಿ. ಪ್ರಕಾಶ್ :- ನಾನು ಅಲ್ಲಿಗೆ ಬರುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ :- ತಾವು ಮೊದಲು ರೆಫರ್ ಮಾಡಿ. ಕೇಂದ್ರ ಸರ್ಕಾರ ತೆಗೆದುಕೊಳ್ಳಲಿಲ್ಲವೆಂದರೆ ಆನಂತರ ಇದರ ಬಗ್ಗೆ ಕೇಳೋಣ.

ಶ್ರೀ ಎಂ.ಪಿ. ಪ್ರಕಾಶ್ :- ನಾನೂ ಕೂಡ ಅಲ್ಲಿಗೆ ಬರುತ್ತೇನೆ. ಈಗ ಪ್ರಶ್ನೆ ಇರತಕ್ಕಂಥಾದಿಷ್ಟೆ. ಅವರು ಬಹಳ ತಪ್ಪಾಗಿ ಗ್ರಹಿಸಿದ್ದಾರೆ. ಭಟ್‌ರವರು ಮಧ್ಯ ಪ್ರದೇಶದ ಮತ್ತು ಅಸ್ಸಾಂ ರಾಜ್ಯಗಳ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದವರು. ಅವರಿಗೆ ಕಾನೂನಿನ ಇತಿಮಿತಿಗಳು ಮತ್ತು ಅದರ ವ್ಯಾಪ್ತಿಗಳೇನೆಂಬುದು ಗೊತ್ತು. ರಾಜ್ಯ ಸರ್ಕಾರ ಪರವಾನಿಗೆಯನ್ನು ಕೊಡದಿದ್ದರೆ, ಅವರಿಗಷ್ಟೆ ಅವರೇ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ಆಗುವುದಿಲ್ಲವೆಂಬ ವಿಚಾರ ಅವರಿಗೆ ಗೊತ್ತಿದ್ದರಿಂದ, ಅವರು ಸಿಬಿಐ ತನಿಖೆ ಮಾಡಿ ಎಂದು ಬರೆದಿಲ್ಲ. ಅದಕ್ಕಾಗಿಯೆ ನಿಮ್ಮ ಪತ್ರವನ್ನು ಇಲ್ಲಿ ಓದಿರತಕ್ಕಂಥಾದು.

ಶ್ರೀ ಡಿ.ಕೆ.ಶಿವಕುಮಾರ್ :- ಅಸಿಸ್ಟ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಅಸಿಸ್ಟ್ ಮಾಡಿ ಎಂದು ಅಲ್ಲ. ನನ್ನ ಇನ್‌ವೆಸ್ಟಿಗೇಶನ್‌ಗೆ ಅಸಿಸ್ಟ್ ಮಾಡುವುದಕ್ಕಾಗಿ ನಿಮ್ಮ ಇಲಾಖೆಯಲ್ಲಿರತಕ್ಕಂಥವರನ್ನು

ಎಂದು ಇದರಲ್ಲಿ ಇದೆ. ಮತ್ತೆ ಹೇಳುತ್ತೇನೆ ಕೇಳಿ. The requisite Supporting staff for the purpose of conducting investigation as contemplated under Section 5(1) . . . of the Commission of Inquiries Act be provided. ಅವರು ಏನು ಹೇಳುತ್ತಾರೆಂದರೆ, ಸಿ.ಬಿ.ಐ ತನಿಖೆ ಮಾಡಿ ಎಂದು ಹೇಳುವುದಕ್ಕೆ ಅವರಿಗೂ ಕೂಡ ಅಧಿಕಾರ ಇಲ್ಲ. ಮತ್ತೆ ಸಿ.ಬಿ.ಐ ತನಿಖೆ ಮಾಡಿ ಎಂಬ ಪ್ರಶ್ನೆ ಕೂಡ ಇಲ್ಲ. ಅಲ್ಲಿ ಬಂದಿರತಕ್ಕಂಥ ಪ್ರಶ್ನೆ ಏನೆಂದರೆ, ನಮಗೆ ಇಲ್ಲಿ ಪೊಲೀಸ್ ಅಧಿಕಾರಿಗಳನ್ನು ಕೊಟ್ಟಿದ್ದರೂ ಸಹ ದೆಹಲಿ ಪೊಲೀಸ್ ಆಕ್ಟ್ ಕೆಳಗಡೆ ನಿಮ್ಮಲ್ಲಿ ಸಮರ್ಥರಾಗಿರತಕ್ಕಂಥ ಜನರ್‍ಯಾರು ಇದ್ದಾರೆ ಅವರನ್ನು ನನ್ನ ಸಹಾಯಕ್ಕಾಗಿ ಕಳುಹಿಸಿಕೊಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಆದ್ದರಿಂದ ಸಿ.ಬಿ.ಐ ತನಿಖೆ ಮಾಡಿ ಎಂದು ಅವರು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :- A judge is also a human being. We don't question their integrity. They are not infallible.

SRI M.P. PRAKASH :- As is the case with you and me. We are all men having clay feet. We are also not infallible.

SRI K.R. RAMESH KUMAR :- That is why I said he did not enjoy such a status and locus standi. Whatever correspondence was made with Government og India was contrary to the rules.

SRI M.P. PRAKASH :- It may be right for the argument sake.

SRI K.R. RAMESH KUMAR :- Why don't you, as Mr.D.K. shivakumar said, show sagacity and write to Government of India?

SRI M.P. PRAKASH :- We are not cowardice. Well certainly raise up to the occasion. May I ask you one Question? If you feel, why not the Government of India give an endorsement or letter to the Commission that your request cannot be considered because of these these things ? Should not Government of India show that much courtsy to retired Justice of the Commission? Why should they keep quiet? That alone goes to show you have got certain other interests.

ಶ್ರೀ ಕೆ. ರಮೇಶ್ ಕುಮಾರ್ :- ರಾಜ್ಯ ಸರ್ಕಾರದ ಪರವಾಗಿ ತಾವು ಪತ್ರ ಬರೆಯಿರಿ, if you are so interested.

ಶ್ರೀ ಎಂ.ಪಿ.ಪ್ರಕಾಶ್ :- ನಾನು ಅದೇ ವಿಷಯಕ್ಕೆ ಬರುತ್ತೇನೆ. ಯಾರ್‍ಯಾರು ಏನೇನು ಸಂದರ್ಭದಲ್ಲಿ ಏನೆಲ್ಲಾ ಪತ್ರ ಬರೆಯಬೇಕೆಂದು ಮತ್ತು ಏನೆಲ್ಲಾ ಉತ್ತರ ಕೊಡಬೇಕೆಂಬುದನೆಲ್ಲಾ ಕೂಡ ತಾವು ಹೇಳಿರುವ ಹಿನ್ನೆಲೆಯಲ್ಲಿ ಕೂಡ ಮಾಡುತ್ತೇವೆ. ಅನೇಕರನ್ನು ಬಹಳ ಸಲ ಮರ ಹತ್ತಿಸಿ ಕೈ ಬಿಟ್ಟಿರತಕ್ಕಂಥ ಉದಾಹರಣೆಗಳಿರುವುದರಿಂದ ಯಾರು ನಮ್ಮನ್ನು ಹತ್ತಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾವು ಹುಷಾರಾಗಿರುತ್ತೇವೆ. ನಾವು ಹುಂಬತನದ ಧೈರ್ಯ ತೋರಿಸವುದಿಲ್ಲ. ಧೈರ್ಯವನ್ನು ನಿಜವಾದ ಅರ್ಥದಲ್ಲಿ ತೋರಿಸುತ್ತೇವೆ. ತಮಗೆ ಗೊತ್ತಿರುವ ಹಾಗೆ ತಾವು ಮತ್ತು ಟಿ. ಪ್ರಭಾಕರ್‌ರವರು ಹಾಗೂ ಪಿ.ಜಿ.ಆರ್. ಸಿಂಧ್ಯಾರವರು ಪ್ರತಿ ಸಲ ಕೊಯಮತ್ತೂರಿಗೆ ಹೇಗೇಗೆ ಹೋಗುತ್ತಿದ್ದೀರಿ? ಆ ತರಹದ ಹುಂಬತನದ ಧೈರ್ಯ ತೋರಿಸಿ ಜಾಲಪ್ಪನವರಿಗೆ ಸಿಬಿಐ ನವರು ಏನು ಮಾಡಿದ್ದಾರೆಂಬುದೆಲ್ಲಾ ಗೊತ್ತಿರುವುದರಿಂದ ತಮಗೆ ಆ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ತಾವು ಅದನ್ನು ಅನುಭವಿಸಿದ್ದೀರಿ. ಏಕೆಂದರೆ, ಒಬ್ಬ ಒಳ್ಳೆಯ ಮನುಷ್ಯನಿಗೆ ಏನು ತೊಂದರೆ ಆಗುತ್ತದೆಂದು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಿಮ್ಮಂಥ ಜಾಣರು ಅವರ ಜೊತೆಗೆ ಇದ್ದ ಕಾರಣ ಬಹುಶಃ ಅಂಥ ಸ್ಥಿತಿ ಇವರಿಗೆ ಬರುವುದಿಲ್ಲ. ಆದ್ದರಿಂದ ಇದನ್ನು ಬೇಗನೆ ರೆಫರ್ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ :– ಜಾಣತನದ ಪ್ರಶ್ನೆ ಇಲ್ಲಿ ಉಳಿದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ನಿಮ್ಮ ಬುದ್ಧಿವಂತಿಕೆಯನ್ನು ನಾನು ಆಗಿನಿಂದ ವಾಚ್ ಮಾಡುತ್ತಿದ್ದೇನೆ. ಬಹಳಷ್ಟು ಮಾತನಾಡತಕ್ಕಂಥ ಅಭ್ಯಾಸ ಇರತಕ್ಕಂಥ ವ್ಯಕ್ತಿ ಮಾನ್ಯ ಯಡಿಯೂರಪ್ಪನವರು. ಆದರೆ, ಅವರ ಯಾವ ರೀತಿಯಲ್ಲಿ ಗಂಭೀರವಾಗಿದ್ದಾರೆಂದರೆ, ಗಾಡ್ರೆಜ್ ಲಾಕ್ ಹಾಕಿದರೂ ಕೂಡ ಅಷ್ಟು ಟೈಟ್ ಆಗಿರುವುದಿಲ್ಲ. ಆದರೆ, ಅವರು ಅಷ್ಟೊಂದು ಟೈಟ್ ಆಗಿ ಕುಳಿತುಕೊಂಡಿದ್ದಾರೆ. ಅವರನ್ನು ಇವರು ಕೆಣಕಿ ನೋಡಿದರು ಮತ್ತೆ ಅವರ ಬಗ್ಗೆ ಇನ್ನೊಬ್ಬರು ಮಾತನಾಡಿದರು. ಆದರೂ ಅವರು ಸುಮ್ಮನೆ ಇದ್ದಾರೆ. ಯಾರೂ ಕೂಡ ನಿಮ್ಮನ್ನು ಲೀಡರ್ ಆಗುವಂಥದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ನಿಮಗೆ ಇಷ್ಟೇ ಬೇಕಾಗಿರುವುದು. ಈ ಗಾಂಭೀರ್ಯ ಬಂದರೆ you have passed the test.

ಶ್ರೀ ವಾಟಾಳ್ ನಾಗರಾಜ್ :– ನೀವೇನಾದರು ಮಾನ್ಯ ರಮೇಶ್ ಕುಮಾರ್ ಮಾತು ಕೇಳಿ ಮೇಲಕ್ಕೆ ಎದ್ದರೆ ಕೆಡುತ್ತೀರಿ. ಅವರು ಮಹಾ ಪಿತೂರಿ. ನಾನು ನಿಮಗೆ ಸ್ನೇಹಿತನಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ :– ನಾವೂ ಕೂಡ ಅವರ ಸ್ನೇಹಿತರು. ಅವರ ಬಗ್ಗೆ ನಿಮಗೆ ಹೇಗೆ ಗೊತ್ತಿದೆಯೋ ಅದೇ ರೀತಿಯಾಗಿ ನಮಗೂ ಕೂಡ ಅದು ಗೊತ್ತಿದೆ. ಆದ್ದರಿಂದ ನೀವೇನು ಯೋಚನೆ ಮಾಡಬೇಡಿ. ಈಗ ಪ್ರಶ್ನೆ ಏನೆಂದರೆ, CBI was created in 1963 under the Delhi Special Police Establishment Act. Its function was essentially to investigate offences against the public servants of the Central Government. Law and order is a State subject. The State Police obviously, should never be allowed to investigate offences against the

public servants of the Centre. This would have been contrary to the federalism. CBI can thus investigate offences within the State only if States by a specific notification give consent to it. ಆದ್ದರಿಂದ ಅವರಿಗೂ ಮತ್ತು ಎಲ್ಲರಿಗೂ ಗೊತ್ತಿರುವಂಥ ವಿಷಯವಾಗಿದೆ. ಇದರಲ್ಲಿ ಬಹಳ ಉದಾರಿಯಾಗಿದ್ದಂಥವರಲ್ಲಿ ಕೇವಲ ಮಾನ್ಯ ಜಾಲಪ್ಪನವರು ಒಬ್ಬರೆ ಅಲ್ಲ. ಉದಾರಿಯಾಗಿದ್ದಂಥ ಮಾನ್ಯ ದೇವರಾಜ ಅರಸುನವರಿಗೆ ಏನೆಲ್ಲಾ ಆಗಿದೆ ಎಂಬುದು ತಮಗೆಲ್ಲಾ ಗೊತ್ತಿದೆ. ಆದ್ದರಿಂದಲೇ ಸರ್ಕಾರಿಯಾ ಕಮಿಷನ್ ಬಂದು, ಮತ್ತೊಂದು ಆಗಿ ಸೋಲುವಂಥ ಪರಿಸ್ಥಿತಿ ಬಂದಾಗ ಅವರು ಅನಿವಾರ್ಯವಾಗಿ ಈ ನಿರ್ಧಾರವನ್ನು ತೆಗೆದುಕೊಂಡರು. ಸಿ.ಬಿ.ಐ.ನವರು ನಮ್ಮ ಒಪ್ಪಿಗೆಯನ್ನು ಪಡೆಯದೆ ರಾಜ್ಯ ಸರ್ಕಾರದ ಕಾನೂನು ಸುವ್ಯವಸ್ಥೆ ಮೊದಲಾದಂಥ ವಿಚಾರದಲ್ಲಿ ನೀವು ಮಧ್ಯ ಪ್ರವೇಶ ಮಾಡತಕ್ಕಂಥ ಅಧಿಕಾರವಿಲ್ಲ ಎನ್ನತಕ್ಕಂಥ ನಿರ್ಣಯ ಕೂಡ ಮಾಡಿದ್ದರು. ಇದನ್ನು ಏನಾದರೂ ಕಾಂಟ್ರಡಿಕ್ಟ್ ಆಗಿ ಬೇರೆ ರೀತಿಯಲ್ಲಿ ತೆಗೆದುಕೊಂಡರೆ ನಿಮಗೆ federalism ಬಗ್ಗೆ ಎಷ್ಟೂ ಗೌರವ ಇಲ್ಲ ಎನ್ನುವುದಾದರೆ, ನೀವು ಕೇಂದ್ರ ಸರ್ಕಾರದ ಅಧಿಕಾರಿಗಳ ವಿರುದ್ಧವಾಗಿ ಮತ್ತು ಅಲ್ಲಿಯ ಮಂತ್ರಿಗಳ ವಿರುದ್ಧವಾಗಿ ಸಿಬಿಐ ನವರಿಗೆ ತನಿಖೆ ಮಾಡುವಂಥ ಅಧಿಕಾರ ಇರುವುದಾದರೆ, ನಮ್ಮ ರಾಜ್ಯದ ವ್ಯಾಪ್ತಿಯಲ್ಲಿ ಬರತಕ್ಕಂಥ ಸಿಓಡಿ ಯವರು ಕೇಂದ್ರ ಸರ್ಕಾರದ ಅಧಿಕಾರಿಗಳು ಕೇಂದ್ರ ಸರ್ಕಾರದ ಮಂತ್ರಿಗಳ ಮೇಲೆ ಏಕೆ ಇನ್‌ವೆಸ್ಟಿಗೇಶನ್ ಮಾಡಬಾರದೆಂದು ಹೇಳಿದರೆ ಏನು ಗತಿಯಾಗುತ್ತದೆ? ಇದೂ ಕೂಡ ತಾರ್ಕಿಕವಾಗಿ, ಅಸಂಬದ್ಧವಾಗುತ್ತದೆ. ಆ ಕಾರಣಕ್ಕಾಗಿಯೇ ಎಲ್ಲದಕ್ಕೂ ಸಿಬಿಐ ಎನ್ನತಕ್ಕಂಥ ಪ್ರಶ್ನೆ ಬರುವುದಿಲ್ಲ. ನಾನು ಬಹಳ ವಿವರವಾಗಿ ಹೋಗಬೇಕಾಗಿರತಕ್ಕಂಥಾದ್ದು ಇಲ್ಲ. ಹಿಂದೆ ವೀರಪ್ಪನ್ ಕೇಸ್‌ನಲ್ಲಿ ಏನೆಲ್ಲಾ ಹೇಳಿದ್ದಾರೆಂಬುದರ ಬಗ್ಗೆ ಹಿಂದೆ ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಅವತ್ತಿನ ಮುಖ್ಯ ಮಂತ್ರಿಗಳಾಗಿದ್ದಂಥ ಮಾನ್ಯ ಕೃಷ್ಣರವರು ಮತ್ತ ಅವತ್ತಿನ ಗೃಹ ಮಂತ್ರಿಗಳಾಗಿದ್ದಂತಹ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಬಹಳ ಸಮರ್ಥರಾಗಿದ್ದಂಥ ಪೊಲೀಸ್ ಅಧಿಕಾರಿಗಳು ಕರ್ನಾಟಕದಲ್ಲಿದ್ದಾರೆ. ಮತ್ತೆ ಕರ್ನಾಟಕದಲ್ಲಿದ್ದಂಥ ಅನೇಕ ಪೊಲೀಸ್

ಅಧಿಕಾರಿಗಳು ಸಿಬಿಐ ಕಡೆಗೂ ಹೋಗುತ್ತಾರೆ. ಜೋಗಿಂದರ್ ಸಿಂಗ್, ರೇವಣ ಸಿದ್ದಯ್ಯನವರು ಮತ್ತು ಕಾರ್ತಿಕೇಯನ್ ಕೂಡ ಸಿಬಿಐಗೆ ಹೋಗಿದ್ದರು. ಇವರು ಇಲ್ಲಿ ಹೋಗಿದ್ದಾರೆ ಎಂದ ತಕ್ಷಣ ಇಲ್ಲಿಯ ಮೇಲೆ ಅವರ ಪ್ರಭಾವ ಆಗುತ್ತದೆ, ಅವರ ಮೇಲೆ ಇವರ ಪ್ರಭಾವ ಆಗುತ್ತದೆಂದು ಪರಿಭಾವಿಸಬಾರದು. ಆ ಸಂದರ್ಭದಲ್ಲಿ ಹೇಳುತ್ತಾರೆ. 23–11–2000 ರ ಸಂಯುಕ್ತ ಕರ್ನಾಟಕದಲ್ಲಿ ಕನ್ನಡ ವರನಟ ಡಾ॥ ರಾಜಕುಮಾರ್ ಅವರ ಅಪಹರಣ ಹಾಗೂ ಬಿಡುಗಡೆ ಪ್ರಕರಣಕ್ಕೆ ಸಂಬಂಧಿಸಿದಂತೆ, C.B.I. ಅಥವಾ ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕೆನ್ನುವ ಪ್ರತಿಪಕ್ಷಗಳ ಬೇಡಿಕೆಯನ್ನು ಮಾನ್ಯ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ರಾಜ್ಯ ವಿಧಾನಸಭೆಯಲ್ಲಿ ಸಾರಾಸಗಟಾಗಿ, ಸ್ಪಷ್ಟವಾಗಿ ತಿರಸ್ಕರಿಸಿದರು. ಅದರ ವಿವರಗಳಿಗೆ ನಾನು ಹೋಗುವುದಿಲ್ಲ. ಆದ್ದರಿಂದ ಅವತ್ತು, ಯಾವ್ಯಾವ ಕಾರಣಗಳ ಮೂಲಕವಾಗಿ ತಾವು C.B.I. ಅಸಮರ್ಥರು ಎಂದು ಹೇಳುವುದಿಲ್ಲ. Not that I love CBI less but I love COD more ಅನ್ನುವಂತಹ ರೀತಿಯಲ್ಲಿ ಹಿಂದೆ ಸೀಜರನ ಬಗ್ಗೆ ಕಥೆಯನ್ನು ಹೇಳುವ ರೀತಿಯಲ್ಲಿ, Not that I love Ceasor less but I love Rome more ಎಂದು ಹೇಳಿದರು. ಹಾಗೆಯೇ ಇಲ್ಲಿ ಕೂಡ ಸಂಬಂಧಪಡತಕ್ಕಂಥದ್ದು ನಮ್ಮ C.O.D. ಯಲ್ಲಿ ಕೂಡ ಸಮರ್ಥರಾದ ಅಧಿಕಾರಿಗಳಿದ್ದಾರೆ. ಮತ್ತು ಈ ಆಯೋಗದ ಮೂಲಕವಾಗಿ ಕೆಲಸವನ್ನು ಮಾಡಬೇಕಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– Not that I love Ceasor less but I love Rome more, ಅಂತ,....

ಶ್ರೀ ಎಂ.ಪಿ. ಪ್ರಕಾಶ್ :– ಅದನ್ನು ಆಂಟೋನಿಗೆ ಬ್ರೂಟಸ್ ಹೇಳುತ್ತಾನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಏನಪ್ಪಾ ನೀನೂ ಬಂದು ಬಿಟ್ಟಿದ್ದಿಯಾ ನನ್ನನ್ನು ಕೊಲ್ಲುವುದಕ್ಕೆ ಎಂದು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :– Because he was dare and angry looking ಎಂದು ಅಥೆನ್ಸ್ ಅವರು ಹೇಳುತ್ತಾರೆ.

ಶ್ರೀ K.M. ಶ್ರೀನಿವಾಸಗೌಡ :- ಅದರಲ್ಲಿ ಈ ಆಯೋಗವು ಕೂಡ motiveless malignity ಇರುತ್ತದೆ. ಆ motiveless malignity ಯಿಂದಲೇ ಇವೆಲ್ಲಾ ಆಗುತ್ತವೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ.ಪ್ರಕಾಶ್ :- ಆದ್ದರಿಂದ ಬರೀ C.B.I. ಗೆ ಕೊಟ್ಟ ತಕ್ಷಣವೇ ಏನಾಲ್ಲಾ ಆಗಿ ಬಿಡುತ್ತದೆ ಎನ್ನತಕ್ಕಂಥಾದ್ದರ ಬಗ್ಗೆ ನಾವು ಹೇಳಬೇಕಾಗಿರತಕ್ಕಂಥಾದ್ದು ಅಲ್ಲ. JMM leaders ಗೂ ಸಿಬು ಸೂರೇನ್‌ಗೂ ಏನಾಯಿತು? ಅದು ಆದ ನಂತರ defreezing ಆಗಿರತಕ್ಕಂಥ Italian account ಬಗ್ಗೆ ಏನಾಯಿತು? ಇವೆಲ್ಲವು ಕೂಡ ಏನು ಹೇಳುತ್ತವೆಂದರೆ, ಸತೀಶ್ ಶರ್ಮಾನ ಮೇಲೆ ಕೇಸ್‌ನ್ನು ಹಾಕಬೇಕೆಂದು C.B.I. ವರದಿಯನ್ನು ಕೊಟ್ಟಿತು. ಆತನ ಮೇಲೆ charge sheet ಹಾಕಬೇಕೆಂದು ಮಾಡಿದರು. ಆದರೂ ಕೂಡ ಅದಕ್ಕೆ ಕೇಂದ್ರ ಸರ್ಕಾರ permission ಕೊಡಲಿಲ್ಲ. "The CBI recommended to filing of the criminal case against Satish Sharma for nepotism in petrol pump allotments. It asked for a sanction from the Centre as no survey was required."

ಶ್ರೀ ಮಲ್ಲಿಕಾರ್ಜುನ ಖರ್ಗೆ :- Central Government ನಲ್ಲಿದ್ದವರು ಮತ್ತು M.P.ಗಳಾಗಿದ್ದವರ ಬಗ್ಗೆ ನಾವು ಮಾತನಾಡುವುದಲ್ಲ. ಆಪಾದನೆಯನ್ನು ನಿಮ್ಮ ಮಿತ್ರ ಪಕ್ಷದ ಒಬ್ಬ M.L.C. ಮಾಡಿದ್ದಾನೆ. ಅದಕ್ಕೆ Jurisdiction ಕೂಡ ಇದರಲ್ಲಿ export involve ಇದೆ. ಕೇಂದ್ರ ಸರ್ಕಾರದ Forest Act ಕೂಡ involve ಇದೆ. Mines Act involve ಇದೆ. State ಗೆ ಸಂಬಂಧಪಟ್ಟಂತೆಯೂ ಇದೆ, Central Jurisdiction ಗೂ ಬರುವಂಥಾದ್ದು ಇದೆ. ಆ ದೃಷ್ಟಿಯಿಂದ ನಾವು C.B.I. enquiry ಕೇಳಿದ್ದೇವೆ. C.B.I. enquiry ಮಾಡುತ್ತೀರೋ ಇಲ್ಲವೋ ಅದನ್ನು ಹೇಳಿ. ಪದೇ ಪದೇ ಸಿಬು ಸೊರೇನ್, ಆಮೇಲೆ ನಿಮ್ಮ ಶರ್ಮಾನ ಬಗ್ಗೆ, ಅದನ್ನು ತೆಗೆದುಕೊಂಡು ಏನು ಮಾಡುತ್ತೀರಿ? ಅದು ಬಂದಾಗ ಸಂದರ್ಭಾನುಸಾರ ನೋಡೋಣ. ಎಷ್ಟೋ ಸಲ refer ಮಾಡಿದ್ದೇವೆ. ಎಷ್ಟೋ ಸಲ reject ಕೂಡ ಮಾಡಿದ್ದೇವೆ. ನೀವೆ ಮೊನ್ನೆ ಬೇಕಾದಾಗ 26 ವಿದ್ಯಾರ್ಥಿಗಳ

ಬಗ್ಗೆ refer ಮಾಡಿಲ್ಲವೆ? ಬೇಡ ಅದಕ್ಕೂ ಬಿಡಿ. ಈ ಕೇಸ್‌ನಲ್ಲಿ ರಾಜ್ಯದ ಹಿತದೃಷ್ಟಿಯಿಂದ ಮತ್ತು ಸೀರಿಯಸ್ ಅಲಿಗೇಶನ್ ಮಾಡಿದ್ದಕ್ಕಾಗಿ ತಾವು refer ಮಾಡುತ್ತಿರೋ ಇಲ್ಲವೋ ಒಂದೇ ಮಾತನ್ನು ಹೇಳಿ. ಯು.ಎಲ್.ಭಟ್ ಬಗ್ಗೆ ಹೇಳಿದ್ದು ಇವೆಲ್ಲಾ ಬೇರೆ. ನಾವು ಆ ಭಟ್ ಆಯೋಗವನ್ನೂ ಒಪ್ಪಿಲ್ಲ. ಈಗ ಇರತಕ್ಕಂಥ ಲೋಕಾಯುಕ್ತರ ಬಗ್ಗೆ ನಮಗೆ ವಿಶ್ವಾಸವಿಲ್ಲವೆಂದು ಹೇಳಿದರೆ ಅದು ಇದಕ್ಕೆ ಅಸಂಬದ್ಧ, unnecessary, ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ ಎನ್ನತಕ್ಕಂಥ ವಾದವನ್ನು ಇಟ್ಟುಕೊಂಡು ಬಂದಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಒಪ್ಪುತ್ತೇನೆ. ಆದರೆ ಇಲ್ಲಿ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿದ್ದರೆ ನಮ್ಮ ಸಮಯವು ಕೂಡ ಉಳಿಯುತ್ತಿತ್ತು. ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಎತ್ತಿದ್ದರಿಂದ ಆಕೆಡೆಮಿಕ್ ಆಗಿ ಉತ್ತರವನ್ನು ಕೊಡಬೇಕಾಗುತ್ತದೆ. ತಮ್ಮ ಪಕ್ಷದ ಹಿರಿಯರಾದ ಮಾನ್ಯ ರಮೇಶ್‌ಕುಮಾರ್‌ವರು ಅದರ ಪ್ರಭಾವಳಿಯನ್ನು ತೋರಿಸಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅದು ಏನಾಗಿದೆ ಎಂದರೆ, ನಿಮ್ಮ ಇಬ್ಬರದ್ದು training 20 ವರ್ಷ ಒಂದೇ ಕಡೆ ಆಗಿದೆ. ಇದರ ಬಗ್ಗೆ ನಮಗೆಲ್ಲಾ confirm ಆಗಿದೆ. ಅದಕ್ಕಾಗಿ ನಾವೆಲ್ಲರೂ ಸೇರಿ ಒಂದೇ ಪ್ರಶ್ನೆಯನ್ನು ಕೇಳುತ್ತಿದ್ದೇವೆ. ಅದು ಆಗುತ್ತದೋ ಇಲ್ಲವೋ ಎನ್ನುವುದನ್ನು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :- ಇದು ಎಲ್ಲಾ ಬೇಡ ಸರ್, ನಾನು ಆ ವಿಷಯಕ್ಕೆ ಬಂದು ಬಿಡುತ್ತೇನೆ. ನಾವು ಏನು ಅಸಹಾಕಾರ ಕೊಟ್ಟಿದ್ದೇವೆ ಎನ್ನುವಂಥ ಪ್ರಶ್ನೆ ಇಲ್ಲ. ಮಾನ್ಯ ಆಯೋಗದ ಆಯುಕ್ತರು ಜಾಹೀರಾತನ್ನು ಕೂಡ ಕೊಟ್ಟರು. ಜಾಹೀರಾತನ್ನು ಕೊಟ್ಟಂಥ ಸಂದರ್ಭದಲ್ಲಿ ಆಪಾದನೆ ಮಾಡಿರತಕ್ಕಂಥ ಫಿರ್ಯಾದಿದಾರನು ಕೂಡ ಈ ವಿಚಾರದ ಬಗ್ಗೆ ಅವರ ಮುಂದೆ ಹಾಜರಾಗಲಿಲ್ಲ. ಮತ್ತೆ ತಾವಂತೂ ಕೂಡ ಅವತ್ತೇ ನೇರವಾಗಿ ಹೇಳಿದಿರಿ ಮತ್ತು ರಾಷ್ಟ್ರಪತಿಗಳಿಗೆ ಮನವಿಯನ್ನು ಕೊಟ್ಟಿರುತ್ತೀರಿ. ನಮಗೆ ಆ ಆಯೋಗದ ಬಗ್ಗೆ ವಿಶ್ವಾಸವಿಲ್ಲ, ಆದ್ದರಿಂದ ಆ ಆಯೋಗದ ಮುಂದೆ ಹಾಜರಾಗುವುದಿಲ್ಲವೆನ್ನುವ ಮಾತನ್ನು ಕೂಡ ಹೇಳಿರುತ್ತೀರಿ. ಆದರೆ ಉಳಿದಂಥ ಸಾರ್ವಜನಿಕರು ಮತ್ತು ನಮ್ಮ ಅಧಿಕಾರಿಗಳು

ಏನಿದ್ದಾರೆ, ಅವರು ಎಲ್ಲ ತರಹದ ಕಡತಗಳನ್ನು ಅವರಿಗೆ ಕೊಟ್ಟು ಹೇಳಿಕೆಗಳನ್ನು ಕೂಡ ಕೊಟ್ಟರು. ಒಬ್ಬರೆ ಒಬ್ಬ ವ್ಯಕ್ತಿ ಅವರ ಮುಂದೆ ನಿಂತು 2000 ದಿಂದ ಇಲ್ಲಿಯವರೆಗೆ ಆಗಿರತಕ್ಕಂಥ ವಿಚಾರಗಳ ಬಗ್ಗೆ ಕೊಟ್ಟಿರತಕ್ಕಂಥವರು ನಮ್ಮ ಪಕ್ಷದ ವಕ್ತಾರರು, ವಿಧಾನ ಪರಿಷತ್ತಿನ ಸದಸ್ಯರಾದ ಸನ್ಮಾನ್ಯ ವೈ.ಎಸ್.ವಿ.ದತ್ತಾರವರು. ಅದು ಆದ ನಂತರ ಪಾಪ ಅವರಿಗೆ ಅನಿವಾರ್ಯವಾಗಿ, ಕೇಂದ್ರ ಸರ್ಕಾರ ಮತ್ತು ಎಲ್ಲರಿಗೂ ಕೂಡ ಬರೆದೆವು. ಅವರಿಂದ ಯಾವುದೆ ಉತ್ತರ ಬರದಿರುವುದರಿಂದ ನಮ್ಮಿಂದ ಒಂದೆ ಬೇಸರವಾಗಲಿಲ್ಲ, ಈ ತರಹದಲ್ಲಿ ಸಾರ್ವಜನಿಕರಿಂದ ಸಹಕಾರ ಸಿಗಲಿಲ್ಲವೆನ್ನುವ ಕಾರಣಕ್ಕಾಗಿಯೆ ಅವರು ರಾಜೀನಾಮೆಯನ್ನು ಕೊಡತಕ್ಕಂಥ ಮಾತು ಎಂದು ನೀವು ಹೇಳುತ್ತಿದ್ದೀರಿ. ರಾಜೀನಾಮೆಯನ್ನು ಅವರು ಕೊಟ್ಟಿಲ್ಲ. ಅವರು ಪತ್ರದಲ್ಲಿ ಹೇಳಿರತಕ್ಕಂಥದ್ದು ಈ ರೀತಿಯಾಗಿ ಕಾರ್ಯದರ್ಶಿಗಳಿಗೆ ಬರೆಯುತ್ತಾರೆ. ಅವರ ಪತ್ರವನ್ನು ಓದುತ್ತೇನೆ. 7ನೇ ತಾರೀಖು ಮಾರ್ಚ್, ನಮ್ಮ ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಯವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. "Dear Sri Mahendra Jain, We may recall the Commission Secretary wrote to you on 30.12.2006 seeking extension of time to furnish the report of the Commission which was due to expire on 21.01.2007. As per practice and Section 7 of the 1952 Act, the work of the Commission is to be proceeded with awaiting appropriate Government Notification. Some newspapers of yesterday publish a report indicating that the Government is thinking of winding up the commission. I have no reason to doubt the correctness of the news report. In the circumstances, I do not wish to continue to function as the Commission or to await the Government Notification under Section 7. This is to inform you that I will seize to attend to the work of the Commissio from tomorrow. I have instructed the driver made

available for my use not to report to me from tomorrow. The Cell phone made available to me is returned herewith. I thank you and Sri Pattana Shetty for all the courtesy hitherto extended to me. Kindly acknowledge." This is the letter on 7th of March. ಅಲ್ಲಿ ಅವರ ರಿಪೋರ್ಟ್ ಕೂಡ ಏನು ಎಂದು ನಾನು ಹೇಳಬೇಕಾದದ್ದು ಇಲ್ಲ. ನಾವು ಅವರ ಬಗ್ಗೆ ಬಹಳ ಗಂಭೀರವಾಗಿ ಅವರಿಗೆ ಕೊಟ್ಟಿರುವ ಅವಧಿಯನ್ನು ಹೆಚ್ಚಿಸಬೇಕೆನ್ನುವ ವಿಚಾರದಲ್ಲಿ ತಿರಸ್ಕಾರ ಮಾಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅವರು co-operation ಕೊಡದಿರುವಾಗ ಅವರು ಏನೆಂದು ಪತ್ರವನ್ನು ಬರೆಯುತ್ತಾರೆ. ಇದೆ ರೀತಿಯಾಗಿ ಪತ್ರವನ್ನು ಬರೆಯುವುದು.

ಶ್ರೀ ಎಂ.ಪಿ. ಪ್ರಕಾಶ್ :- ತಮಾಷೆ ಏನೆಂದರೆ, ಯಾರೂ ಸಹಕಾರವನ್ನು ಕೊಡಲಿಲ್ಲ. ನೋಡಿ ಇದು ಹೇಗಿದೆ ತಮಾಷೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಿಮ್ಮ ಉತ್ತರ ಏನೂ ಇಲ್ಲ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, 150 ಕೋಟಿ ರೂ.ಗಳ ಆಪಾದನೆಯನ್ನು ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಜನಾರ್ಧನ ರೆಡ್ಡಿಯವರು ಮಾಡಿದ್ದಾರೆ. ಎರಡು ಸದನದಲ್ಲಿ ಚರ್ಚೆಯಾಗಿದೆ. C.B.I. ಗೆ ವಹಿಸಿಕೊಡಬೇಕೆಂದು ನಾವು ಕೂಡ ವೆಲ್‌ನಲ್ಲಿದ್ದೆವು. ಆಗ ತಾವು ಏನು ಮಾಡಿದಿರಿ, ಇದರ ಬಗ್ಗೆ C.B.I. enquiry ಆಗುವುದಕ್ಕೆ ಸಾಧ್ಯವಿಲ್ಲ. ಭಟ್ ಅವರ ನೇತೃತ್ವದಲ್ಲಿ Commission ನೇಮಕ ಮಾಡುತ್ತೇವೆಂದು ಹೇಳಿದಿರಿ, ತಾವೇ ಮಾಡಿದ್ದು. ನಾವು ಏನು ಹೇಳಿದ್ದು ಎಂದರೆ, ಭಟ್ Commission ನ್ನು ತಾವು ಯಾವಾಗ ನೇಮಿಸಿದಿರಿ. Terms of Reference ದಲ್ಲಿ 150 ಕೋಟಿ you have not included. ಒಂದು ಪತ್ರಿಕಾಗೋಷ್ಠಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಏನಾಯಿತು ಎಂದರೆ, 150 ಕೋಟಿ ರೂ.ಗಳ ಮೇಲೆ ಇರತಕ್ಕಂಥಾದ್ದು. ಅವರು Terms of Reference ನಲ್ಲಿ ಸೇರಿಸದಿರುವುದಕ್ಕೆ ನಾವು ಹೇಳಿದೆವು,

ನೀವು ಒಂದು ಆಯೋಗಕ್ಕೆ ಸಹಕಾರವನ್ನು ಮಾಡುವುದಿಲ್ಲ. ಆಯೋಗ ಎಲ್ಲೆಲ್ಲಿ ಹೋಗುತ್ತದೆ ನಾವು ಅಲ್ಲಿ ಎಲ್ಲಾ ಕಡೆ ಪ್ರತಿಭಟನೆಯನ್ನು ಮಾಡುತ್ತೇವೆ ಎನ್ನುವ ಪ್ರತಿಭಟನೆಯನ್ನು ನಾವು ಮಾಡಿದ್ದೇವೆ. ಭಟ್ ಅವರ ಬಗ್ಗೆ ಅಲ್ಲ, ಇವತ್ತು ಸದನದಲ್ಲಿ ಪ್ರಶ್ನೆ ಏನು ಇದೆ ಎಂದರೆ, ನಿಲುವಳಿ ಸೂಚನೆಯನ್ನು ನಾವು ಏನು ಕೊಟ್ಟಿದ್ದೇವೆ. ಭಟ್ ಕಮಿಷನ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಇವತ್ತು ಭಟ್ ರದ್ದು ಮಾಡುವಂಥಾದ್ದು ಏನಿದೆ, ಇವತ್ತು ಲೋಕಾಯುಕ್ತಕ್ಕೆ ಕೊಡಬೇಕಾಗಿದ್ದರೆ ಆವತ್ತೆ ಕೊಡಬೇಕಾಗಿತ್ತು. ನಮಗೆ ಏನು ಅನಿಸುತ್ತದೆ, ಇವತ್ತು ಭಟ್‌ರವರು ಮೊದಲೇ ಪತ್ರದಲ್ಲಿ ಬರೆದರು. ಪ್ರಸ್ತುತ ಪೊಲೀಸ್ ಇಲಾಖೆಯ ಸಹಾಯವಿಲ್ಲದೆ ಮಾಡುವುದಕ್ಕಾಗುವುದಿಲ್ಲ. ಎಲ್ಲಾ ಮಂತ್ರಿಗಳ ಮೇಲೆ ಇರತಕ್ಕಂಥ ಆರೋಪವನ್ನು ಸಾಬೀತು ಮಾಡತಕ್ಕಂಥ ರೀತಿಯಲ್ಲಿ ನಮಗೆ ಬಹಳಷ್ಟು ವಿವರಗಳು ಬೇಕಾಗುತ್ತದೆ. ಗಣಿ ಇಲಾಖೆಗೆ ಪತ್ರವನ್ನು ಬರೆದರು. Forest Department ಗೆ ಪತ್ರವನ್ನು ಬರೆದರು. ಎಲ್ಲಿ ಕೂಡ ಸಹಕಾರ ಸಿಗುತ್ತಿಲ್ಲ, ನನಗೆ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲವೆನ್ನುವ ಮಾತನ್ನು ಹೇಳಿದಾಗ, ನಾವು ಕೂಡ ಒಂದು Press Conference ಮಾಡಿ ಇವತ್ತಿನ ದಿವಸ ಸರ್ಕಾರ ನೇಮಕ ಮಾಡಿರುವ ಈ ಒಂದು ಆಯೋಗಕ್ಕೆ ಸಹಕಾರವನ್ನು ಕೊಡುತ್ತಿಲ್ಲವೆನ್ನುವ ಮಾತನ್ನು ಅವರು ಹೇಳಿದ್ದಾರೆ. ಅವರ ಪತ್ರ ವ್ಯವಹಾರ ಏನೇನು ಇದೆ. ಇವತ್ತು ಹೌಸ್‌ನಲ್ಲಿ ತಾವು ಇದ್ದೀರಿ. ಯಾವ ರೀತಿಯಾಗಿ ಮಾಡಿದಿರಿ, ಇದರಿಂದ ನಮಗೆ ಏನಾಗುತ್ತದೆ. ಇವತ್ತು ಭಟ್ ಅವರ ನಿಲುವು ಏನಿದೆ. ಇವತ್ತು ನಾವು ಕೂಡ C.B.I. ತನಿಖೆಗೆ ಕೇಳಿ ಅವರಿಗೆ ವಹಿಸಿ ಕೊಡಬೇಕೆಂದು ಕೇಳಿದ್ದೇವೆ. ಭಟ್ ಅವರು ಕೂಡ ಅದೇ ವಿಚಾರಕ್ಕೆ ಬಂದಿದ್ದಾರೆ. ಆದ್ದರಿಂದ ನಿಮ್ಮ ಸರ್ಕಾರಕ್ಕೆ ನಡುಕ ಹುಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಅನುಮಾನ ಬಂದಿದೆ. ಇವತ್ತು ಯಾವ ಆಧಾರದ ಮೇಲೆ ನಿವೃತ್ತ High Court judge ಅವರನ್ನು ನೇಮಕ ಮಾಡಿ, ಇವತ್ತು ಅದನ್ನು ರದ್ದು ಮಾಡತಕ್ಕಂಥ ರೀತಿಯಲ್ಲಿ ಇಡೀ ನ್ಯಾಯಾಂಗಕ್ಕೆ ಅವಮಾನ ಸರ್ಕಾರದಿಂದ ಮಾಡಿದ್ದೀರಿ. ಈ ಸರ್ಕಾರದವರು ಇಡೀ ನ್ಯಾಯಾಂಗಕ್ಕೆ ಅವಮಾನವನ್ನು ಮಾಡಿದ್ದಾರೆ. ನಿಮಗೆ ನ್ಯಾಯಾಂಗದ ಮೇಲೆ ಭರವಸೆ ಇಲ್ಲ. ಅದಕ್ಕಾ ನಾವು

ಈ ಮಾತನ್ನು ಕೇಳಿದ್ದೇವೆ. ಅದಕ್ಕೆ ತಕ್ಕ ಉತ್ತರ ಬಂದಿಲ್ಲ. ನೀವು ಇದನ್ನು ಸಿಬಿಐಗೆ ಕೊಡುವುದಕ್ಕೆ ಪರ್ಮಿಶನ್ ಬೇಕು ಎಂದು ನಮಗೂ ಗೊತ್ತಿದೆ. ಮಾನ್ಯ ಪ್ರಕಾಶ್‌ರವರೆ, ಅದಕ್ಕೇ ನಾವು ಹೇಳುವುದೇನೆಂದರೆ, ನಿಮ್ಮ ಸರ್ಕಾರದ ಮೇಲೆ ಇವತ್ತು ಜವಾಬ್ದಾರಿಯುತವಾದಂತಹ ಒಂದು ನಿರ್ವಹಣೆಯನ್ನು ಮಾಡುವುದಕ್ಕಾಗುತ್ತಿಲ್ಲ. ತಾವು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ಇವತ್ತಿನ ದಿವಸ ತಮ್ಮ ಏನು ನಿರ್ಧಾರವಿದೆ, ಅದಕ್ಕೆ ನಾವು ಬೇಸತ್ತು ವಾಕ್ ಔಟ್ ಮಾಡುತ್ತೇವೆ.

ಉಪಾಧ್ಯಕ್ಷರು :– ಈಗ ಚರ್ಚೆ ಮುಗಿಯಿತು. ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಶ್ರೀ ಎಂ.ಪಿ. ಪ್ರಕಾಶ್ :– ಯಾರೊಬ್ಬ ವ್ಯಕ್ತಿಯ ಮೇಲೆ witch-hunting ಆಗಬಾರದು. ಇದು ಸೇಡಿನ ಕ್ರಮವಾಗಬಾರದು. ಈ ವಿಷಯದಲ್ಲಿ ತಾವು ಏನು ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ನಾವು ಗಂಭೀರವಾಗಿ ಆಲೋಚನೆಯನ್ನು ಮಾಡುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ :– ಉತ್ತರ ಮುಗಿದಿಲ್ಲ, ಅದನ್ನು ಮುಗಿಸಿ ಸಾರ್.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– terms of reference ನಲ್ಲಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಯಾವುದೇ witch-hunting ಮಾಡಬಾರದು. ಯಾರ ಮೇಲೂ ಕೂಡ witch-hunting ಮಾಡಬಾರದು. ಅದು ಸರಿಯಾದುದಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :– ನಾನು ಏನು ಕೆಲವು specific ಆಗಿ ಕೆಲವು points ಹೇಳಿದ್ದೇನೆ, ಅದರ ಬಗ್ಗೆ ತಾವು ಗಮನಿಸಬೇಕು. ಏನು ಮಾಡುತ್ತೀರಿ ನನಗೆ ನಿಂತುಕೊಳ್ಳಲು ಆಗುತ್ತಿಲ್ಲ.

ಶ್ರೀ ಎನ್. ಚೆಲುವರಾಯಸ್ವಾಮಿ :– ನಿಮಗೆ ಸ್ಪಂದಿಸಿದ ಮೇಲೆ ನೀವು ಕುಳಿತುಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ :– ನಿಮಗೆ ಸ್ಪಂದಿಸಿದ ಮೇಲೆ ನೀವು ಕುಳಿತುಕೊಳ್ಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ :- ಪಾರ್ಟಿಸನ್...

(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ. ಪ್ರಕಾಶ್ :- ಸನ್ಮಾನ್ಯ ವಿರೋಧಪಕ್ಷದ ನಾಯಕರು terms of reference ನ ವಿಚಾರದಲ್ಲಿ ನೀವು 150 ಕೋಟಿ ರೂಪಾಯಿಗಳನ್ನು ಕಾಣಿಸಿಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ. 150 ಕೋಟಿ ರೂಪಾಯಿಗಳು ಎನ್ನುವ ಶಬ್ದ ಅಲ್ಲಿ ಇಲ್ಲ. ಅದನ್ನು ಬಿಟ್ಟು ಕೂಡ, " To fix responsibilities and initiate suitable action against all public servants including ministers whether in office or otherwise, its instrumentalities or State owned Companies/Corporations or other bodies and authorities, either in collusion, with private partiers or otherwise for various acts of omission and commission leadingto various illegalities, irregularities, events, and executive decisions set out in clause (i) to (viii), and also pertaining to issues such as; ...."ಇವೆಲ್ಲವನ್ನೂ ಅದರಲ್ಲಿ ಕಾಣಿಸಿದ್ದೇವೆ. ಅಂದರೆ ಅಧಿಕೃತವಾದಂತಹ ರಾಜ್ಯಪತ್ರದಲ್ಲಿ ಅಧಿಸೂಚನೆ ಬರುವವರೆಗೂ ಕೂಡ ಆಗಿರುವಂತಹ ಎಲ್ಲದರ ಬಗ್ಗೆಯೂ ಕೂಡ ತಾವು ಕ್ರಮವನ್ನು ಕೈಗೊಳ್ಳಬೇಕೆನ್ನುವಂತಹ ಮಾತನ್ನು ಹೇಳಿರುವುದರಿಂದ ಖಂಡಿತವಾಗಿಯೂ ಕೂಡ ಅವರೆಲ್ಲರಿಗೂ ಸಂಬಂಧಪಟ್ಟವರಿಗೆ ಅಧಿಕಾರವಿತ್ತು. ಈಗ ಮಾನ್ಯ ವಿರೋಧಪಕ್ಷದ ನಾಯಕರು ಸಭಾತ್ಯಾಗವನ್ನು ಮಾಡಿದ್ದಾರೆ.

ಸಭಾತ್ಯಾಗ ಮಾಡುವಂತಹ ಅಧಿಕಾರ ಅವರಿಗೆ ಇದೆ. ಆದರೂ ಕೂಡ ಬಹಳ ಮುಖ್ಯವಾಗಿ ಇರುವಂತಹ ಲೇಖನಗಳು ಕೆಲವು ಮಾರ್ಗದರ್ಶನ ಸೂತ್ರಗಳು ಬಂದಿವೆ. ಸಿಬಿಐಗೆ ಸಂಬಂಧಪಟ್ಟಂತೆ ಒಬ್ಬ weapon of mass destruction ಎನ್ನುವಂತಹ ಮಾತನ್ನು ಹೇಳುತ್ತಾರೆ. " Ever since the CBI has master the art of scoring more goals and conducting sabotage

in criminal law investigation, It behaves particularly so if the accused are politically powerful and connected with the party in power, the result is the CBI investigation into the offences and the offenders with a political connection depend neither on law nor on facts. It is the political antenna of the CBI that they direct the course of its investigation. If the Government of the day wants the CBI to bend, it is willing to crawl. If the Government wants it to harass a political opponent, the CBI readies for over game. ಆದ್ದರಿಂದ ಈ ತರಹದ ಅನೇಕ ವಿಚಾರಗಳನ್ನು ಅದರಲ್ಲಿ ಕೊಟ್ಟಿರುವುದರಲ್ಲಿ, " The intelligence Agency has used different methodologies of struggling its own cases against a Ruling Party favourites.

i) Go slow on the investigation and let public curiosity be lost in the investigation.

ii) Exploiting media fatigue in an overtrick to allow the investigation to reach a dead end so that a closure report may be filed.

iii) If a charge sheet is to be filed, ask the state sanction given when it is not required. The Government will refuse sanction and kill the case.

ಈ ತರಹದ ಅನೇಕ ವಿಚಾರಗಳನ್ನು ನಾವು ನೋಡಿರುವುದಾಗಿದೆ. ಆದ್ದರಿಂದ ಎಲ್ಲಾ ವಿಚಾರಗಳಿಗೂ ಕೂಡ ಸಿಬಿಐ, it is not a panacea. Hedger Woover, FBI ನ ಮುಖ್ಯಸ್ಥರಾಗಿದ್ದ ಜಾನ್ ಕೆನಡಿಯ ಮೇಲೆ ಮಾಡಿಕೊಂಡಿರತಕ್ಕಂತಹ ಡೋಷಿಯರ್‌ಗಳು, ಅವರು ಕೊಟ್ಟಿರುವಂತಹ ನಿರ್ಣಯಗಳ ವಿರುದ್ಧವಾಗಿಯೇ

ಅನೆಂಡಿಯಾ ಮರ್ಡರ್ ಕೇಸ್‌ನಲ್ಲಿ ಸೇರಿರುವಂತಹ FBI ನ ವಿಚಾರಗಳು ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯಗಳು. ಯಾವುದೂ ಕೂಡ ಈ ಎಲ್ಲಾ ವಿಚಾರಗಳಿಗೆ ಅತೀತವಾಗಿರುತ್ತದೆ ಎಂದು ನಾವು ಭಾವಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಭಟ್‌ರ ಆಯೋಗವನ್ನು ನಾವು ರದ್ದುಪಡಿಸಿದ್ದೇವೆನ್ನುವುದಕ್ಕಿಂತಲೂ ನಾವು ಅನಿವಾರ್ಯವಾದಂತಹ ಸ್ಥಿತಿಯಲ್ಲಿ ಬಂದೆವು. ಆದ್ದರಿಂದ ನಾವು ಯಾವುದೇ ತಪ್ಪನ್ನು ಮಾಡಿಲ್ಲ. ಈ ಸರ್ಕಾರ ಇದರ ಬಗ್ಗೆ ನಿರ್ಣಯವನ್ನು ಕೂಡ ಮಾಡಿದ್ದೇವೆ. ಕರ್ನಾಟಕ ಲೋಕಾಯುಕ್ತ ಅಧಿನಿಯಮದ 7ನೇ ಸೆಕ್ಷನ್ ಕೆಳಗಡೆ ಕೂಡ ಅವರು Chief Minister ಹಾಗೂ Minister ಗಳ ಮೇಲೆ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದೇವೆ. "Subject to the provisions of this Act, the Lokayukta may investigate any action which is taken by or with the general or specific approval of

i) the Chief Minister;

ii) a Minister or a Secretary

iii) a member of the State Legislature;

or any other public servant...." ಎಂದು ಹೇಳಿ ಅದೆಲ್ಲವನ್ನು ಮಾಡಿದ್ದಾರೆ. ಅವರ ಮೇಲೆ ಕ್ರಮವನ್ನು ಕೈಗೊಳ್ಳುವುದಕ್ಕೂ ಬರುತ್ತದೆ. ಅವರು ನೇರವಾಗಿ ಕೇಸುಗಳನ್ನು ಸಹ ಹಾಕಬಹುದು. "Enter and search any building or place where he has a reason to suspect such properties, document, money, billion, jewellery, or other valuable articles or things are kept." ಇಂತಹ ಎಲ್ಲಾ ಅಧಿಕಾರವನ್ನು ಅವರಿಗೆ ಕೊಟ್ಟಿರುವುದರಿಂದ ಅವರು ಎತ್ತಿರುವಂತಹ ವಿಷಯಗಳು, ಅವರಿಗೆ ಏನಾಗಿದೆ ಎಂದರೆ, ಯಾವ ಆಯೋಗದ ವಿರುದ್ಧವಾಗಿ ತಾವು ಸಂಶಯವನ್ನು ವ್ಯಕ್ತ ಮಾಡಿದರು. ಯಾವ ಆಯೋಗದ ವಿರುದ್ಧವಾಗಿ ನಮಗೆ ನ್ಯಾಯ ದೊರಕುವುದಿಲ್ಲವೆಂದು ಪ್ರತಿಪಾದಿಸಿದರು, ಅವರಿಗೆ ತತ್‌ಕ್ಷಣದಲ್ಲಿ ಅವರಿಗೆ ಇವರು ಪ್ರೀತಿ ಪಾತ್ರರಾದರು. ಈ ರೀತಿಯಾದ

ನಿಲುವುಗಳು ಅವರ ಮೂಲ ನಿಲುವುಗಳಿಗೆ ಬದ್ಧರಾಗಿರುವುದಿಲ್ಲ. ಅವರು ಸಹಕಾರವನ್ನು ಕೊಡಬೇಕಾಗಿತ್ತು, ಅವರು ಸಹಕಾರವನ್ನು ಕೊಡಲಿಲ್ಲವೆನ್ನುವಂತಹ ಸಂದರ್ಭದಲ್ಲಿ ನಾವು ಅಂದುಕೊಂಡೆವು, ಒಂದು ವೇಳೆ ನಾವು ಮಾಡುವುದಿಲ್ಲ ವೆಂಬುದು ಒಂದೇ ಅಲ್ಲ, ಮರುದಿವಸದ ಒಂದು ಪತ್ರಿಕಾ ಹೇಳಿಕೆಯನ್ನು ಸಹ ಓದಬಹುದು. ಅವರು ಹೇಳಿದರು ಒಂದು ವೇಳೆ ಸರ್ಕಾರ ಅವಧಿಯನ್ನು ವಿಸ್ತರಿಸಿ ನನ್ನನ್ನೆ ಅಧ್ಯಕ್ಷರನ್ನಾಗಿ ಮುಂದುವರಿಯಬೇಕು ಎಂದು ಹೇಳಿದರೂ ಕೂಡ ನಾನು ಆ ಪದವಿಯನ್ನು ನಿರಾಕರಿಸುತ್ತೇನೆಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಆ ಅನಿವಾರ್ಯ ಸ್ಥಿತಿಯಲ್ಲಿ ಸರ್ಕಾರ ತಯಾರಾಗಿ ಆ ನಿರ್ಧಾರವನ್ನು ತೆಗೆದುಕೊಂಡೆವು. ಅದರಲ್ಲಿ ಸೆಕ್ಷನ್ 7 ಹೇಳುತ್ತದೆ. "Whenever it feels necessary it is not necessary" ಎನ್ನುವುದು ಬಂದಾಗ ಅದನ್ನು ಮಾಡಬಹುದು ಎಂಬುದರ ಕೆಳಗಡೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರ ಜೊತೆಗೆ ಲೋಕಾಯುಕ್ತಕ್ಕೆ ಈ ಜವಾಬ್ದಾರಿಯನ್ನು ವಹಿಸಿಕೊಟ್ಟೆವು. Investigation ಅನ್ನೇ ಮಾಡಲಿಲ್ಲ ಎನ್ನುವುದಾಗಿದ್ದರೆ ಏನು ಮುಚ್ಚಿಕೊಳ್ಳುವಂತಹದ್ದು ಇದೆ, ಅದನ್ನು ಕಣ್ಣೋರೆಸುವ ತಂತ್ರಗಾರಿಕೆಯನ್ನು ಮಾಡಿ ಆಯೋಗವನ್ನು ರಚನೆ ಮಾಡಿದರು. ಅದನ್ನು ಮುಕ್ತಾಯಗೊಳಿಸಿದರು. ಈಗ ಏನೂ ಮಾಡಲಿಲ್ಲವೆನ್ನುವಂತಹ ಅಪವಾದಕ್ಕೆ ನಾವು ಗುರಿಯಾಗಬಾರದು, ಅದು ಯಾವ ತರಹದ ಪರೀಕ್ಷೆ ಇದ್ದರೂ ಕೂಡ ನಾವು ತಯಾರಿದ್ದೇವೆನ್ನುವಂತಹ ಕಾರಣಕ್ಕಾಗಿಯೇ ಲೋಕಾಯುಕ್ತಕ್ಕೆ ಈ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಅವರು ಹೇಳಿದಂತೆ ಆಯೋಗಕ್ಕೆ ಕ್ರಮ ಕೈಗೊಳ್ಳುವಂತಹ charge sheet ಹಾಕುವಂತಹ ಅಧಿಕಾರವಿಲ್ಲ, ಅದು ಸರ್ಕಾರಕ್ಕೆ ಹೋಗಬಹುದು ಎಂದು. ಆದರೆ ಈಗ ಆಯೋಗಕ್ಕೆ ಲೋಕಾಯುಕ್ತಕ್ಕೆ ಕೊಟ್ಟಿರುವುದರಿಂದ ನೇರವಾಗಿ charge sheet ನ್ನು ಹಾಕಬಹುದು. ನಾನು ಆಗಲೆ ಮಾನ್ಯ ರಮೇಶ್ ಕುಮಾರ್‌ರವರಿಗೆ ಹೇಳಿದಂತೆ ಆ ಸಂದರ್ಭದಲ್ಲಿ ಇತ್ತೀಚೆಗೆ ಸಬರ್‌ವಾಲ್‌ರವರು Supreme Court judgement ನಲ್ಲಿ ಈ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಿರುವುದು ಏನಿದೆ, ಅಧಿಕಾರದ ವ್ಯಾಪ್ತಿಯನ್ನು ಮೀರಿರುವಂತಹ ಕೆಲಸವಾಗಿರುವುದರಿಂದ ಸರ್ಕಾರದ ಒಪ್ಪಿಗೆಯನ್ನು ಪಡೆಯುವಂತಹ ಅವಶ್ಯಕತೆ

ಇಲ್ಲವೆಂದು ಹೇಳಿ ಈಗಾಗಲೆ ಅನೇಕ ಕೇಸುಗಳನ್ನು ಅವರು ಕೋರ್ಟಿನಲ್ಲಿ ದಾಖಲು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರಿಗೆ ಸಂಪೂರ್ಣವಾದ ಅಧಿಕಾರವಿದೆ. ಅವರಿಗೆ ನಾವು ಸಂಪೂರ್ಣವಾದ ಅಧಿಕಾರವನ್ನು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ಅವರೆಲ್ಲರಿಗಿಂತಲೂ ಹೆಚ್ಚಾಗಿ ನಾವು ಇದರಿಂದ ಮುಕ್ತರಾಗಬೇಕೆನ್ನುವಂತಹ ಬಯಕೆ ನಮಗೆಲ್ಲರಿಗೂ ಹೆಚ್ಚು ಕಾತುರವಾಗಿದೆ. ಅಪವಾದದಿಂದ ಮುಕ್ತವಾದಷ್ಟು ಒಳ್ಳೆಯದು. ನನ್ನ ಮಟ್ಟಿಗೆ ಹೇಳುವುದಾಗಿದ್ದರೆ ವಿರೋಧಪಕ್ಷದ ನಾಯಕರಾಗಿರಬಹುದು, ಆಪಾದನೆಯನ್ನು ಮಾಡಿರುವಂತಹ ಜನಾರ್ಧನ ರೆಡ್ಡಿಯವರಾಗಿರಬಹುದು, ಯಾವುದೇ ತರಹವಾಗಿರುವಂತಹ ತನಿಖೆಯನ್ನು ಕೂಡ ಮಾಡಿಸಬಹುದು. ನಾನು ಅದಕ್ಕೆ ತಯಾರಾಗಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ :– ಒಂದು clarification ನಾವು ಕೇಳಬೇಕು. ಈಗ ಯು.ಎಲ್.ಭಟ್‌ರವರು ಒಂದು ಆಯೋಗದ ನ್ಯಾಯಾಧೀಶರಾಗಿ ಕೆಲವು ಖಾಸಗಿ ಮೊಕದ್ದಮೆಗಳಲ್ಲಿ ಹೈಕೋರ್ಟಿನಲ್ಲಿ ಭಾಗವಹಿಸುತ್ತಿದ್ದರು. ಆ ರೀತಿಯಾಗಿ ಭಾಗವಹಿಸುವುದಕ್ಕೆ ಅವರಿಗೆ ಅಧಿಕಾರವಿದೆಯೇ? ಅಷ್ಟೊಂದು ಮಹತ್ತರವಾದಂತಹ ಜವಾಬ್ದಾರಿಕೆ ಹೊತ್ತಿರುವಂತಹ ಸಂದರ್ಭದಲ್ಲಿ ಆ ಸಮಯವನ್ನು ಬದಿಗೊತ್ತಿ ವರದಿಯನ್ನು ತಯಾರು ಮಾಡುವುದರಲ್ಲಿ, ವಿಚಾರಣೆಯನ್ನು ಮಾಡುವುದನ್ನು ಬಿಟ್ಟು ಖಾಸಗಿ ಮೊಕದ್ದಮೆಗಳನ್ನು ತೆಗೆದುಕೊಂಡು ಅಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶವಿತ್ತಾ? ಅದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಿದೆಯೇ? ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದರೆ ಹೇಗೆ ಕೊಟ್ಟಿದ್ದೀರಿ? ಹಾಗಾದರೆ ಕೊಟ್ಟುಬಿಡಿ Law Secretary, Advocate General, Public Prosecutor, ಅವರುಗಳು ಹೋಗಿ private practice ಮಾಡಲಿ ಮತ್ತೇ. ನೀವು ಇದನ್ನು ಏಕೆ ಕೊಟ್ಟಿದ್ದೀರಿ? ಕೊಡದೆ ಇದ್ದರೆ ಹೋಗಿ ಅವರು ಯಾವಾಗ practice ಮಾಡಿದ್ದರು, ಅವರಿಗೆ ಮೊದಲು ಆಸಕ್ತಿ ಇರಲಿಲ್ಲವೇ? ಅದರ ಬಗ್ಗೆ ಸ್ವಲ್ಪ ಸ್ಪಷ್ಟತೆಯನ್ನು ಕೊಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ರಾಮಸ್ವಾಮಿಯವರು ಹೇಳಿದಂತಹ ವಿಚಾರದಲ್ಲಿ ಸರ್ಕಾರಕ್ಕೆ ಈ ವಿಷಯದಲ್ಲಿ ಯಾವುದೇ ಪತ್ರವ್ಯವಹಾರವಾಗಿಲ್ಲ.

ಸರ್ಕಾರ ಇಂತಹ ಪರವಾನಗಿಯನ್ನು ಕೊಟ್ಟಿರುವುದಿಲ್ಲ. ಆಯೋಗ ಪೂರ್ಣಾವಧಿಯ ಕೆಲಸ. ಆ ಸಂದರ್ಭದಲ್ಲಿ ತಮ್ಮ ಹಿಂದೆ ಇರತಕ್ಕಂಥ ಕೆಲವು ವ್ಯಾಜ್ಯಗಳ ಬಗ್ಗೆ ಸುಮಾರು ಐದಾರು ದಿವಸಗಳ ಕಾಲ ವಾದ ಮಂಡಿಸಿರುವ ಮಾಹಿತಿ ಗೊತ್ತಿದೆ, ಅಷ್ಟು ಮಾತ್ರ ನಮಗೆ ಆ ಮಾಹಿತಿಯ ಸತ್ಯಾಸತ್ಯತೆಗಳು ನಮಗೆ ಗೊತ್ತಿಲ್ಲ, ಮತ್ತು ತಾವು ಹೇಳಿದಂತೆ ಒಂದು ಕಾನೂನು ಇಲ್ಲದಿದ್ದರೆ ಕೂಡ the probity requires that they are not supposed to argue an to take up any other person.

6. ಪ್ರಶ್ನೋತ್ತರಗಳು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಅಭಾವ

272 (1957) ಶ್ರೀ ಮೋಹನ್ ಪಿ.ಸಿ., ಎಂಎಲ್‌ಎ (ಚಿಕ್ಕಪೇಟೆ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳು ಸೇರಿದಂತೆ ಪಾಲಿಕೆ ವ್ಯಾಪ್ತಿಯಲ್ಲಿ ಬರಲಿರುವ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಯೋಜನೆಯ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯಡಿ ಈಗಾಗಲೇ ಕೈಗೆತ್ತಿಕೊಂಡಿರುವ ಕಾರ್ಯಕ್ರಮಗಳೇನು;

ಈ) ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಪ್ರದೇಶಗಳನ್ನು ಗುರುತಿಸಲಾಗಿದೆಯೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ ಪ್ರದೇಶಗಳು ಸೇರಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರಲಿರುವ